MADAM SPEAKER :—The Karnataka Provisional Collection of Taxes Bill, 1974 is introduced.*

AFFAIRS OF THE MANGALORE FERTILISERS

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ);- ಮಾನ್ಯ ಅಧ್ಯಕ್ಷರೇ ರೂಲ್ 312ರ ಪ್ರಕಾರ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದು ಮಂಗಳೂರು ಫರ್ಟಿಲೈಸರ್ ಕಾರ್ಖಾನೆಗೆ ಸಂಬಂಧಪಟ್ಟ ವಿಷಯ.

ಅಧ್ಯಕ್ಷರು :- ಇವೊತ್ತು ತಾನೆ ಅದು ಬಂದಿದೆ. ಅದನ್ನು ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ. ಉತ್ತರ ಬಂದ ಮೇಲೆ ಅದನ್ನು ತೆಗೆದುಕೊಳ್ಳುತ್ತೇವೆ.

NEWS ITEM ABOUT NON-INCLUSION OF VIJAYANAGAR STEEL PLANT IN FIFTH PLAN

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :-ಅಧ್ಯಕ್ಷರೆ ಇವೊತ್ತು ಪತ್ರಿಕೆಯಲ್ಲಿ ಒಂದು ವರ್ತಮಾನ ಬಂದಿದೆ. ಅದು ಏನೇಂದರೆ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಕೊಡುವುದಿಲ್ಲ ಎಂದು ಕೇಂದ್ರದಲ್ಲಿ ಹೇಳಿದ್ದಾರೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ ಇದು. ಈ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ತಿಳಿಸಿದರೆ ಒಳ್ಳೆಯದು.

ಅಧ್ಯಕ್ಷರು ;- ಅದನ್ನು ಬರೆದು ಕಳುಹಿಸಿ ನೋಡೋಣ.

Motion of Thanks to the Governor's Address

Debate (*Contd.*)

‡ಶ್ರೀ ಜೆ. ವೆಂಕಟಪ್ಪ (ಶಿಡ್ಲಘಟ್ಟ)

ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ರಾಜ್ಯಪಾಲರು ನಮ್ಮ ರಾಜ್ಯದ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಕುರಿತು ನಮ್ಮ ರಾಜ್ಯ ಸರ್ಕಾರದ ನೀತಿ ಹಾಗೂ ಮುಂದಿನ ವರ್ಷ ರಾಜ್ಯ ಸರ್ಕಾರದವರು ಕೈಗೊಳ್ಳತಕ್ಕ ಕಾರ್ಯಕ್ರಮಗಳ ಬಗ್ಗೆ ಪರಿಚಯ ಮಾಡಿಕೊಡತಕ್ಕ ಪತ್ರವನ್ನು ಭಾಷಣದ ಮುಖಾಂತರ ಕೊಟ್ಟದ್ದಕ್ಕಾಗಿ ಅವರಿಗೆ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ

* Bill appended as Annexures to this volume.

ಈ ಸೂಚನೆಗೆ ನಾನು ನನ್ನ ಬೆಂಬಲವನ್ನು ಕೊಡುತ್ತೇನೆ. ನಮಗೆ ಭಾಷಣದ ಮುಖಾಂತರ ಕೊಟ್ಟಿರತಕ್ಕ ಸೂಚನೆಯ ಬಗ್ಗೆ, ಹಾಗೂ ಸರ್ಕಾರದ ಕಾರ್ಯಕ್ರಮದ ಬಗ್ಗೆ ನೀತಿಯ ಬಗ್ಗೆ ವಿಮರ್ಶೆ ಮಾಡಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಅರ್ಪಿಸುತ್ತೇನೆ. ಈ ಸರ್ಕಾರಕ್ಕೆ ದೇಶದಲ್ಲಿ ಜನತೆ ಎದುರಿಸುತ್ತಾ ಇರತಕ್ಕಂಥಾ ಆರ್ಥಿಕ ಅಸಮಾನತೆ ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕತಕ್ಕಂಥಾ ಕಾರ್ಯಕ್ರಮದ ಆಧಾರದ ಮೇಲೆ ಜನತೆಯನ್ನು ಪ್ರತಿನಿಧಿಸತಕ್ಕ ಅವಕಾಶ ದೊರೆತು ಈ ದಿಶೆಯಲ್ಲಿ ಈ ಸರ್ಕಾರ ಜನತೆಗೆ ಕೊಟ್ಟಂತಹ ಅಶ್ವಾಸನೆಗಳನ್ನು ಈಡೇರಿಸತಕ್ಕ ಪ್ರಯತ್ನಗಳಿಗೆ ಹೆಚ್ಚಿನ ಮನ್ನಣೆ ಕೊಟ್ಟು ಈ ದಿಶೆಯಲ್ಲಿ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನಿರ್ವಹಿತಕ್ಕಂಥಾ ಮಾರ್ಗದಲ್ಲಿ ನಮ್ಮ ಕಾರ್ಯಕ್ರಮಗಳು ರೂಪಿತವಾಗಬೇಕಾದ್ದು ಅವಶ್ಯಕ. ಈ ದಿಶೆಯಲ್ಲಿ ನಮ್ಮ ಕಾರ್ಯಕ್ರಮಗಳು ಯಶಸ್ವಿಯಾಗಿ ಆಗದಂತೆ, ಫಲಪ್ರದವಾಗಿ ಆಗದಂತೆ ಮಾಡಲು ಕೆಲವು ಆಡಚಣೆಗಳು ಕೆಲವು ಶಕ್ತಿಗಳು ಎದುರಿಸುತ್ತವೆ. 1947 ನೇ ಇಸವಿಯಿಂದ 1969ನೇ ಇಸವಿಯವರೆಗೆ ಆಗಿದ್ದಂತಹ ಸರ್ಕಾರ ಆರ್ಥಿಕ ನೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಯಾವ ಒಂದು ಒಳ್ಳೆಯದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಜನತೆಗೆ ಒಳ್ಳೆಯದು ಮಾಡತಕ್ಕಂಥ ಆಧಾರದ ಮೇಲೆ ಆರ್ಥಿಕ ಮುಂಗಡ ಪತ್ರವನ್ನು ನಮ್ಮ ಸರ್ಕಾರ ಈ ಸಭೆಯ ಮುಂದೆ ಇಟ್ಟ ಕಾಲದಿಂದಲೂ ಸಹ ಅದಕ್ಕೆ ಅಡಚಣೆಯಾಗಿರತಕ್ಕ ಶಕ್ತಿಯನ್ನು ಸರ್ಕಾರ ಎದುರಿಸಲೇಬೇಕು. ಈ ಸರ್ಕಾರದ ಕಾರ್ಯಕ್ರಮಗಳನ್ನು ಕುಂಠಿತಗೊಳಿಸತಕ್ಕ ಶಕ್ತಿಯ ಮುಂದೆ ಈ ಸರ್ಕಾರ ವಿಫಲಗೊಳ್ಳದೆ ಅದನ್ನು ಎತ್ತಿ ತೋರಿಸಬೇಕು. 1947 ರಿಂದ 1969ರ ತನಕ ಆ ಅಧಿಕಾರಾವಧಿಯಲ್ಲಿ ಬೆಳೆಸಿಕೊಂಡು ಬಂದಿರತಕ್ಕ ಬ್ಲಾಕ್‌ಮನಿ ಕೆಲಸ ಮಾಡುತ್ತಿದೆ. ಅದಕ್ಕಾಗಿ ನಮ್ಮ ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಸಹ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಅದ್ದರಿಂದ ಈ ಸವಾಲನ್ನು ಎದುರಿಸತಕ್ಕ ದಿಶೆಯಲ್ಲೆ ನಮ್ಮ ಕಾರ್ಯಕ್ರಮಗಳು ಇನ್ನೂ ದಿಟ್ಟವಾಗಿ ಆಗಬೇಕಾದಂಥಾದ್ದು ಅವಶ್ಯಕ. ಆಹಾರದ ಅಭಾವ ಮತ್ತು ಹಂಚಿಕೆ ಇವುಗಳ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಅವುಗಳಿಗೆ ಬೆಂಬಲ ಕೊಡುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದರು 15 ಪಲ್ಲಗಳ ಮೇಲ್ಪಟ್ಟು ಭತ್ತವನ್ನು ಇಟ್ಟಿರತಕ್ಕವರು ಪ್ರತಿಯೊಬ್ಬ ರೈತರೂ ಡಿಕ್ಲರೇಷನ್ ಕೊಡಬೇಕು ಎಂದು. ಆ ರೀತಿ ಡಿಕ್ಲರೇಷನ್ ಕೊಡುವುದು ತಪ್ಪಾಗುವುದಿಲ್ಲ. ಆದರೆ ಆ ರೀತಿ ಡಿಕ್ಲರೇಷನ್ ಕೊಡುವಂತೆ ಮಾಡತಕ್ಕದ್ದು ಹಣ ಇರತಕ್ಕವರು ಧಾನ್ಯವನ್ನು ಕೊಂಡುಕೊಂಡು ಹೋಗುವುದಕ್ಕೆ ಸೂಚನೆಯನ್ನು ಕೊಟ್ಟ ಹಾಗಾಗುತ್ತದೆ. ಆದ್ದರಿಂದ ಸರ್ಕಾರದವರು ಅಂಥಾ ಒಂದು ಸೂಚನೆಯನ್ನು ಕೊಡುವುದಿಲ್ಲ. ಏತಕ್ಕೆಂದರೆ 10 ಪಲ್ಲ ಧಾನ್ಯವನ್ನು ಬೆಳೆಯುತಕ್ಕ

(ಶ್ರೀ ಜೆ. ವೆಂಕಟಪ್ಪ)

ರೈತ 30 ಪಲ್ಲವನ್ನು ಬೆಳೆಯುವುದು ಅವಶ್ಯಕ. ಮೊನ್ನೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಗಮನ ಸೆಳೆಯುವ ಸೂಚನೆಯ ಮುಖಾಂತರ ಹಾನಗಲ್ಲಿನ ಪರಿಸ್ಥಿತಿಯನ್ನು ತಂದರು. ವಾಸ್ತವಿಕವಾಗಿ ರೈತರ ಹೆಸರಿನಲ್ಲಿ ಯಾವ ರೈತರೂ ಇಲ್ಲದೆ ಇರತಕ್ಕ ಇಂತಿಂಥಾ ರೈತರ ಹತ್ತಿರ ಸ್ಟಾಕು ಇತ್ತು ಮಿಲ್ಲಿಗೆ ಬಂತು ಎಂದು ಲೆಕ್ಕ ಕೊಟ್ಟಿದ್ದಾರೆ. ರೈತರ ಹೆಸರನ್ನು ವ್ಯಾಪಾರಸ್ಥರು ಮತ್ತು ಬಂಡವಾಳಶಾಹಿಗಳು ಉಪಯೋಗಿಸಿಕೊಂಡು ಅವರು ಸರ್ಕಾರದ ನೀತಿಗಳಿಗೆ ಬೆಂಬಲವನ್ನು ಕೊಡದೆ ಇರುವ ಕಾರಣ ಅವರು ರೈತರ ಹೆಸರನ್ನು ಉಪಯೋಗ ಮಾಡಿಕೊಳ್ಳುವುದನ್ನು ಕಡಿಮೆ ಮಾಡಬೇಕು ಎಂದು ರೈತರ ಹೆಸರಿನಲ್ಲಿ 500 ಪಲ್ಲ ಭತ್ತವನ್ನು ಸ್ಟಾಕ್ ಮಾಡಿಕೊಂಡು ಇಟ್ಟುಕೊಳ್ಳಬೇಕು ಎಂದು ಏನು ಪ್ರಯತ್ನ ನಡೆಯುತ್ತಿತ್ತು ಅದನ್ನು ವಿಫಲ ಮಾಡುವುದಕ್ಕೆ 15 ಕ್ವಿಂಟಾಲ್ ಮೇಲ್ಪಟ್ಟು ಈ ದಾಸ್ತಾನು ಇಟ್ಟುಕೊಂಡಿರತಕ್ಕವರು ಡಿಕ್ಲರೇಷನ್ ಮಾಡಬೇಕು ಎಂದು ಮಾಡಿದ್ದಾರೆಯೇ ಹೊರತು ರೈತರಿಗೆ ಕಷ್ಟವನ್ನು ಕೊಡಬೇಕು ಎನ್ನುವ ರೀತಿ ನೀತಿಯಲ್ಲ. ಈ ಬೆಲೆ ಏರಿಕೆಗಳು 1972ರಿಂದ ಏಕ ರೀತಿಯಲ್ಲಿ ಬೆಳೆದು ಕೊಂಡು ಹೋಗುತ್ತಿದೆ. ಇದಕ್ಕೆ ಕಾರಣವೇನೆಂದರೆ ನಮ್ಮ ದೇಶದಲ್ಲಿ ಯಾವ ಒಂದು ಲೆಕ್ಕಕ್ಕೂ ಯಾವ ಒಂದು ಕಾನೂನಿಗೂ ಸಿಗದೆ ಇರತಕ್ಕಂತಹ ಹಣ ಅರ್ಧದಷ್ಟು ಇರುವುದರಿಂದ ಈ ರೀತಿಯಾಗಿದೆ. ಅಂಥ ಒಂದು ಹಣಕಾಸಿನ ವ್ಯವಸ್ಥೆ ಏನಿದೆ ಅದನ್ನು ಮೊಟಕುಗೊಳಿಸುವುದಕ್ಕೆ ನಮ್ಮ ಸರ್ಕಾರದವರು ಸೂಕ್ತ ಕ್ರಮವನ್ನು ಜನತೆಯ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕು ಈ ದೆಶೆಯಲ್ಲಿ ಎಲ್ಲ ಪಕ್ಷಗಳ ಸದಸ್ಯರ ಸಹಕಾರವೂ ಅವಶ್ಯಕ. ನಮ್ಮ ದೇಶದ ಹಿಂದಿನ ಇತಿಹಾಸವನ್ನು ತೆಗೆದುಕೊಂಡರೆ ನಾವು ನಮ್ಮ ನಮ್ಮಲ್ಲೆ ಕಚ್ಚಾಡಿಕೊಂಡು ನಮ್ಮ ಸ್ವಾತಂತ್ರ್ಯವನ್ನು ಕಳೆದು ಕೊಂಡಿದ್ದೇವೆ. ಆ ಆಧಾರದ ಮೇಲೆ ಇಂಥ ವಾತಾವರಣವನ್ನುಂಟು ಮಾಡಲು ಯಾವುದೇ ಶಕ್ತಿಯು ಪ್ರಚೋದನೆ ಮಾಡಿದರೆ ಅಂಥ ನೀತಿಯನ್ನು ನಮ್ಮ ಸರ್ಕಾರ ಖಂಡಿಸಲೇಬೇಕು. ಜನತೆಯನ್ನು ಛಿದ್ರ ಛಿದ್ರವಾಗಿ ಮಾಡತಕ್ಕಂತಹ ನೀತಿಯನ್ನು ನಾವು ಖಂಡಿಸಬೇಕಾಗುತ್ತದೆ ಮತ್ತು ಇದರಿಂದ ನಮ್ಮ ದೇಶದ ಐಕ್ಯತೆಗೂ ಧಕ್ಕೆ ಉಂಟಾಗುತ್ತದೆ. ನಮ್ಮನ್ನು ಛಿದ್ರಗೊಳಿಸಲು ಹೊರಗಡೆ ಇರುವ ಹಲವು ಶಕ್ತಿಗಳು ಸಹ ಕಾದುಕೊಂಡಿರುತ್ತವೆ. ಅವುಗಳಿಗೆ ನಾವು ಎಳ್ಳಷ್ಟೂ ಅವಕಾಶ ಕೊಡಬಾರದು. ನಾವೆಲ್ಲರೂ ಭಾರತೀಯರು, ಅಣ್ಣ ತಮ್ಮಂದಿರು ಇದ್ದ ಹಾಗೆ ಇರಬೇಕು ಎನ್ನುವ ಭಾವನೆ ಎಲ್ಲಾ ರಾಜ್ಯಗಳ ಜನರಲ್ಲಿಯೂ ಬರಬೇಕು. ಅದರ ಬದಲು ನಮ್ಮ ನಮ್ಮಲ್ಲಿ ಕಲ್ಮಷವನ್ನು ಉಂಟುಮಾಡಲು ಪ್ರೇರೇಪಿಸುವಂತಹ ದುಷ್ಟ ಶಕ್ತಿಗಳನ್ನು ದಮನ ಮಾಡಬೇಕು. ನಮ್ಮ ಆರ್ಥಿಕ ಯೋಜನೆಗಳನ್ನು ಕುಂಠಿತಗೊಳಿಸುವಂತಹ ಯಾವ ನೀತಿಗೂ ನಾವು ಬೆಲೆ ಕೊಡಬಾರದು. ಇವತ್ತು ನಾವು ಆಹಾರವನ್ನು ವ್ಯವಸ್ಥಿತ

ವಾದ ರೂಪದಲ್ಲಿ ಹಂಚಬೇಕಾಗಿದೆ. ಈ ದೆಸೆಯಲ್ಲಿ ಸಹಕಾರೀ ಸಂಘಗಳ ಪಾತ್ರ ಹೆಚ್ಚಾಗಿದೆ. ಆದರೆ ಇವತ್ತು ನೂರಕ್ಕೆ 70ರಷ್ಟು ಸಹಕಾರಿ ಸಂಘಗಳು ಅಸ್ತಿತ್ವದಲ್ಲಿ ಇಲ್ಲದೆ ಹೋಗಿದ್ದುದರಿಂದ ಖಾಸಗೀ ವರ್ತಕರಿಗೆ ನಾವು ಅವಲಂಬಿಸಿರಬೇಕಾಗಿದೆ, ಆದರೆ ಖಾಸಗೀ ವರ್ತಕರ ಬಗ್ಗೆ ಜನಸಾಮಾನ್ಯರಿಗೆ ಅಷ್ಟು ಒಳ್ಳೆಯ ಮನೋಭಾವ ಇದ್ದ ಹಾಗೆ ಇಲ್ಲ. ಖಾಸಗೀ ಜನರು ಜನತೆಯ ಹಿತ ದೃಷ್ಟಿಯಿಂದ ಈ ಹಂಚಿಕೆಯನ್ನು ಮಾಡದೆ ಇರುವುದರಿಂದ ಈ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಅದನ್ನು ತೊಡೆದು ಹಾಕುವ ಬಗ್ಗೆ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸಿ ಸಹಕಾರೀ ಸಂಘಗಳು ಸುವ್ಯವಸ್ಥಿತ ರೀತಿಯಲ್ಲಿ ಇದನ್ನು ಮಾಡುವುದಕ್ಕೆ ಅವಕಾಶ ಒದಗಿಸಿಕೊಡುವುದು ಅತ್ಯಾವಶ್ಯಕ.

ಇನ್ನು ಸಣ್ಣ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ ರಾಜ್ಯಸರ್ಕಾರದವರು ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತಾರೆ. ಕೆಲವು ಕಡೆ ಭೂಮಿ ಕೊಚ್ಚಿಕೊಂಡು ಹೋಗಿ ಕೆರೆಗಳಲ್ಲಿ ಬಂದು ಬೀಳುವುದರಿಂದ ಕೆರೆಗಳು ಮುಚ್ಚಿಹೋಗುತ್ತವೆ. ಅದೇ ರೀತಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಸಾಗುವಳಿ ಮಾಡುವ ಭೂಮಿ ಸಹ ಕೊಚ್ಚಿಕೊಂಡು ಹೋಗಿ ಕೆರೆಗೆ ತುಂಬಿಬಿಡುತ್ತದೆ. ಇದರಿಂದಾಗಿ ಕೆರೆಗಳ ಉಪಯೋಗವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅದಕ್ಕಾಗಿ ಕೆರೆಯನ್ನು ಜೀರ್ಣೋದ್ಧಾರ ಮಾಡಿ ನೀರಿನ ಶಕ್ತಿಯನ್ನು ಏರಿಸಬೇಕಾದರೆ ಕೆರೆಯ ಕೋಡಿಯನ್ನು ಏರಿಸಬೇಕಾಗುತ್ತದೆ. ಹಿಂದೆ ಎಕ್ಸ್‌ಪರಿಮೆಂಟಲ್ ಪರ್ಪಸ್‌ಗೋಸ್ಕರ ಹೆಬ್ಬಾಳಿನಲ್ಲಿ ಮತ್ತು ಸೂಲಬೆಳೆಯಲ್ಲಿ ಎರಡು ಸಣ್ಣ ಕೆರೆಗಳನ್ನು ಡಿಸಿಲ್ಟಿಂಗ್ ಮತ್ತು ಸಾಯಿಲ್ ಕನ್‌ಸರ್ವೇಶನಿಗೋಸ್ಕರ ತೆಗೆದುಕೊಂಡರು. ಅಂಥ ಪ್ರೋಗ್ರೇಮನ್ನು ಕೈಬಿಡತಕ್ಕಂತಹ ಧೋರಣೆಯನ್ನು ಸರ್ಕಾರ ಈಗ ತೆಗೆದುಕೊಂಡಿದೆ ಅದ್ದರಿಂದ ಸರ್ಕಾರದವರು ಇದನ್ನು ಪುನಃ ತೆಗೆದುಕೊಂಡು ಡಿಸಿಲ್ಟಿಂಗ್ ಮತ್ತು ಲ್ಯಾಂಡ್ ರಿಕ್ಲಮೇಶನ್ ಪ್ರೋಗ್ರಾಮನ್ನು ಶುರುಮಾಡಬೇಕೆಂದು ಹೇಳುತ್ತೇನೆ.

ಇನ್ನು ವ್ಯವಸಾಯಕ್ಕೆ ಬೇಕಾದ ಬೀಜಗಳನ್ನು ನ್ಯಾಷನಲ್ ಸೀಡ್ಸ್ ಕಾರ್ಪೊರೇಶನ್ ಒದಗಿಸುತ್ತಿದೆ. ಅದು ಸಹ ಈಗ ಬರುವುದು ಕುಂಠಿತವಾಗಿದೆ. ಸರ್ಕಾರಿ ಮಟ್ಟದಲ್ಲಿ ಬರುವ ಸೀಡ್ಸ್ ಹೀಗೆ ಆದರೆ ವ್ಯವಸಾಯಗಾರರ ಪರಿಸ್ಥಿತಿ ಏನಾಗಬೇಕೆಂದು ನಾವು ಯೋಚನೆ ಮಾಡಬೇಕು. ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೀರು ಪೂರೈಕೆ ಬಗ್ಗೆ ಒಂದು ಹಳ್ಳಿಯಲ್ಲಿ ಒಂದು ಬಾವಿ ಇದ್ದರೆ ಇನ್ನೊಂದು ಮಾಡಬಾರದು ಎಂದು ಹೇಳುತ್ತಿದ್ದಾರೆ. ಆದರೆ ಹಿಂದೆ 1947

(ಶ್ರೀ ಜೆ. ವೆಂಕಟಪ್ಪ)

ಮತ್ತು 1950ರ ಹಿಂದೆ ಮಾಡಿದ ಬಾವಿಗಳು ಈಗ ಉಪಯೋಗಕ್ಕೆ ಬರುತ್ತಾ ಇಲ್ಲ. ಆದ್ದರಿಂದ ಎಲ್ಲೆಲ್ಲಿ ಉಪಯೋಗವಿಲ್ಲದ ಬಾವಿಗಳು ಇವೆಯೋ ಅಂಥ ಕಡೆ ಹೊಸ ಬಾವಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ನೀರಿಲ್ಲದ ಜಾಗಗಳು ಏನಿವೆ ಅವುಗಳ ಜೊತೆಗೆ ಇಂಥ ಉಪಯೋಗ ಇಲ್ಲದ ಬಾವಿಗಳಿರುವ ಹಳ್ಳಿಗಳನ್ನು ಸಹ ಸೇರಿಸಬೇಕಾಗುತ್ತದೆ ಆದ್ದರಿಂದ ಇದರ ಕಡೆ ಸರ್ಕಾರದವರು ತೀವ್ರ ಗಮನವನ್ನು ಹರಿಸುವುದು ಅವಶ್ಯಕ ಎಂದು ಹೇಳುತ್ತೇನೆ.

ಇನ್ನು ಜನತಾ ಹೌಸಿಂಗ್ ಸ್ಕೀಮಿನ ಬಗ್ಗೆ 5 ಕೋಟಿ ರೂಪಾಯಿಯ ಕಾರ್ಯಕ್ರಮವನ್ನು ಕುಂಠಿತಗೊಳಿಸುವುದು ತೀರಾ ಶೋಚನೀಯ. ಅದನ್ನು ಕೇಂದ್ರದ ನೆರವಿನಿಂದಲಾದರೂ ಮುಂದುವರಿಸಿ ಬಡ ಜನರಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 P.M.

‡ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ) : ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯಪಾಲರ ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಗತಿಸಿದ 20 ವರ್ಷಗಳಲ್ಲಿ ಮುಂಚಿನ ಸರ್ಕಾರಗಳು ಮಾಡದೇ ಇರುವ ಕೆಲಸಗಳನ್ನು ನಮ್ಮ ಸರ್ಕಾರ ಕೇವಲ 2 ವರ್ಷಗಳಲ್ಲಿ ಮಾಡಿ ತುಂಬಾ ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆಯೆಂದು ಹೇಳಲಿಕ್ಕೆ ನಾನು ಬಹಳವಾಗಿ ಸಂತೋಷಪಡುತ್ತೇನೆ. ಬಹು ಮುಖ್ಯವಾಗಿ ಭೂ ಸುಧಾರಣೆ, ಕನ್ನಡ ರಾಜ್ಯಾಡಳಿತ ಭಾಷೆ, ಅಂದರೆ ಅಧಿಕೃತವಾಗಿ ಇಷ್ಟರಲ್ಲಿಯೇ ಕನ್ನಡ ಭಾಷೆಯಾಗುತ್ತದೆ, ನೀರಾವರಿ ಯೋಜನೆ ಸಾರ್ವಜನಿಕ ಕಾಮಗಾರಿಯಾದ ನೀರು ಪೂರೈಕೆ, ಜನತಾ ವಸತಿಯ ಬಗ್ಗೆ ನಿವೇಶನಗಳನ್ನು ಧರ್ಮಾರ್ಥವಾಗಿ ಹಂಚುವಿಕೆ ಮುಂತಾದ ಕಾರ್ಯಕ್ರಮಗಳು ನಡೆದಿವೆ. ಆದರೆ ಕಳೆದ ವರ್ಷ ನಾವು ಪ್ರಕೃತಿಯ ವಿಕೋಪಕ್ಕೆ ಒಳಗಾಗಿದ್ದುದರಿಂದ, ಈ ವರ್ಷ ನಾವು ಆಹಾರದ ಮಟ್ಟಿಗೆ ಸ್ವಲ್ಪ ಕಷ್ಟವನ್ನು ಅನುಭವಿಸಬೇಕಾಗಿ ಬಂತು. ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯ ಆಹಾರ ಅಕ್ಕಿ. ಆದರೆ ಈ ಒಂದು ಅಕ್ಕಿಯ ಅಭಾವವನ್ನು ನಮ್ಮ ಜನತೆ ಈಗ ಬಹಳವಾಗಿ ಎದುರಿಸಬೇಕಾಗಿದೆ. ನಮ್ಮಲ್ಲಿ ಬೆಳೆಯುವ ಅಕ್ಕಿ ಬರೀ 6 ತಿಂಗಳಿಗೆ ಮಾತ್ರ ಸಾಕಾಗಿತ್ತು. ಅದರಿಂದಾಗಿ ಅಕ್ಕಿಗಾಗಿ ನಾವು ನೆರೆಯ ಜಿಲ್ಲೆಗಳನ್ನು ಹಾಗೂ ರಾಜ್ಯಗಳನ್ನು ಅವಲಂಬಿಸಿಕೊಂಡು ಬರಬೇಕಾದ ಪರಿಸ್ಥಿತಿ ಉಂಟಾಗಿದೆ. ಇದರ

ಜೊತೆಗೆ ನಮ್ಮ ಸರ್ಕಾರದವರು ಅಂತರ ಜಿಲ್ಲಾ ಸಾಗಾಣಿಕೆಯ ನಿರ್ಭಂಧವನ್ನು ಹೇರಿದುದರಿಂದ, ಅನೇಕ ಅಹಾರ ಪದಾರ್ಥಗಳು ನಮ್ಮ ಜನಗಳಿಗೆ ಕಡಿಮೆ ದರದಲ್ಲಿ ಸಿಗುತ್ತಾ ಇಲ್ಲ. ಇದರಿಂದ ಬಹಳ ಕಷ್ಟವಾಗಿದೆ. ಆದರೂ ಇಂತಹ ಒಂದು ದೊಡ್ಡ ಸಮಸ್ಯೆಯನ್ನು ಎದುರಿಸಿದ್ದಾರೆ. ಜನರು ಈಗ ಒಂದು ಕೆ. ಜಿ. ಅಕ್ಕಿಗೆ ರೂ. 2-90 ಪೈಸೆಯಷ್ಟು ಕೊಡುತ್ತಿದ್ದಾರೆ. ಕೂಡಲೇ ಅಂತರ ಜಿಲ್ಲಾ ಸಾಗಾಟ ನಿರ್ಬಂಧವನ್ನು ರದ್ದುಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ : ಇವರು ಎರಡು ವರ್ಷಗಳಲ್ಲಿ ಸಾಧಿಸಿದ್ದು ಅದೂ ಒಂದು.

ಶ್ರೀ ಸಿ. ಬೈರೇಗೌಡ : ಈ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬಂದಾಗ ಎಲ್ಲವೂ ಗೊತ್ತಾಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್ : ಎಲ್ಲರ ಮನೆಯ ದೋಸೆತೂತು. ಇವರೇನು ಸತ್ಯಹರಿಶ್ಚಂದ್ರನ ಮೊಮ್ಮಕ್ಕಳೇ ?

ಇನ್ನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಕೋ ಅಪರೇಟಿವ್ ಸೊಸೈಟಿ ಮುಖಾಂತರ ಅಕ್ಕಿಯನ್ನು ತರಿಸಿ ಫೇರ್ ಪ್ರೈಸ್ ಷಾಪ್ ಗಳಲ್ಲಿ ಒಬ್ಬ ವ್ಯಕ್ತಿಗೆ ತಿಂಗಳಿಗೆ 8 ಕೆ. ಜಿ. ಪ್ರಕಾರ ಅಕ್ಕಿಯನ್ನು ವಿತರಣೆ ಮಾಡು ವಂತಹ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನೂ ಮತ್ತು ಅಹಾರ ಸಚಿವರನ್ನೂ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಮಹಿಳಾ ಸಮಾಜಗಳಿಗೆ ಕೈಗಾರಿಕೆಯ ಅಭಿವೃದ್ಧಿಗಾಗಿ ಕೊಡು ತ್ತಿರುವ ಗ್ರಾಂಟನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾರೆ. ಬಹು ಮುಖ್ಯವಾಗಿ ಈಗ ಮಹಿಳೆಯರು ಮುಂದೆ ಬರಬೇಕೆಂಬ ಒಂದು ನಿಯಮವನ್ನೇ ಇಟ್ಟುಕೊಂಡಿರು ವಾಗ, ಅವರ ಸಮಾಜಗಳಿಗೆ ಕೊಡುತ್ತಿದ್ದ ಗ್ರಾಂಟನ್ನು ನಿಲ್ಲಿಸಿದ್ದು ಸರಿಯಲ್ಲ. ಅವರು ಬಾಲವಾಡಿ ಕೆಲಸ ಮತ್ತು ಕಸೂತಿ ಕೆಲಸಗಳನ್ನು ಇನ್ನೂ ಚೆನ್ನಾಗಿ ಮಾಡಲು ಆ ಸಮಾಜಗಳಿಗೆ ಕೊಡುತ್ತಿದ್ದ ಗ್ರಾಂಟನ್ನು ಪುನಃ ಕೊಡುವ ಹಾಗೆ ವ್ಯವಸ್ಥೆಮಾಡಬೇಕೆಂದು ಮಾನ್ಯ ಕೈಗಾರಿಕೆ ಸಚಿವರಲ್ಲಿ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

(ಶ್ರೀಮತಿ ಮನೋರಮ ಮಧ್ವರಾಜ್)

ಇನ್ನು ನಮ್ಮ ರೈತರಿಗೆ ಸಕಾಲದಲ್ಲಿ ಗೊಬ್ಬರ ಸಿಗುತ್ತಾ ಇಲ್ಲ. ಅದರಲ್ಲಿಯೂ ಮುಖ್ಯವಾಗಿ ನಾಲ್ಕು ಗ್ರಾಮಗಳಿಗೆ ಒಬ್ಬ ಗ್ರಾಮಸೇವಕನನ್ನು ನೇಮಿಸುತ್ತಾರೆ. ಇದು ಸರಿಯಲ್ಲ. ಪ್ರತಿಯೊಂದು ಗ್ರಾಮಕ್ಕೂ ಒಬ್ಬೊಬ್ಬ ಗ್ರಾಮಸೇವಕರನ್ನು ನೇಮಿಸಿದರೆ ಬಹಳ ಒಳ್ಳೆಯದು. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಗೊಬ್ಬರದ ಸರಬರಾಜು ಯೋಗ್ಯ ರೀತಿಯಲ್ಲಿ ಆಗುವ ಹಾಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳವಾಗಿ ಕಷ್ಟಪಡತಕ್ಕಂಥ ಎರಡು ವರ್ಗಗಳಿವೆ. ಒಂದು ಟಾಡಿ ಟ್ಯಾಪರ್ಸ್, ಇನ್ನೊಂದು, ಮೀನುಗಾರರ ವರ್ಗ. ಟಾಡಿ ಟ್ಯಾಪರ್ಸ್ ದಿವಸಕ್ಕೆ ಹತ್ತಾರು ಸಲ ತೆಂಗಿನ ಮರಗಳನ್ನು ಹತ್ತಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅನೇಕರು ಮರದಿಂದ ಬಿದ್ದು ಸಾಯುವುದೂ ಉಂಟು. ಆದ್ದರಿಂದ ಅಂತಹವರ ಬಗ್ಗೆ ಜೀವವಿಮಾ ಸೌಕರ್ಯವನ್ನು ಸರ್ಕಾರದವರು ಮಾಡಿಕೊಡಬೇಕೆಂದು ನಾನು ಅವರನ್ನು ಪ್ರಾರ್ಥಿಸುತ್ತೇನೆ. ಅದೇ ರೀತಿಯಲ್ಲಿ ಮೀನುಗಾರರು ಮೀನುಗಳನ್ನು ಹಿಡಿಯಲಿಕ್ಕೆ ಸಮುದ್ರಕ್ಕೆ ಹೋದಾಗ ಕೆಲವು ಸಂದರ್ಭಗಳಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾಗಿ ತಮ್ಮ ಜೀವಹಾನಿ ಮಾಡಿಕೊಳ್ಳುತ್ತಾರೆ. ನಮ್ಮ ಸರ್ಕಾರದವರು ಈಗ ಏನು ದೊಡ್ಡ ದೊಡ್ಡ ಐಸ್ ಪ್ಲಾಂಟ್ ಮತ್ತು ಕ್ಯಾನಿಂಗ್ ಇಂಡಸ್ಟ್ರೀಸ್‌ಗಳಿಗೆ ತಾತ್ಕಾಲಿಕವಾಗಿ ನೆರವನ್ನು ಕೊಡುತ್ತಿದ್ದಾರೋ ಅದನ್ನು ಕೂಡಲೇ ನಿಲ್ಲಿಸಿ ಸಣ್ಣ ಸಣ್ಣ ದೋಣಿಗಳನ್ನು ನಡೆಸುವ ಮೀನುಗಾರರಿಗೆ ರಿಲೀಫ್ ಫಂಡಿನಿಂದ ಸಹಾಯ ಧನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂಬ ಬಹುಕಾಲದ ಅಲ್ಲಿನ ಜನರ ಆಸೆಯನ್ನು ನಮ್ಮ ಸರ್ಕಾರದವರು ಕೂಡಲೇ ನೆರವೇರಿಸಿ ಕೊಡಬೇಕೆಂದು ಕೇಳಿಕೊಂಡು ನನಗೆ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ): ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಈ ಸದನವನ್ನು ಉದ್ದೇಶಿಸಿ ಮಾಡಿದತಕ್ಕ ಭಾಷಣಕ್ಕೆ ಸಂಬಂಧಪಟ್ಟಹಾಗೆ ಮಂಡಿಸಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ತಾವು ದಯಮಾಡಿ ನೆನಪು ಮಾಡಿಕೊಳ್ಳಬಹುದು. ಈ ಕರ್ನಾಟಕ ರಾಜ್ಯಕ್ಕೆ ಹಿಂದಿದ್ದಂಥ ಮೈಸೂರು ಸರ್ಕಾರದಲ್ಲಿ ಮಾನ್ಯ ಶ್ರೀಮಾನ್ ದೇವರಾಜ್ ಅರಸು ಅವರು ಒಬ್ಬ ಮಂತ್ರಿಗಳಾಗಿದ್ದರು. 1972ರ ಚುನಾವಣೆ ಆಗಿ ಅವರು ಮುಖ್ಯಮಂತ್ರಿಗಳು ಆದ ಮೇಲೆ ನಾವು ರಾಜ್ಯಪಾಲರ ಭಾಷಣವನ್ನು ಇವತ್ತು ಮೂರನೆಯ ಸಾರಿ ಈ ಸದನದಲ್ಲಿ ಕೇಳಿದ್ದೇವೆ. ಅದೇ ರೀತಿ ಮಾನ್ಯ ಶ್ರೀಮಾನ್ ದೇವರಾಜ್ ಅರಸ್

ಅವರು ಮಾನ್ಯ ಮುಖ್ಯ ಮಂತ್ರಿಗಳಾಗಿ ಈ ಸದನದಲ್ಲಿ ಭಾಷಣ ಮಾಡಿದ್ದನ್ನೂ ಸಹ ನಾವೆಲ್ಲರೂ ಕೇಳಿದ್ದೇವೆ ಯಾವ ಭಾಷಣ? ಅವರು ಏನೇನು ಹೇಳಿದ ರೆಂದರೆ, ಈ ರಾಜ್ಯದ ಆಡಳಿತವನ್ನು ಸಂಪೂರ್ಣವಾಗಿ ಹಾಳು ಮಾಡುವುದಕ್ಕೆ ಸರ್ಕಾರದ ಆಡಳಿತವನ್ನು ಅಧೋಗತಿಗೆ ಇಳಿಸುವುದಕ್ಕೆ ಇಷ್ಟು ಜನರ ಕಷ್ಟ ಕೋಟಲೆಗಳನ್ನು ಜಾಸ್ತಿ ಮಾಡುವುದಕ್ಕೆ ಕಾರಣರು ಇವರು ಎಂದು ನಮ್ಮ ಕಡೆ ತೋರಿಸಿ ಹೇಳಿದ್ದಾರೆ. ಅಂದರೆ ಸಂಸ್ಥಾ ಕಾಂಗ್ರೆಸ್ಸಿನವರು ಎಂಬುದಾಗಿ ನಮ್ಮ ಕಡೆ ಕೂತಿರುವ ಸದಸ್ಯರನ್ನು ತೋರಿಸಿ ಹೇಳುತ್ತಿದ್ದರು. ಈ ರಾಜ್ಯದಲ್ಲಿ ಏನಾದರೂ ಅನ್ಯಾಯಗಳು ನಡೆದಿದ್ದರೆ, ಅದಕ್ಕೆ ಕಾರಣ ಎರಡು ಕಾಂಗ್ರೆಸ್ಸಿನವರೂ ಎನ್ನುವ ಮಾತನ್ನು 1969ನೇ ಸಾಲಿನಲ್ಲಿಯೇ ಕಾಂಗ್ರೆಸ್ ಇಬ್ಭಾಗ ಆಗುವುದಕ್ಕೆ ಮುಂಚೆ ಮತ್ತು ಒಟ್ಟಿಗೆ ಇದ್ದಂಥ ಕಾಲದಲ್ಲಿ ಆಗ ಒಬ್ಬರಿಗೊಬ್ಬರನ್ನು ತೋರಿಸಿ ಮೊದಲಿಸಿ ಮಾತನಾಡಿರುವ ಬಗ್ಗೆ ನನ್ನಲ್ಲಿ ಸಾಕ್ಷಿ ಸಾಹಿತ್ಯವಿದೆ ನೀವು ಮಾಡಿರುವ ತಪ್ಪುಗಳನ್ನು ಮುಚ್ಚುವುದಕ್ಕೆ ಪ್ರಯತ್ನಿಸಿ ನಿಮ್ಮ ರಾಜಕೀಯ ಚದುರಂಗದ ಆಟದಲ್ಲಿ ತಮ್ಮ ತಾಳವನ್ನು ಪ್ರಯೋಗ ಮಾಡುವುದಕ್ಕೆ ನಾವು ಬಿಡುವುದಿಲ್ಲ. ನಾವು ಹಿಂದೆ ಏನು ಹೇಳುತ್ತಿದ್ದೆವು ಎಂಬದೂ ತಮಗೂ ಗೊತ್ತಿದೆ. 1972ರ ಚುನಾವಣೆಯ ಕಾಲದಲ್ಲಿ, ಇವರ ಮೇಲೆ ಆಪಾದನೆ ಮಾಡುವ ಕಾಲದಲ್ಲಿ, 1973ನೇ ವರ್ಷದ ಆಯವ್ಯಯ ಮಂಡನೆ ಮಾಡುವ ಕಾಲದಲ್ಲಿ ಇವರು ಏನೇನು ಭಾಷಣ ಮಾಡಿದ್ದಾರೆಂಬ ಬಗ್ಗೆ ನನ್ನ ಹತ್ತಿರ ಅವರ ಭಾಷಣಗಳ ಪ್ರತಿ ಕೂಡ ಇದೆ. ಆ ಕಾಲದಲ್ಲಿ ಏನು ಹೇಳಿದ್ದಾರೆಂದರೆ, ದೇಶದಲ್ಲಿ ಭೀಕರ ಬರಗಾಲ, ಎಲ್ಲಿ ನೋಡಿದರೂ ಮಳೆ ಇಲ್ಲ, ಕುಡಿಯಲಿಕ್ಕೆ ನೀರು ಇಲ್ಲ, ಜನಗಳಿಗೆ ಮತ್ತು ದನಗಳಿಗೆ ಆಹಾರವಿಲ್ಲ, ಜನರು ಉತ್ತರ ಕರ್ನಾಟಕದಿಂದ ಹಲವಾರು ಜಿಲ್ಲೆಗಳಲ್ಲಿ ಇರತಕ್ಕ ತಮ್ಮ ವಸತಿಯನ್ನು ಬಿಟ್ಟು, ಊರು ಬಿಟ್ಟು ವಲಸೆ ಬರುತ್ತಿದ್ದಾರೆ. ಅಲೆಮಾರುಗಳಾಗುತ್ತಿದ್ದಾರೆ. ಜನರು ಈ ಭೀಕರ ಕ್ಷಾಮಕ್ಕೆ ಸಿಕ್ಕಿಹೋಗಿದ್ದಾರೆ. ಕ್ಷಾಮ ಅಥವಾ ಬರಗಾಲ ಇಲ್ಲದಿದ್ದರೆ ನಿಜವಾಗಿಯೂ ಕರ್ನಾಟಕ ರಾಜ್ಯವನ್ನು ನಂದನವನವನ್ನಾಗಿ ಮಾಡುತ್ತಿದ್ದೆವು ಎಂಬುದಾಗಿ ಹಿಂದೆ ಸಾರಿಸಾರಿ ಹೇಳಿದ್ದಾರೆ. ರಾಜ್ಯಪಾಲರು ಅವರ ಭಾಷಣದ ಎರಡನೇ ಪ್ಯಾರಾದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "ರಾಜ್ಯದ ನಾನಾ ಕಡೆ ಎಡೆಬಿಡದೆ ಎರಡು ವರ್ಷಗಳ ಕಾಲ ಅನಾವೃಷ್ಟಿಯಾದ ತರುವಾಯ, ಪ್ರಸಕ್ತ ವರ್ಷ ಋತುಮಾನಸ್ಥಿತಿ ಉತ್ತಮಗೊಂಡಿದೆ. ಇದರಿಂದಾಗಿ, ಆಹಾರ ಮತ್ತು ಇತರ ಅವಶ್ಯ ವಸ್ತುಗಳ ಬೆಲೆಗಳ ಸ್ಥಿರತೆಗೆ ಬಹಳ ಅನುಕೂಲವಾಗುವುದೆಂದು ಹಾರೈಸುತ್ತೇನೆ."

ಇದು ರಾಜ್ಯಪಾಲರು ತಮ್ಮ ಮನೆಯಲ್ಲಿ ಕುಳಿತು ಅವರೇ ತಯಾರು ಮಾಡಿದ ಭಾಷಣವಲ್ಲ. ಇದನ್ನು ಆಡಳಿತ ನಡೆಸತಕ್ಕ ಮಂತ್ರಿಮಂಡಲದವರು ತಯಾರು ಮಾಡಿ ಅವರಿಂದ ಹೇಳಿಸಿದ ಭಾಷಣ. ಆಗ ನಮ್ಮ ಮುಖ್ಯಮಂತ್ರಿಗಳು ನಮ್ಮ ರಾಜ್ಯದಲ್ಲಿ ಮಳೆಬಾರದೆ ಅಭಾವ ಬೀಳದೆ ಇದ್ದಿದ್ದರೆ ಇಲ್ಲಿ ಎಲ್ಲವನ್ನೂ

(ಶ್ರೀ ಎಸ್. ಬಂಗಾರಪ್ಪ)

ನಂದನವನವನ್ನಾಗಿ ಮಾಡುತ್ತಿದ್ದೇವೆಂದು ಹೇಳಿದ್ದರು. ಅದರೆ ಈ ಸಾಲಿನ ರಾಜ್ಯಪಾಲರ ಭಾಷಣದಲ್ಲಿ ಮಳೆಬೆಳೆಗಳು ಕಳೆದ ಸಾಲಿನಲ್ಲಿ ಚೆನ್ನಾಗಿ ಆಗಿರುತ್ತವೆಂದು ಹೇಳಿದ್ದಾರೆ. ಅದರೆ ಈಗಿರತಕ್ಕ ಆಡಳಿತ ಪಕ್ಷ ಅಧಿಕಾರದಲ್ಲಿ ಉಳಿಯಬೇಕಾಗಿದ್ದರೆ ಅದಕ್ಕೆ ಯಾವಾಗಲೂ ರಾಜ್ಯದಲ್ಲಿ ಈ ಅಭಾವ ಅನ್ನುವುದು ಇರಲೇಬೇಕು. ಇದು ಅವರ ಆಸೆ. ಅದಕ್ಕಾಗಿ ಇವರು ದಿನ ಬಳಕೆಯ ನಿತ್ಯ ಅಗತ್ಯ ವಸ್ತುಗಳ ಕೃತಕ ಅಭಾವವನ್ನುಂಟು ಮಾಡಿದ್ದಾರೆ. ಹೀಗೆ ಕೃತಕ ಅಭಾವವನ್ನು ಉಂಟು ಮಾಡವುದರಲ್ಲಿ ಈಗಿನ ಆಡಳಿತ ಪಕ್ಷದವರು ದಕ್ಷರು, ಮತ್ತು ನಿಸ್ಸೀಮರು. ಈಗಿನ ಇವರ ಭಾಷಣದಲ್ಲಿ 'ರಾಜ್ಯದ ನಾನಾ ಭಾಗಗಳಲ್ಲಿ ಪ್ರಸಕ್ತ ವರ್ಷದ ಋತುಮಾನ ಸ್ಥಿತಿ ಉತ್ತಮಗೊಂಡಿರುವುದರಿಂದ ಆಹಾರ ಮತ್ತು ಇತರ ಅವಶ್ಯ ವಸ್ತುಗಳ ಬೆಲೆಗಳ ಸ್ಥಿರತೆಗೆ ಬಹಳ ಅನುಕೂಲವಾಗುವುದೆಂದು ಹಾರೈಸುತ್ತೇನೆ' ಎಂಬುದಾಗಿ ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದಾರೆ. ಇದನ್ನು ಈ ಹಿಂದೆ ಇದೇ ಸಭೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ಕೊಟ್ಟಿರತಕ್ಕ ಒಂದು ಹೇಳಿಕಗೆ ಹೋಲಿಸಬೇಕಾಗಿದೆ. ಹಿಂದೆ ಇವರು ಏನು ಹೇಳಿದ್ದರೆಂದರೆ ಈಗ ರಾಜ್ಯಪಾಲರ ಭಾಷಣದಲ್ಲಿ ಆಡಕವಾಗಿರುವ ಸಾಲಿನಲ್ಲಿ ನಮ್ಮ ಸರ್ಕಾರದವರು ಇಡೀ ಕರ್ನಾಟಕದಲ್ಲಿ ಸಾಕಷ್ಟು ಆಹಾರಧಾನ್ಯಗಳನ್ನು ಶೇಖರಿಸಿ ದಾಸ್ತಾನು ಮಾಡುವುದರ ಜೊತೆಗೆ ಅಗತ್ಯವಸ್ತುಗಳ ಬೆಲೆಯನ್ನು ನಾವು ಹಿಡಿತದಲ್ಲಿಟ್ಟುಕೊಳ್ಳುತ್ತೇವೆ ಎಂಬುದಾಗಿ ಹೇಳಿದ್ದನ್ನು ನಾವು ಈಗ ವಿಮರ್ಶೆ ಮಾಡಬೇಕಾಗಿದೆ. ಇಲ್ಲಿ ಕಳೆದ ಸಾಲಿನಲ್ಲಿ ನಮ್ಮ ಮುಖ್ಯ ಮಂತ್ರಿಗಳೇನು ಇದೇ ಸಭೆಯಲ್ಲಿ ಈ ಆಹಾರಧಾನ್ಯಗಳ ಬಗ್ಗೆ ಮತ್ತು ಅಗತ್ಯ ವಸ್ತುಗಳ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದರ ಅಂಥದೇ ಸ್ವಲ್ಪವೂ ಬದಲಿಲ್ಲದಂಥ ಒಂದು ಹೇಳಿಕೆಯನ್ನು ಕೇಂದ್ರದ ಮಟ್ಟದಲ್ಲಿ ನಮ್ಮ ಪ್ರಧಾನಿಯವರೂ ಮತ್ತು ಕೆಲವು ಪಾರ್ಲಿಮೆಂಟಿನ ಸದಸ್ಯರೂ ಹೇಳಿದ್ದರು. ಇಲ್ಲಿ ನಮ್ಮ ಮುಖ್ಯ ಮಂತ್ರಿಗಳು ರಾಜ್ಯಮಟ್ಟಕ್ಕೆ ಅನ್ವಯಿಸಿ ಹೇಳಿದ್ದನ್ನು ಅಲ್ಲಿ ಅವರು ರಾಷ್ಟ್ರ ಮಟ್ಟಕ್ಕೆ ಅನ್ವಯಿಸಿ ಭಾಷಣ ಮಾಡಿದ್ದಾರೆ. ಅಗತ್ಯ ವಸ್ತುಗಳ ಬೆಲೆಯನ್ನು ಸ್ಥಿಮಿತದಲ್ಲಿ ಇಡಬೇಕಾದರೆ ರಾಜ್ಯದಲ್ಲಿ ಹಾಗೂ ದೇಶಾದ್ಯಂತ ಮಳೆ ಬೆಳೆಗಳು ಚೆನ್ನಾಗಿ ನಡೆಸಬೇಕೆಂಬುದು ನಿರ್ವಿವಾದವಾದ ಅಂಶ ಆದರೆ ಈ ಉಭಯತ್ರರ ಹೇಳಿಕೆಯಂತೆ ಅಂದರೆ ಪ್ರಧಾನಿಯವರ ಮತ್ತು ನಮ್ಮ ಮುಖ್ಯ ಮಂತ್ರಿಗಳ ಹೇಳಿಕೆಯಂತೇನೋ ಒಳ್ಳೆ ಬೆಳೆಗಳಾಗಿದೆ. ಆದಾಗ್ಗೂ ಈ ಬೆಲೆಗಳು ಮಾತ್ರ ಹಿಡಿತಕ್ಕೆ ಸಿಕ್ಕದಂತೆ ದಿನದಿನಕ್ಕೂ ಏರುತ್ತಿರುವುದು ಇನ್ನೂ ಹಾಗೇ ಯಕ್ಷಪ್ರಶ್ನೆಯಾಗೇ ಉಳಿದಿದೆ. ಇದನ್ನು ನಾವೀಗ ಪರಿಶೀಲಿಸಬೇಕಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇವರಿಬ್ಬರ ಹೇಳಿಕೆಗಳು ಸತ್ಯಕ್ಕೆ ದೂರವಾದವು ಎಂಬುದನ್ನು ನಾನು ಈಗಲೇ ಸಾರಿ ಸಾರಿ ಹೇಳವುದಕ್ಕೆ ಇಷ್ಟಪಡುತ್ತೇನೆ. ಈ ದಿವಸ ನನ್ನಲ್ಲಿ ಕೆಲವು ಅಗತ್ಯ ವಸ್ತುಗಳ ಬೆಲೆಯ ಪಟ್ಟಿಯನ್ನು ಇಟ್ಟುಕೊಂಡಿದ್ದೇನೆ. ಅದನ್ನು ಮಾನ್ಯ

ಅಧ್ಯಕ್ಷರ ಹಾಗೂ ಮಾನ್ಯ ಸದಸ್ಯರ ಗಮನಕ್ಕೆ ತರಬಚ್ಛಿಸುತ್ತೇನೆ. ಕಾಂಗ್ರೆಸ್ ಇಬ್ಭಾಗವಾಗಿ ಲೋಕ ಸಭೆ ಅಸ್ತಿತ್ವಕ್ಕೆ ಬಂದಾಗ ಇದೇ ಸಭೆಯಲ್ಲಿ ಆ ಆಡಳಿತ ಪಕ್ಷಕ್ಕೆ ಸೇರಿದ ಶ್ರೀಮಾನ್ ಚೆನ್ನಬಸಪ್ಪ ನವರು ಇದೇ ಸಭೆಯಲ್ಲಿ ಒಂದು ಭಾಷಣ ವನ್ನು ಮಾಡಿದರು ಹಿಂದೆ. ಅದೇನು ಭಾಷಣ? 'ನಾವು ನಿಮ್ಮ ಹಾಗೆ ಅಲ್ಲ ಎಂದು ಓ, ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸುತ್ತ ಹೇಳಿದರು--ಅವರು ಹೇಗೆ ಮೇಜನ್ನು ತಟ್ಟಿ ತಟ್ಟಿ ಹೇಳುತ್ತಿದ್ದರು ಎಂಬುದನ್ನು ನಾನೀಗ ವರ್ಣನೆ ಮಾಡುವುದಕ್ಕೆ ಸಾಧ್ಯ ವಿಲ್ಲ. ಆಗ ಅವರ ಒಂದ ಫೋಟೋ ಹಿಡಿದಿಟ್ಟಿದ್ದರೆ ಈಗ ಅದನ್ನು ಅವರ ಮುಂದೆ ಭೂತಗನ್ನಡಿ ಹಾಕಿ ಅವರ ಅವರ ನಟರಾಜ ಅಧಿಕಾರದ ಡ್ಯಾನ್ಸನ್ನು ಯಾವರೀತಿ ಮಾಡಿದರೆಂಬುದನ್ನು ಅವರಿಗೆ ಪ್ರತ್ಯಕ್ಷವಾಗಿ ತೋರಿಸಬಹುದಾಗಿತ್ತು. ಅವರು ಆ ದಿವಸ ಇದೇ ಸಭೆಯಲ್ಲಿ ಆರ್ಭಟ ಮಾಡುತ್ತ ನಾವು ಬೆಲೆಗಳನ್ನು ಇಳಿಸು ತ್ತೇವೆ, ಜನರಿಗೆ ಅಗ್ಗದ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುತ್ತೇವೆಂದು ಮೇಜನ್ನು ತಟ್ಟಿ ತಟ್ಟಿ ಹೇಳುತ್ತಿದ್ದರು. ಆದರೆ ಅವರು ಅಧಿಕಾರಕ್ಕೆ ಬರುವ ಮುನ್ನ ಆಹಾರಧಾನ್ಯಗಳ ಬೆಲೆಗಳು ಯಾವರೀತಿ ಇದ್ದವು, ಇವರು ಅಧಿಕಾರಕ್ಕೆ ಬಂದಮೇಲೆ ಆ ಬೆಲೆಗಳು ಎಷ್ಟರಮಟ್ಟಿಗೆ ಇಳಿಮುಖವಾಗಿವೆ ಎಂಬ ಬಗ್ಗೆ ಕೆಲವು ನಿದರ್ಶನಗಳನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ: ಅಕ್ಕಿ. ....

ಒಬ್ಬ ಸದಸ್ಯರು :—ಈ ದಿವಸ ಉತ್ತರ ಪ್ರದೇಶ ಚುನಾವಣೆಗಳು ಜನರ ಬೆಂಬಲ ನಮ್ಮ ಸರ್ಕಾರಕ್ಕೆ ಹೇಗಿದೆ ಎಂಬುದನ್ನು ತಿಳಿಸಿವೆ. ತಾವು ಪತ್ರಿಕೆಯನ್ನು ನೋಡಿದ್ದೀರಾ?

ಶ್ರೀ ಎಸ್. ಬಂಗಾರಪ್ಪ :—ನೋಡಿದ್ದೇನೆ. ಜನರ ಬೆಂಬಲ ಇರುವುದು ನಿಮಗಲ್ಲ. ಅದು ನೀವು ಇಲ್ಲವೇ ನಿಮ್ಮ ಪಕ್ಷ ಕೊಟ್ಟ ಹಣಕ್ಕೆ ಜನರ ಬೆಂಬಲವಿದೆ ಅಲ್ಲಿ ನಿಮ್ಮ ಆಡಳಿತ ಸರ್ಕಾರ 30-60 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಇಲ್ಲಿ ಕಳೆದ ನಿಮ್ಮೆಲ್ಲರ ಚುನಾವಣೆಗಾಗಿ ನಿಮ್ಮ ಪಕ್ಷ 3-4 ಕೋಟಿಗಳನ್ನು ಖರ್ಚು ಮಾಡಿತು. ಹಣಕ್ಕೆ ಜನರ ಬೆಂಬಲ ಯಾವತ್ತೂ ಇದ್ದುದೇ. ಜನತೆ ಹಣಕ್ಕೆ ಕೊಟ್ಟ ಬೆಂಬಲವನ್ನು ತಾವು ನಮಗೆ ದೊರೆತ ಜನಬೆಂಬಲ ಎಂದು ಭಾವಿಸಿದ್ದರೆ ಅದು ನಿಮ್ಮ ಭ್ರಾಂತಿ. ಅಕ್ಕಿ 1971-72ರಲ್ಲಿ ಹೊಸ ಕಾಂಗ್ರೆಸ್ ಆಡಳಿತಕ್ಕೆ ಬರುವ ಮೊದಲು ಒಂದು ಕೆ. ಜಿ. ಗೆ ಬರಿ 90 ಪೈಸೆಗಳಿತ್ತು. ಒಳ್ಳೆಯ ಅಕ್ಕಿ ಕೆ. ಜಿ. ಒಂದಕ್ಕೆ ರೂ: 1.10 ಇತ್ತು. ಈ ದಿವಸ ಅಂದರೆ 1974ರಲ್ಲಿ ಸಮಾನ್ಯ ಅಕ್ಕಿಯ ಬೆಲೆ ಕೆ. ಜಿ. ಒಂದಕ್ಕೆ ರೂ: 2.70 ರಿಂದ 3.00 ಏರಿದೆ. ಇದು ಗರೀಬೀ ಹಟಾವೋ ಮಾಡತಕ್ಕ ಸರ್ಕಾರದವರ ವಿಚಕ್ಷಣೆಯ ಆಡಳಿತದ ವೈಖರಿ. ಇದು ದೇಶದಲ್ಲಿರತಕ್ಕ ಬಡತನವನ್ನು ತೊಲಗಿಸತಕ್ಕ ವಿಧಾನ. ಇವರು ಇದರ ಧಾರಣೆ ಯನ್ನು ಇಳಿಸದಿದ್ದರೆ ಹೋಗಲಿ ಅದನ್ನು ಇದ್ದ ಮಟ್ಟದಲ್ಲಾದರೂ ಇಡುವುದಕ್ಕೆ ಇವರಿಂದ ಸಾಧ್ಯವಾಯಿತೇ ಅಂದರೆ ಅದೂ ಕೂಡ ಇಲ್ಲ. ಇವರು ಅಕ್ಕಿ ಬೆಲೆ

(ಶ್ರೀ ಎಸ್. ಬಂಗ್ಹಾರಪ್ಪ)

ಯನ್ನು 90 ಪೈಸೆಗಳಿಂದ 70 ಅಥವಾ 80 ಪೈಸೆಗಳಿಗೆ ಇಳಿಸಿದ್ದರೆ ಇವರನ್ನು ಶ್ಲಾಘನೆ ಮಾಡಿ ಇವರು ದೇಶದಲ್ಲಿ ಗರೀಬೀ ಹಟಾವೋ ಮಾಡುತ್ತಾರೆಂದು ನಂಬಬಹುದಾಗಿತ್ತು. ಅಂಥ ಯ್ಯಾವ ಸೂಚನೆಗಳೂ ಕಂಡುಬಂದಿಲ್ಲ-ಬರುವುದೂ ಇಲ್ಲ. ಸಾಮಾನುಗಳ ಬೆಲೆಗಳನ್ನು ಸುಮ್ಮನೆ ಏರಿಸಿಬಿಟ್ಟರೆ ದೇಶದಲ್ಲಿ ಎಲ್ಲರೂ ಶ್ರೀಮಂತರಾದಂತೆಯೋ ಇವರ ಲೆಕ್ಕ? ಇದೇನೇನು ಇವರ ಆ ಗರೀಬೀ ಹಟಾವೋ ಒನ್ನೆಲೆ? ತೊಗರೀ ಬೇಳೆ ಕೆ.ಜಿ. ಒಂದಕ್ಕೆ 1971-72ರಲ್ಲಿ 1.20 ರಿಂದ 1.50ರೂ. ಇತ್ತು. ಈ ದಿವಸ ಇದರ ಬೆಲೆ ಕೆ. ಜಿ ಒಂದಕ್ಕೆ ರೂ. 2 70 ರಿಂದ 3 00 ಏರಿದೆ ಕಡಲೆ ಬೇಳೆ ಕೆ. ಜಿ. ಒಂದೆ 0.80 ಪೈಸೆ ಇದ್ದದ್ದು ಈಗ 2.70 ರಿಂದ 3.00 ರೂ. ಗೆ ಏರಿದೆ.

ಉದ್ದಿನಬೇಳೆ 1-70 ರಿಂದ 2-00 ರೂಪಾಯಿ ಇದ್ದುದು 2-70 ರಿಂದ 3-50 ಕ್ಕೆ ಏರಿದೆ. ತೆಂಗಿನಕಾಯಿ 50 ರಿಂದ 70 ಪೈಸೆವರೆಗೆ ಇದ್ದುದು ಎರಡು ರೂಪಾಯಿ ಆಗಿದೆ. ಕಳ್ಳೆಕಾಯಿ ಎಣ್ಣೆ 2-75 ರಿಂದ 3-50 ರ ವರೆಗೆ ಇದ್ದುದು 7-50 ರಿಂದ 9 ರೂಪಾಯಿ ಆಗಿದೆ. ತೆಂಗಿನಕಾಯಿ ಎಣ್ಣೆ 3-50ರಿಂದ 4 ರೂಪಾಯಿ ಇದ್ದುದು 15 ರಿಂದ 18 ರೂಪಾಯಿತನಕ ಆಗಿದೆ ಹುರುಳಿಕಾಳು 60 ರಿಂದ 70 ಪೈಸೆ ಇದ್ದುದು 1-50 ರಿಂದ 1-90 ರ ವರೆಗೆ ಏರಿದೆ. ಮೆಣಸಿನಕಾಯಿ 1-50 ರಿಂದ 2 ರೂಪಾಯಿ ಇದ್ದುದು 6 ರಿಂದ 8 ರೂಪಾಯಿವರೆಗೆ ಏರಿದೆ. ಧಣಿಯ 1-20 ರಿಂದ 2-75ರ ವರೆಗೆ ಇದ್ದುದು 3-75 ರಿಂದ 5-50 ರೂಪಾಯಿವರೆಗೂ ಏರಿದೆ. ಹುಣಸೆ ಹಣ್ಣು 1-25 ರಿಂದ 1-75ರ ವರೆಗೆ ಇದ್ದುದು 4 ರೂಪಾಯಿನಿಂದ 5-50ರ ವರೆಗೆ ಇದೆ. ರಾಗಿ ಬೆಲೆ 75 ಪೈಸೆಯಿಂದ ಒಂದು ರೂಪಾಯಿ ಇದ್ದುದು 1-50 ರಿಂದ 2-00 ರೂಪಾಯಿಗಳ ವರೆಗೂ ಏರಿದೆ. ತುಪ್ಪ 12 ರೂಪಾಯಿಗೆ ಸಿಕ್ಕುತ್ತಿತ್ತು. ಅದರ ಬೆಲೆ 22 ರೂಪಾಯಿ ಆಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ :—ಅಂಗಡಿಯಲ್ಲಿ ಏನು ಧಾರಣೆ ಇದೆ ಎನ್ನುವುದನ್ನು ಯಾರು ಹೋಗಿ ಕೇಳಿದರೂ ಹೇಳುತ್ತಾರೆ. ಬೆಲೆಗಳ ಪಟ್ಟಿಯನ್ನು ಓದುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬೆಲೆಗಳು ಏರಿರತಕ್ಕದ್ದು ವಾಸ್ತವಾಂಶ. ಬೆಲೆ ಏರಿಕೆಗೆ ಏನು ಕಾರಣ, ಅದಕ್ಕೆ ಸಿದ್ಧೌಷಧವೇನು ಎನ್ನುವ ಬಗ್ಗೆ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರೆ ಬಹಳ ವಿಶ್ವಾಸದಿಂದ ಪರಿಶೀಲನೆ ಮಾಡುತ್ತೇವೆ

ಶ್ರೀ ಎಸ್ ಬಂಗಾರಪ್ಪ :....ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರೆ ಸರ್ಕಾರ ಬಹಳ ತೀವ್ರವಾಗಿ ಗಮನದಲ್ಲಿಡುತ್ತದೆಂದು ಮಾನ್ಯ ಚನ್ನಬಸಪ್ಪನವರು

ಹೇಳಿದರು. ಸೂಕ್ತಕಂಡ ಕಾಲದಲ್ಲಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳುವುದನ್ನು ಅವರು ಏಕೆ ಮರೆತರೋ ಅರ್ಥವಾಗಲಿಲ್ಲ.

ರಚನಾತ್ಮಕವಾದ ಸಲಹೆಗಳನ್ನು ಕೊಡತಕ್ಕದ್ದು ಒಂದು ವಿಧಾನವಿದೆ. ಆದರೆ ಇವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ದೇಶಕ್ಕೆ ಗರೀಬೀ ಹಟಾವೋ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ಉಳಿಸಿಕೊಂಡಿದ್ದಾರೆಯೇ? ಈ ದೇಶದ ಜನ ಚುನಾವಣೆ ಕಾಲದಲ್ಲಿ ಇವರನ್ನು ಆರಿಸಿ ಅಧಿಕಾರಕ್ಕೆ ಕಳುಹಿಸಿದಾಗ ಅವರಿಗೆ ಏನು ಕೊಟ್ಟರು ಎನ್ನುವುದಕ್ಕೆ ಉತ್ತರ ಮೊದಲು ಬರಬೇಕಾಗಿದೆ. ಅವರ ಉತ್ತರ ಬಂದ ನಂತರ ನಾನು ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ :—ಮಾನ್ಯ ಸದಸ್ಯರು ಹೇಳುವಂತೆ ನಾವು ಏನೂ ಮಾಡಿಲ್ಲ ಸರ್ಕಾರದಿಂದ ಒಂದು ಆಜ್ಞೆಯನ್ನು ಹೊರಡಿಸಿ ಇಂಥಿಂಥ ಪದಾರ್ಥಗಳ ಬೆಲೆ ಇಷ್ಟು ಇರಬೇಕು, ಇಷ್ಟು ಏರಬೇಕು ಎಂದು ಹುಕುಂ ಮಾಡಿದ್ದೇವೆನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವಾದರೆ ಅದನ್ನು ವಾದಕ್ಕಾಗಿ ಒಪ್ಪಿಕೊಳ್ಳೋಣ. ಆದರೆ ಬೆಲೆ ಏರಿಕೆಯನ್ನು ತಡೆಗಟ್ಟಿ ಬೆಲೆಗಳನ್ನು ತಗ್ಗಿಸಲು ಏನು ಮಾಡಬೇಕು ಎನ್ನುವುದನ್ನು ಹೇಳುತ್ತಾರೆಯೇ?

ಶ್ರೀ ಎಸ್. ಬಂಗಾರಪ್ಪ :.....ನಾನು ಹೇಳುವ ಮಾತುಗಳಿಂದ ಮಾನ್ಯ ಚನ್ನಬಸಪ್ಪನವರ ಮನಸ್ಸಿಗೆ ನೋವಾಗಬಹುದು. ಆದರೆ ಚುನಾವಣೆ ಕಾಲದಲ್ಲಿ ಯಾವ ಮಾತನ್ನು ದೇಶದ ಜನತೆಗೆ ಕೊಟ್ಟಿದ್ದರೋ ಅದನ್ನು ಇವರು ಅಧಿಕಾರಕ್ಕೆ ಬಂದ ಮೇಲೆ ಎಷ್ಟರಮಟ್ಟಿಗೆ ಉಳಿಸಿಕೊಂಡಿದ್ದಾರೆ? ದೇಶದ ಜನತೆಗೆ ಒಳ್ಳೆಯ ಆಡಳಿತವನ್ನು ಕೊಡುತ್ತೇವೆ, ಸತ್ಯಸಂಧರಂತೆ ನಡೆದುಕೊಳ್ಳುತ್ತೇವೆ, ನಿಜವಾಗಿ ಸಮಾಜವಾದವನ್ನು ಜಾರಿಗೆ ತರುತ್ತೇವೆ ಎನ್ನುವ ಮಾತನ್ನು ಏನು ಹೇಳಿದ್ದರೋ ಆ ಮಾತನ್ನು ಎಷ್ಟರಮಟ್ಟಿಗೆ ನಡೆಸಿದ್ದಾರೆ ಎನ್ನುವುದನ್ನು ಈ ಸಾಮ್ಯಾನುಗಳ ಬೆಲೆಗಳನ್ನು ಓದುವುದರ ಮೂಲಕ ಅವರ ಗಮನಕ್ಕೆ ತರುತಿದ್ದೇನೆ. ಅಗತ್ಯ ವಸ್ತುಗಳ ಬೆಲೆಗಳನ್ನು ಸ್ಥಿರವಾಗಿಡುತ್ತೇವೆ, ಹೆಚ್ಚಿಗೆ ತೊಂದರೆಯಾಗುವುದಕ್ಕೆ ಬಿಡುವುದಿಲ್ಲ, ಬೆಲೆಗಳು ಏರುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದ ಮಾತು ಎಲ್ಲಿ ಹೋಯಿತು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇನ್ನೂ ಬೇಕಾದಷ್ಟು ಇದೆ. ಅದನ್ನೆಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಈ ಹೊತ್ತಿನ ದಿವಸ ಕೇಂದ್ರ ಸರ್ಕಾರದ ಆಯವ್ಯಯ ಪತ್ರ ಮಂಡನೆಯಾಗಿರುವ ಬಗ್ಗೆ ಕೆಲವು ವಿವರಗಳು ಪತ್ರಿಕೆಗಳಲ್ಲಿ ಬಂದಿವೆ. ತಮಗೆಲ್ಲ ಗೊತ್ತಿರುವ ಹಾಗೆ ಸಿಗರೇಟಿನ ಮೇಲೆ ಈ ವರ್ಷ ತೆರಿಗೆ ಬೀಳುತ್ತದೆ ಈ ದೇಶದಲ್ಲಿ ಬಡಜನ ಸಿಗರೇಟನ್ನು ಸೇದಬಾರದೆ? ನಂಬರ್ ಮುವ್ವತ್ತರ ಬೀಡಿಗಳನ್ನೇ ಸೇದಬೇಕೇ? ಬೀಡಿಗಳ ಬೆಲೆಯೂ ಕೂಡ

(ಎಸ್. ಬಂಗಾರಪ್ಪ)

ಜಾಸ್ತಿಯಾಗಿದೆ. ಬಡಜನರು ಯಾರೂ ಸಿಗರೇಟನ್ನು ಸೇದಬಾರದು ಎನ್ನುವುದು ಇವರ ಅಭಿಪ್ರಾಯವೇ ? ವರ್ಷ ವರ್ಷವೂ ಸಿಗರೇಟಿನ ಮೇಲೆ ತೆರಿಗೆಯನ್ನು ಹಾಕುತ್ತಲೇ ಇದ್ದಾರೆ. ಎಷ್ಟು ತೆರಿಗೆಯನ್ನು ಹಾಕಿದರೂ ಐಶ್ವರ್ಯವಂತರು, ಬಂಡವಾಳಷಾಹಿಗಳು ಗೋಲ್ಡ್‌ಫ್ಲೇಕ್, 555 ಮುಂತಾದ ಹೆಚ್ಚು ಬೆಲೆಯ ಸಿಗರೇಟುಗಳನ್ನೇ ಸೇದುತ್ತಾರೆ ಎಷ್ಟು ಬೆಲೆ ಜಾಸ್ತಿ ಮಾಡಿದರೂ ಕೂಡ, 10 ರೂಪಾಯಿ ಮಾಡಿದರೂ ಕೂಡ ಅವರು ಸೇದುತ್ತಾರೆ. ತೆಂಗಿನಕಾಯಿ ಎಣ್ಣೆಯ ಬೆಲೆ 18 ರೂಪಾಯಿ ಇರುವುದು 38 ರೂಪಾಯಿ ಆದರೂ ಕೂಡ ಅವರಿಗೆ ಕೊಂಡುಕೊಳ್ಳತಕ್ಕ ಶಕ್ತಿ ಇರುತ್ತದೆ. ಅವರು ಕಪ್ಪು ಹಣ ಇರುವಂಥ ಜನ. ಆದರೆ ಬಡವರು ಮತ್ತು ಮಧ್ಯಮ ವರ್ಗದ ಜನರ ಕಷ್ಟವೇನು ಎನ್ನುವುದನ್ನು ಯೋಚನೆ ಮಾಡಬೇಕು. ಈ ಜನರಿಗೆ ಕೊಟ್ಟಂಥ ಮಾತು ಎಲ್ಲಿ ಹೋಯಿತು ? ಜನತೆ ಇವರ ಮೇಲೆ ಇಟ್ಟಿರತಕ್ಕ ನಂಬಿಕೆ, ಯಾವ ನಂಬಿಕೆಯಿಂದ ಪಾರ್ಲಿಮೆಂಟಿನಲ್ಲಿ ಮೂರನೇ ಎರಡು ಭಾಗಕ್ಕಿಂತ ಹೆಚ್ಚು ಜನ ಏಕಪಕ್ಷವಾಗಿದ್ದು ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದಕ್ಕೆ ಬೇಕಾದ ಬಹುಮತವನ್ನು ಒದಗಿಸಿ ಕೊಟ್ಟು ರಾಜ್ಯದಲ್ಲಿರುವ 216 ಜನ ಸದಸ್ಯರಲ್ಲಿ 165 ಜನರಷ್ಟು ಬಹುಮತವನ್ನು ಒದಗಿಸಿ ಕೊಟ್ಟು ಇವರನ್ನು ಅಧಿಕಾರಕ್ಕೆ ಕಳುಹಿಸಿದ್ದಾರೆ. ಆದರೆ ಇವರು ಮಾಡಿರುವುದೇನು ? ಜನತೆಗೆ ಸಂಪೂರ್ಣ ದ್ರೋಹ ಮಾಡಿದ್ದಾರೆ, ವಂಚನೆ ಮಾಡಿದ್ದಾರೆ, ಸಂಪೂರ್ಣ ಮೋಸ ಮಾಡಿದ್ದಾರೆ ಎನ್ನುವುದು ವ್ಯಕ್ತಪಟ್ಟಿದೆ. ಬೆಲೆಗಳು ಏರುವುದಕ್ಕೆ ಕಾರಣವೇನು ? ಕೃತಕ ಅಭಾವವೇ ಇದಕ್ಕೆ ಕಾರಣ. ಕೇಂದ್ರದಲ್ಲಿ ಬಜೆಟ್ ಮಂಡನೆ ಮಾಡುತ್ತಾರೆಂದರೆ ಪೇಟೆಯಲ್ಲಿ ಯಾವ ಸಾಮಾನುಗಳೂ ಸಿಕ್ಕುವುದಿಲ್ಲ. ಬಜೆಟ್ ಮಂಡನೆಯಾಯಿತು ಎಂದರೆ ಮಾರನೆಯ ದಿವಸವೇ ಎಲ್ಲ ಕೊರತೆಯೂ ಹೋಗಿ ಹೆಚ್ಚಿದ ಬೆಲೆಗಳೊಂದಿಗೆ ಮಾರುಕಟ್ಟೆಗೆ ಪದಾರ್ಥಗಳು ಬಂದು ತುಂಬಿಕೊಳ್ಳುತ್ತವೆ. ಇದಕ್ಕೆ ನನ್ನ ಸಲಹೆ ಏನು ಎಂದರೆ ಪ್ರಜಾಪ್ರಭುತ್ವದಲ್ಲಿ ನಿಷ್ಠೆ ಇದ್ದರೆ, ಬಡವರ ಬಗ್ಗೆ ಅನುಕಂಪವಿದ್ದರೆ, ಕರುಣೆ ಇದ್ದರೆ, ಮಾಡಬೇಕು ಎನ್ನುವ ಮನಸ್ಸಿದ್ದರೆ ದೇಶದಲ್ಲಿರತಕ್ಕ ಕಪ್ಪು ಹಣವನ್ನು ಎಷ್ಟರ ಮಟ್ಟಿಗೆ ಕಡಮೆ ಮಾಡಿದ್ದೀರಿ ಎನ್ನುವ ಮಾತನ್ನು ಕೇಳುತ್ತೇನೆ.

ಕೇಂದ್ರದ ಆಯವ್ಯಯ ಪತ್ರ ಮಂಡಿಸಿರುವ ವಿವರಗಳು ಇಂದು ಎಲ್ಲ ಪತ್ರಿಕೆಗಳಲ್ಲೂ ಬಂದಿವೆ. ಅವನ್ನು ನಾವೆಲ್ಲರೂ ನೋಡಿದ್ದೇವೆ. ಅದರಲ್ಲಿ ಬಟ್ಟೆ ಕಾಗದ ಹಾಗೂ ಇನ್ನೂ ಕೆಲವಾರು ವಸ್ತುಗಳ ಮೇಲೆ ಹೆಚ್ಚಿಗೆ ತೆರಿಗೆ ಹಾಕಿರುವುದನ್ನು ನಾವು ನೋಡಬಹುದು. ಕಾಗದದ ಮೇಲೆ ತೆರಿಗೆ ಹಾಕುವುದರಿಂದ ನಮಗೆ ಕಾಗದದ ಬೆಲೆ ಏರುತ್ತದೆ. ನಮಗೆ ಹೆಚ್ಚು ಕಾಗದ ಬೇಕಾಗಿತ್ತು. ಏಕೆಂದರೆ ನಿಮ್ಮ ಪಾತಕಗಳನ್ನು ಬರೆಯುವುದಕ್ಕೆ ಮತ್ತು ನೀವು ಅಧಿಕಾರದಲ್ಲಿದ್ದಾಗ ಇಂತಿಂತಹ ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ ಎಷ್ಟು ಬೆಲೆಗಳನ್ನು ಏರಿಸಿ ಜನತೆಗೆ ಸಹಾಯ ಮಾಡಿದ್ದೀರಿ ಮತ್ತು ಎಷ್ಟು ಸಾರಿ ಕಪ್ಪು ಹಣವನ್ನು ಹೊರಕೆ

ತೆಗೆದಿದ್ದೀರಿ ಹಾಗೂ ನೀವು ಏನೇನು ಮಹಾ ಸಾಧನೆಗಳನ್ನು ಮಾಡಿದ್ದೀರಿ ಅವೆಲ್ಲವುಗಳ ಜಾತಕವನ್ನು ಬರೆಯಲು ನಮಗೆ ಬಹಳ ಕಾಗದ ಬೇಕಾಗಿತ್ತು. ಅಂತಹ ಕಾಗದದ ಮೇಲೆ ತೆರಿಗೆ ಹಾಕಿದ್ದಾರೆ. ಏಕೆಂದರೆ ನೀವು ಮಾಡಿರುವ ಹಿತಸಾಧನೆಗಳನ್ನು ನಾವು ಚೆನ್ನಾಗಿ ಕಾಗದದಲ್ಲಿ ಬರೆದು ನಿಮ್ಮ ಇಂದಿರಾ ಗಾಂಧಿಯವರು ದೆಹಲಿಯಲ್ಲಿ ರೆಡ್ ಪೋರ್ಟ್ ಹತ್ತಿರ ತೂತು ಮಾಡಿ ಒಂದು ಕಾಲ ಕೋಶವನ್ನು ಹೇಗೆ ನೆಟ್ಟಿದ್ದಾರೋ ಹಾಗೆ ಇಲ್ಲಿ ನಿಮ್ಮ ವಿಧಾನ ಸೌಧದ ಮುಂದೆ ನೀವು ಮಾಡಿರುವ ವಿವೇಕಗಳು ಹಾಗೂ ಅವಿವೇಕದ ಕೆಲಸಗಳು ಮತ್ತು ನೀವು ಮಾಡಿರುವ ಘೋಷಣೆಗಳ ಪರಿಣಾಮ ಇತ್ಯಾದಿ ಎಲ್ಲ ನಿಮ್ಮ ಜಾತಕ ಗಳನ್ನು ಕಾಗದದಲ್ಲಿ ಪೂರ್ತಿಯಾಗಿ ಬರೆದು ಇದರ ಜೊತೆಯಲ್ಲಿ ನಿಮ್ಮ ಫೋಟೋ ಗಳನ್ನು ಹಾಕಿಸಿ ಇಲ್ಲೂ ಕೂಡ ಅಂತಹ ಒಂದು ಕಾಲಕೋಶವನ್ನು ನೆಡಬಹುದು. ಏಕೆಂದರೆ ಮುಂದಿನ ಪೀಳಿಗೆಯವರು ಇದನ್ನು ನೋಡಿ ನಮ್ಮ ಮಾನ್ಯ ಚನ್ನಬಸಪ್ಪ ನವರು ಇದ್ದರು ಅವರು ಇಂತಿಂತಹ ಅಮೋಘವಾದ ಕೆಲಸಗಳನ್ನು ಮಾಡಿದವರು ಎನ್ನುವುದು ಜನತೆಗೆ ಗೊತ್ತಾಗಲಿ ಎಂದು ಆ ರೀತಿಯಾಗಿ ಮಾಡಿ ಜಾತಕ ಬರೆಯಲು ಕಾಗದ ಹೆಚ್ಚಾಗಿ ಬೇಕಾಗಿತ್ತು. ಆದರೆ ಇಂದು ಕಾಗದಕ್ಕೂ ಹೆಚ್ಚು ತೆರಿಗೆ ಹಾಕಿದ್ದಾರೆ. ಇಂದಿರಾ ಗಾಂಧಿಯವರು ಅಲ್ಲಿ ಕಾಲಕೋಶ ಎಂದು ಮಾಡಿದಂತೆ ಇಲ್ಲೂ ನೀವು ಒಂದು ಕಾಲಕೋಶ ಮಾಡಬಹುದು.

3-00 P. M.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಮಾನ್ಯ ಸದಸ್ಯರು ಇಲ್ಲಿ ಹೇಳುತ್ತಿರುವುದು ಕೇಂದ್ರದ ಬಡ್ಜೆಟ್ಟು ಬಗ್ಗೆ. ಇದಕ್ಕೂ ರಾಜ್ಯಪಾಲರ ಭಾಷಣಕ್ಕೂ ಏನು ಸಂಬಂಧ ಇದೆ? ಇದು ಹೇಗಿದೆ ಎಂದರೆ ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಇದೆಯೋ ಅಷ್ಟೇ ಸಂಬಂಧ ಇದಕ್ಕಿರುವುದು.

ವೈಸ್ ಚೇರ್ಮನ್ನರವರು.—ಇದರಲ್ಲೇನೂ ಪಾಯಿಂಟ್ ಆಫ್ ಆರ್ಡರಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಯಾವ ಮಾತನ್ನು ಜನತೆಗೆ ಕೊಟ್ಟು ಬಂದರೋ ಅದನ್ನು ಅವರು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. ಇಂದು ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ನಿಮ್ಮ ಬಗ್ಗೆ ಅಸಮಾಧಾನ ಸಂಪೂರ್ಣವಾಗಿ ಹುಟ್ಟಿದೆ. ಇನ್ನು ಮುಂದೆ ಪ್ರಜಾ ಪ್ರಭುತ್ವದ ಮೇಲೆ ನೀವು ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ನಿಮ್ಮಲ್ಲಿ ಅಪ ನಂಬಿಕೆ ಜನತೆಗೆ ಬಂದಿದೆ. ನೀವು ಮಾಡುತ್ತಿರುವುದಾದರೂ ಏನು ಎಂದರೆ ಮಂತ್ರಿಮಂಡಲದ ರಚನೆ ನಮಗೆ ಬೇಕಾದವರಿಗೆ ಅನುಕೂಲಗಳನ್ನು ಮಾಡಿ ಕೊಡುವುದು ಇಷ್ಟೇ. ನಮಗೆಲ್ಲಾ ಗೊತ್ತಿದೆ. ಹಿಂದೆ ಆಹಾರ ಪದಾರ್ಥಗಳ ಬೆಲೆ

(ಎಸ್. ಬಂಗಾರಪ್ಪ)

ಏರಿದಾಗ ನೀವು ಏನೇನು ಅನುಕೂಲಗಳನ್ನು ಜನಕ್ಕೆ ಮಾಡಿಕೊಟ್ಟಿರಿ ಎನ್ನುವುದು. ನಿಮಗೆ ಸುವ್ಯವಸ್ಥಿತವಾಗಿ ಆಡಳಿತ ನಡೆಸಲು ಆಗುವುದಿಲ್ಲ ಎನ್ನುವುದು ಇದರಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ನಮ್ಮ ಮಾನ್ಯ ಚನ್ನಬಸಪ್ಪನವರು ಜನಕ್ಕೆ ಅನುಕೂಲ ಮಾಡಬೇಕು ಎನ್ನುವ ಮನಸ್ಸು ಇದ್ದರೆ ಈಗಲೂ ಅವರು ಮಾಡ ಬಹುದು. ಆದರೆ ಅವರು ಮಾಡುವುದಿಲ್ಲ. ಬರೀ ಬಾಯಲ್ಲಿ ಗರೀಬೀ ಹಟಾವೋ ಎಂದು ಘೋಷಣೆಗಳನ್ನು ಕೂಗುವುದರಲ್ಲೇ ನಿಮ್ಮ ಎಲ್ಲ ವ್ಯವಹಾರಗಳೂ ಆದವು. ಬಡ ಜನರೇನೋ ನಿಮ್ಮ ಘೋಷಣೆಗಳಿಗೆ ಮರುಳಾಗಿ ನಿಮಗೆ ವೋಟು ಕೊಟ್ಟರು. ಆದರೆ ಈಗ ಜನ ನೀವು ಏನು ಮಾಡಿದ್ದೀರಿ ಎನ್ನುವುದು ಅವರಿಗೆ ಅರ್ಥವಾಗುತ್ತಿದೆ. ಇದುವರೆಗೂ ನೀವು ಗರೀಬೀ ಹಟಾವೋ ಎನ್ನುವ ಘೋಷಣೆಯನ್ನು ಕೂಗುತ್ತಿದ್ದಿರಿ. ಇನ್ನು ಮುಂದೆ ಈ ಘೋಷಣೆಯನ್ನು ಕೂಗುವುದಿಲ್ಲ. ಆಗ ಬೇರೆ ರೀತಿಯಾದ ಘೋಷಣೆ ಕೂಗುತ್ತಾರೆ. ಏಕೆಂದರೆ ಘೋಷಣಾ ಪ್ರಿಯರಲ್ಲವೇ ? ಮುಂದೆ ಇವರು "ಅಮೀರೀ ಹಟಾವೋ" ಎನ್ನುವ ಘೋಷಣೆಯನ್ನು ಕೂಗಲು ಆರಂಭಿಸುತ್ತಾರೆ ಏಕೆಂದರೆ ಇದುವರೆಗೆ ಬಡವರನ್ನು ಉದ್ಧಾರ ಮಾಡಿಯಾಯಿತು. ಇನ್ನು ಮುಂದೆ ಶ್ರೀಮಂತರನ್ನುದ್ಧಾರ ಮಾಡುತ್ತೇವೆಂದು ಹೇಳಿ ಕಪ್ಪು ಹಣ ಇರುವ ಶ್ರೀಮಂತರಿಗೆ ಸಹಾಯ ಮಾಡು ತ್ತೇವೆಂದು ಹೋಗುತ್ತಾರೆ. ಹೀಗೆ ನೀವು ಇನ್ನು ಮುಂದೆ ಮಾಡುತ್ತಾ ಹೋದರೆ ಜನಗಳಿಗೆ ನಿಮ್ಮಲ್ಲಿ ನಂಬಿಕೆ ಕಡಿಮೆಯಾಗುತ್ತಾ ಹೋಗುತ್ತದೆ.

ಇನ್ನು ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವಿಚಾರ ಬಂದಿದೆ. ಅದು ಈ ರೀತಿ ಇದೆ. ಐದನೇ ಯೋಜನೆಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಆರಂಭವಾಗದು ಎನ್ನುವ ಶೀರ್ಷಿಕೆಯಲ್ಲಿ ಹೀಗಿದೆ : "ಐದನೇ ಯೋಜನೆಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಆರಂಭವಾಗುವುದಿಲ್ಲ ಎಂದು ಕೇಂದ್ರ ಉಕ್ಕು ಮತ್ತು ಗಣಿ ಖಾತೆ ಮಂತ್ರಿ ಶ್ರೀ ಕೆ. ಡಿ. ಮಾಳವೀಯ ಅವರು ಇಂದು ಲೋಕ ಸಭೆಗೆ ತಿಳಿಸಿದರು." ಎಂದಿದೆ.

ಇದೇ ರೀತಿ ಇತರ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ವಿಜಯನಗರದ ಉಕ್ಕು ಕಾರ್ಖಾನೆ ಐದನೇ ಯೋಜನೆಯಲ್ಲೇ ಆರಂಭವಾಗುತ್ತದೆ ಎಂದು ನಮ್ಮ ಕೈಗಾರಿಕಾ ಮಂತ್ರಿಗಳಾದ ಶ್ರೀ ಕೃಷ್ಣಾರವರೇನೋ ಹೇಳಿಕೆ ಕೊಟ್ಟರು, ಅವರು ಇದಕ್ಕಾಗಿ ಅನೇಕ ಬಾರಿ ದೆಹಲಿಗೂ ಹೋಗಿ ಬಂದರು ಕೊನೆಗೂ ಈಗ ಇದು ಆರಂಭ ವಾಗುವುದಿಲ್ಲ. ಎನ್ನುವ ಹೇಳಿಕೆ ಬಂದಿದೆ. ಇದರಿಂದ ಜನರಲ್ಲಿ ನಿಮ್ಮ ಬಗ್ಗೆ ಇರುವ ನಂಬಿಕೆ ಬರಬರುತ್ತಾ ಕಡಿಮೆಯಾಗುತ್ತಿದೆ. ವಿಜಯನಗರ ಉಕ್ಕು ಕಾರ್ಖಾನೆಯನ್ನು ಕೈ ಬಿಡುವುದಿಲ್ಲ ಎಂದು ಸ್ಪಷ್ಟವಾಗಿ ಇಲ್ಲಿ ಹೇಳಿದ್ದರೂ ಇನ್ನೂ ಇದರ ಬಗ್ಗೆ ಏನೂ ಆಗಲಿಲ್ಲ. ಇಂದು ಪತ್ರಿಕೆಯಲ್ಲಿ ಬಂದಿರುವಂತೆ ನೋಡಿದರೆ ಇದು ಐದನೆ ಯೋಜನೆಯಲ್ಲೂ ಕೂಡ ಆಗುವುದಿಲ್ಲ ಎನ್ನುವುದು

ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಇದಕ್ಕಾಗಿ ನಾನು ಸರಕಾರವನ್ನು ಕೇಳು ವುದು, ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದನ್ನು ಸಭೆಗೆ ತಿಳಿಸಬೇಕು. ಅಲ್ಲದೆ ಇದರ ಬಗ್ಗೆ ಬೇಕಾದಷ್ಟು ಪ್ರವಾಸ ಮಾಡಿ ಪೆಟ್ರೋಲು ಖರ್ಚು ಮಾಡಿದ್ದೀರಿ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ಮತ್ತು ಯಾವ ಕಾರಣಗಳಿಗಾಗಿ ಎನ್ನುವ ಅಕೌಂಟುಗಳನ್ನೆಲ್ಲಾ ನೀವು ಈ ಸಭೆಗೆ ಒದಗಿಸಿಕೊಡಬೇಕಾಗುತ್ತದೆ. ಜನರಲ್ಲಿ ನಿಮ್ಮ ಬಗ್ಗೆ ಅಪನಂಬಿಕೆ ಹೆಚ್ಚಾಗುತ್ತಾ ಬರುತ್ತಿದೆ. ಇದಕ್ಕಾಗಿ ನಾನು ಇದನ್ನು ಕೊಡಬೇಕೆಂದು ಕೇಳುತ್ತೇನೆ.

ಇನ್ನು ಭೂಸುಧಾರಣೆ ಬಗೆ ಬಡವರಿಗೆ ಅನುಕೂಲ ಮಾಡುತ್ತೇವೆಂದು ಇಲ್ಲಿ ದೊಡ್ಡದಾಗಿ ಹೇಳಿದರು ಮತ್ತು ಇದರ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಡವರ ಕಷ್ಟಗಳನ್ನು ಪರಿಹಾರ ಮಾಡುತ್ತೇವೆಂದೂ ಹೇಳಿದರು. ಆದರೆ ನೀವು ಮಾಡಿರುವ ಕಾರ್ಯಗಳನ್ನು ನೋಡಿದರೆ ಬೆಲೆ ಏರಿಕೆ ಬಗ್ಗೆ ಹಾಗೂ ಜನಕ್ಕೆ ಕೊಡ ಆಶ್ವಾಸನೆಗಳ ಬಗ್ಗೆ ಯಾವುದನ್ನೂ ನೆರವೇರಿಸಿ ಕೊಡಲು ನಿಮಗೆ ಆಗಲಿಲ್ಲ. ನಿಮಗೆ ಹೇಗೂ ಐದು ವರ್ಷಗಳ ಕಾಲಾವಧಿ ಇದೆ ಎಂದು ನಿಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಇದಕ್ಕೆ ಇನ್ನು ಮುಂದಾದರೂ ಅವಕಾಶ ಕೊಡಬೇಡಿ ಎಂದು ಹೇಳ ಬಯಸುತ್ತೇನೆ. ನೀವುಗಳೆಲ್ಲಾ ದೊಡ್ಡ ದಾಗಿ ನಿಮ್ಮ ಎಂ. ಪಿ. ಸಿ. ಸಿ. ಸಭೆಯಲ್ಲಿ ಹಾಗೂ ಇತರ ಕಡೆಗಳಲ್ಲಿ ನಗರ ಆಸ್ತಿ ಮಿತಿ ಮಸೂದೆ ತರುತ್ತೇವೆ ಎಂದು ಹೇಳುತ್ತಾ ಬಂದಿರಿ. ಈಗ ಅದು ಎಲ್ಲಿಗೋ ಮಾಯವಾಗಿ ಹೋಯಿತು. ಕೊನೆಯದಾಗಿ ಒಂದು ಎಚ್ಚರಿಕೆ ಮಾತನ್ನು ಸರಕಾರಕ್ಕೆ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಯು.ಪಿ. ಎಲೆಕ್ಷನ್ ಏನಾಗುತ್ತಿದೆ ಎಂದು ಎಲ್ಲರೂ ನೋಡುತ್ತಿದ್ದಾರೆ, ಹಾಗೆ ಈಗ ಗುಜರಾತಿನಲ್ಲಿ ಏನಾಗುತ್ತಿದೆ ನೋಡಿ. ನಮ್ಮ ಮಾನ್ಯ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಇರುವ ಚೀಫ್ ಇಂಜನೀಯರ್‌ರವರು ಬೇಕಾದಷ್ಟು ಜನಕ್ಕೆ ಕೆಲಸ ಕೊಡುತ್ತೇವೆಂದು ಹೇಳಿದ್ದರು. ಯಾವಾಗ ಪಿ. ಡಬ್ಲ್ಯು ಡಿ. ಇಲಾಖೆ ಯಲ್ಲಿ ಇಂತಹ ಒಂದು ಎಂಪ್ಲಾಯ್‌ಮೆಂಟು ಪ್ರೋಗ್ರಾಂ ಇದೆ ಎಂದು ತಿಳಿದು ಪ್ರಕಟವಾಯಿತೋ ಬೀದರ್, ರಾಯಚೂರು ಗುಲ್ಬರ್ಗಾ ಹಾಗೆ ದೇಶದ ನಾನಾ ಭಾಗಗಳಿಂದ ಸುಮಾರು 16 ಸಾವಿರ ಹುಡುಗರು ಕೆಲಸಕ್ಕಾಗಿ ಬಂದರು. ಇವರಲ್ಲಿ ಬಿ. ಎ. ಹಾಗೂ ಎಸ್. ಎಸ್. ಎಲ್. ಸಿ. ಪರೀಕ್ಷೆಗಳನ್ನು ಪಾಸು ಮಾಡಿದವರು ಎಲ್ಲಾ ಇದ್ದರು ಇವರೆಲ್ಲಾ ಒಟ್ಟಿಗೆ ಬಂದ ಕೂಡಲೇ ಇಲ್ಲಿದ್ದ ಪಿ. ಡಬ್ಲ್ಯು ಡಿ. ಸೆಕ್ರೆಟರಿಗಳು ಇವರನ್ನು ಇಂಟರ್‌ವ್ಯೂ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಕುಳಿತುಬಿಟ್ಟರು. ಇದರಿಂದಾಗಿ ಅಲ್ಲಿ ಬಂದಿದ್ದ ಹುಡುಗರಲ್ಲಿ ಕೆಲವರು ಪಿ. ಡಬ್ಲ್ಯು. ಡಿ. ಇಲಾಖೆಯ ಕಟ್ಟಡಗಳಿಗೆ ಕಲ್ಲು ತೂರಿ ಗಾಜನ್ನು ಒಡೆದು ಹಾಕಿದರು. ಎಲ್ಲರೂ ಹಾಗೆ ಮಾಡಲಿಲ್ಲ. ಎಲ್ಲ ಹುಡುಗರೂ ತಿರುಗಿ ಬಿದ್ದಿದ್ದರೆ

(ಶ್ರೀ ಎಸ್. ಬಂಗಾರಪ್ಪ)

ನಮ್ಮ ಮಾನ್ಯ ಚನ್ನಬಸಪ್ಪನವರ ಇಲಾಖೆಯು ಉಳಿಯುತ್ತಲೇ ಇರುತ್ತಿರಲಿಲ್ಲ. ಹೀಗಿದೆ ನಿಮ್ಮ ಆಡಳಿತದ ವೈಖರಿ. ನಿಮ್ಮ ಕಾಲವೂ ಹತ್ತಿರ ಬರುತ್ತಿದೆ. ಶ್ರೀ ಚನ್ನಬಸಪ್ಪನವರೇನೋ ಒಂದು ರೀತಿಯಾಗಿ ಆಡಳಿತದಲ್ಲಿ ಬಂದು ಬಿಟ್ಟಿರಿ. ಆದರೆ ನಿಮ್ಮನ್ನೂ ಬಿಡುವುದಿಲ್ಲ. ನಿಮಗಿರುವ ಕಾನೂನು ಕಟ್ಟಲೆಗಳು ಯಾವುದನ್ನೂ ಜನ ನೋಡುವುದಿಲ್ಲ ಜನರಲ್ಲಿ ನಂಬಿಕೆ ಹೋಗಿರುವುದರಿಂದ ಅದನ್ನು ಗಳಿಸಿಕೊಳ್ಳುವುದಕ್ಕೆ ಈಗಿನಿಂದಲೂ ಯತ್ನ ಮಾಡದಿದ್ದರೆ ನೀವೇನೂ ಉಳಿಯಲು ಸಾಧ್ಯವಿಲ್ಲ. ಇದನ್ನು ನೆನಪಿನಲ್ಲಿಡಬೇಕು.

ಮುಂದೆ ಒಂದು ದಿನ ಈ ರಾಜ್ಯದಲ್ಲಿಯೂ ಕ್ರಾಂತಿ ನಡೆಯುವ ಸೂಚನೆ ಕಾಣಿಸುತ್ತಿದೆ. ಈ ವಿಚಾರದಲ್ಲಿ ಹಿರಿಯ ರಾಜಕಾರಣಿಯಾಗಿರುವ ಶ್ರೀಮಾನ್ ಜಯಪ್ರಕಾಶ ನಾರಾಯಣ್ ಅವರು ಒಂದು ಸ್ಪಷ್ಟವಾದ ಅಪ್ಪಣೆಯನ್ನು ಯುವ ಜನಾಂಗಕ್ಕೆ ಕೊಡಿಸಿದ್ದಾರೆ. ಮತ್ತು ಬಹಳ ಒಳ್ಳೆಯ ಮಾತುಗಳನ್ನು ಹೇಳಿ ಕೊಟ್ಟಿದ್ದಾರೆ. ಈ ದೇಶವನ್ನು ಕಟ್ಟುವುದಕೋಸ್ಕರ ಬಿಸಿ ರಕ್ತವಿರುವ ತರುಣರಿಗೆ ಒಳ್ಳೆಯ ನಾಂದಿ ಹಾಕಿಕೊಟ್ಟಿದ್ದಾರೆ. ಒಳ್ಳೆಯ ದೇಶವನ್ನು ಕಟ್ಟುವುದಕೋಸ್ಕರ ಯುವಜನರು ಯೋಚನೆ ಮಾಡಿ ಎಂದು ಹೇಳಿದ್ದಾರೆ. ಮತ್ತು ಕ್ರಾಂತಿಯಾಗದೆ ಈ ದೇಶ ಉಳಿಯುವುದಿಲ್ಲ ಎಂದು ಹೇಳಿದ್ದಾರೆ. ಕ್ರಾಂತಿಯಾಗುವ ಸಂದರ್ಭ ಬಂದಾಗ ಮಾನ್ಯ ಚನ್ನಬಸಪ್ಪನವರು ಸಹ ಅದು ಸರಿ ಎಂದು ಕೈತಟ್ಟಿಬಿಟ್ಟರೆ. ಮತ್ತೆ ಅಧಿಕಾರಕ್ಕೆ ಬರುವ ಅವಕಾಶ ಸಿಗಬಹುದು ಎಂದು ಹೇಳಿ, ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತೇನೆ.

†ಶ್ರೀ ಎ. ಜಿ. ಕೊಡ್ಗಿ (ಬೈಂದೂರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತಾ ಕೆಲವೊಂದು ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಕಳೆದ ಒಂದು ವರ್ಷದಲ್ಲಿ ಶಾಸನ ಸುವ್ಯವಸ್ಥೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿತ್ತು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಗಡಿ ಪ್ರದೇಶದಲ್ಲಿ ಗಲಾಟೆಯಾದಾಗ ಯಾರು ಕಷ್ಟ ನಷ್ಟಗಳಿಗೆ ಒಳಗಾದರೋ ಅವರಿಗೆ "ಎಕ್ಸ್–ಗ್ರೇಷಿಯಾ" ಪರಿಹಾರವನ್ನು ನಮ್ಮ ಸರ್ಕಾರದವರು ಕೊಟ್ಟರು. ಆದರೆ ಮುಂಬೈನಲ್ಲಿ ಕನ್ನಡಿಗರಿಗೆ ಆದ ಕಷ್ಟನಷ್ಟಗಳಿಗೆ ಅಲ್ಲಿಯ ಸರ್ಕಾರದವರು ಪರಿಹಾರ ಕೊಡದಿರುವುದು ಖೇದ ಉಂಟು ಮಾಡುವ ವಿಚಾರ. ಈ ಬಗ್ಗೆ ಈ ಸದನದಲ್ಲಿ ಒಂದು ನಿರ್ಣಯವನ್ನು ಪಾಸ್ ಮಾಡಿ ಕೇಂದ್ರ ಸರಕಾರಕ್ಕೆ ಕಳಿಸಿ ಕೊಡಲಾಗಿದೆ. ಸರ್ಕಾರದವರು ಅದರ ಬಗ್ಗೆ ಕೇಂದ್ರ ಸರ್ಕಾರದವರ ಮೇಲೆ ಒತ್ತಡ ತರುವುದರ ಮೂಲಕ ಅಲ್ಲಿನ ಕನ್ನಡಿಗರಿಗೆ ಯೋಗ್ಯ ಪರಿಹಾರ ದೊರಕಿಸಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ನಮ್ಮ ಸರ್ಕಾರವು ಯೋಗ್ಯ ಪುರಸ್ಕಾರ ಕೊಡುವುದರ ಮೂಲಕ ತಾಮ್ರ ಪತ್ರಗಳನ್ನು ನೀಡಿದೆ. ಇವರಿಗೆ ಪುರಸ್ಕಾರ ಕೊಡುವುದರ ಜೊತೆಗೆ ಅರ್ಜಿ ಹಾಕಿಕೊಂಡಿರುವ ಎಲ್ಲರಿಗೂ ಮಾಸಿಕ ವೇತನವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕನ್ನಡವನ್ನು ನಾವು ಅಧಿಕೃತ ಭಾಷೆ ಎಂದು ಪರಿಗಣಿಸಿದ್ದೇವೆ. ಆದರೆ ಕನ್ನಡಕ್ಕೆ ಇಂದು ಸಾಕಷ್ಟು ರೀತಿಯ ಪ್ರೋತ್ಸಾಹ ದೊರಕುತ್ತಿಲ್ಲ; ನಮ್ಮ ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡುವ ಬಗ್ಗೆ ಸರ್ಕಾರ ಸಕ್ರಿಯ ಪಾತ್ರ ವಹಿಸಬೇಕು.

ಇನ್ನು ಭೂಸುಧಾರಣೆ ಈಗ ಜಾರಿಗೆ ಬಂದಿದ್ದರೂ ಸಹ ಅದನ್ನು ಯೋಗ್ಯ ರೀತಿಯಲ್ಲಿ ಆಚರಣೆಗೆ ತರಲು ಸರ್ಕಾರದವರು ಹೆಚ್ಚಿನ ಮುತುವರ್ಜಿ ತೆಗೆದು ಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರುವ ಅನೇಕ ಜನ ಒಕ್ಕಲುಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನ ದೊರಕುವಂತೆ ಸರ್ಕಾರದವರು ನೋಡಿಕೊಳ್ಳ ಬೇಕು. ನನಗೆ ತಿಳಿದಂತೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಚಾಲುಗೇಣಿ ಒಕ್ಕಲು ಗಳಿಗೆ ಇದರಿಂದ ಹೆಚ್ಚಿನ ರೀತಿಯ ಪ್ರಯೋಜನ ದೊರಕದೆ ಅನ್ಯಾಯಕ್ಕೆ ಒಳ ಗಾಗಿದ್ದಾರೆ. ಆದ ಕಾರಣ ಸರ್ಕಾರದವರು ಈ ದಿಶೆಯಲ್ಲಿ ಎಚ್ಚರಿಕೆ ವಹಿಸಿ ಭೂಸುಧಾರಣೆಯನ್ನು ಯೋಗ್ಯ ರೀತಿಯಲ್ಲಿ ಜಾರಿಗೆ ತರುವುದಕ್ಕೆ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಸರ್ಕಾರದ ಧೋರಣೆಗೆ ಅನುಗುಣವಾಗಿ ನಗರದ ಆಸ್ತಿಯ ಮೇಲೆಯೂ ಸಹ ಮಿತಿ ತಂದು, ಮಾದರಿ ಸಮಾಜವಾದವನ್ನು ಜಾರಿಗೆ ತರುವುದರಲ್ಲಿ ನಮ್ಮ ರಾಜ್ಯ ಪ್ರಥಮ ಹೆಜ್ಜೆ ಇಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆಹಾರದ ವಿಚಾರವಾಗಿ ಮಾತನಾಡುವುದಾದರೆ ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಕ್ಷಾಮಡಾಮರಗಳು ಬಂದು ಜನರು ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ಉಂಟಾಯಿತು. ಅದೃಷ್ಟವಶಾತ್ ಈ ಸಾಲಿನಲ್ಲಿ ಒಳ್ಳೆಯ ಹವಾಮಾನ ಉಂಟಾಗಿ ಸಾಕಷ್ಟು ಮಳೆ ಬಿದ್ದಿದ್ದರಿಂದ ಸಾಕಷ್ಟು ಬೆಳೆಯನ್ನು ಬೆಳೆಯಲಾಗಿದೆ. ಆದಕಾರಣ ಈ ಸಾಲಿನಲ್ಲಿ ಆಹಾರದ ಕೊರತೆ ಉಂಟಾಗಲಾರದು ಎಂದು ನಮ್ಮ ರಾಜ್ಯಪಾಲರ ವರದಿಯಿಂದ ತಿಳಿದುಬಂದಿದೆ. ಕಳೆದ ವರ್ಷ 48 ಲಕ್ಷ ಟನ್ ಆಹಾರದ ಉತ್ಪಾದನೆ ಆಗಿದ್ದರೆ ಈ ವರ್ಷ 63 ಲಕ್ಷ ಟನ್‌ನ ಗುರಿಯನ್ನು ತಲುಪಿದ್ದೇವೆಂಬುದನ್ನು ಕೇಳಿದಾಗ ನಾವು ಬಹಳ ಸಂತೋಷ ಪಡಬೇಕಾಗುತ್ತದೆ. ಇಷ್ಟೊಂದು ಆಹಾರದ ಉತ್ಪಾದನೆಯಾಗಿದ್ದರೂ ಸಹ ಅಲ್ಲಲ್ಲಿ ಆಹಾರದ ಅಭಾವ ಉಂಟಾಗುತ್ತಿರುವುದಕ್ಕೆ ಕಾರಣ ಏನು ಎಂಬ ವಿಷಯದಲ್ಲಿ ನಾವು ಗಮನ ಹರಿಸಬೇಕಾಗಿದೆ. ಆಹಾರದ ವಿತರಣೆಯಲ್ಲಿ ದೋಷ ಇದ್ದಂತೆ ಕಾಣುತ್ತಿದೆ.

(ಶ್ರೀ ಎ. ಜಿ. ಕೊಡ್ಗಿ)

ಉದಾಹರಣೆಗೆ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದಿನ ವರ್ಷದಲ್ಲಿ ಆಹಾರದ ಅಭಾವ ತಲೆದೂರಿದ ಅಂಶ ಈ ಸದನದ ಗಮನಕ್ಕೆ ಬಂದಿರಬಹುದು; ರಾಜ್ಯದ ಇತರ ಕಡೆಗಳಲ್ಲಿ ಏನು ಬೆಲೆ ಇದೆಯೋ ಅದಕ್ಕಿಂತ ಇಮ್ಮಡಿ ಬೆಲೆಯನ್ನು ನಮ್ಮ ಜಿಲ್ಲೆಯಲ್ಲಿ ಕಳೆದ ಒಂದೂವರೆ ವರ್ಷದಿಂದ ತೆರಬೇಕಾಯಿತು ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಒಂದೇ ರೀತಿಯ ಬೆಲೆಗೆ ಆಹಾರಧಾನ್ಯ ಸಿಗುವಂತೆ ಸರ್ಕಾರದವರು ಕಾರ್ಯಕ್ರಮ ಹಾಕಿಕೊಳ್ಳಬೇಕು. ಆಹಾರದ ಶೇಖರಣೆ ಮತ್ತು ವಿತರಣೆಯ ವಿಷಯದಲ್ಲ ನಾವು ಒಂದು ಶಾಶ್ವತವಾದ ಧೋರಣೆಯನ್ನು ಅವಲಂಬಿಸಿಕೊಳ್ಳಬೇಕಾಗುತ್ತದೆ. ಈಗ ನಿಶ್ಚಿತವಾದ ಧೋರಣೆ ಇಲ್ಲವಾಗಿದೆ. ರಾಜ್ಯದ ಕೆಲವು ಕಡೆಗಳಲ್ಲಿ ಭೀಕರ ಬರಗಾಲ ಅಥವಾ ಕ್ಷಾಮ ಬಂದಾಗ ಸರ್ಕಾರದವರು ಏನು ಒಂದು ಧೋರಣೆಯನ್ನು ಆಹಾರದ ಹಂಚಿಕೆಯ ವಿಷಯದಲ್ಲಿ ತೆಗೆದು ಕೊಳ್ಳುತ್ತಾರೆ ಅದೇ ಧೋರಣೆಯನ್ನು ಇತರೇ ಕಾಲದಲ್ಲಿಯೂ ತೆಗೆದುಕೊಳ್ಳದಿರುವುದರಿಂದ ನಮ್ಮ ರಾಜ್ಯದಲ್ಲಿ ಈ ಆಹಾರದ ಸಮಸ್ಯೆ ಉಲ್ಬಣ ಸ್ಥಿತಿಗೆ ಬರುವುದಕ್ಕೆ ಕಾರಣ ಎಂದು ನನ್ನ ಭಾವನೆ. ಈ ವಿಚಾರದಲ್ಲಿ ಶ್ವಾಶ್ವತವಾದ ಧೋರಣೆಯನ್ನು ಅನುಸರಿಸುವ ಬಗ್ಗೆ ಒಂದು ಸಣ್ಣ ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ರೈತರಿಂದ ಕಡ್ಡಾಯವಾಗಿ ಲೆವಿಯನ್ನು ವಸೂಲಿ ಮಾಡಿ, ಅದನ್ನು ಬಳಕೆದಾರರಿಗೆ ಹಂಚುವ ಪದ್ಧತಿ ಇದೆ. ಈ ಪದ್ಧತಿಯಿಂದ ಸರ್ಕಾರದವರು ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಿಂದ ನಿರ್ವಹಿಸುವುದಕ್ಕೆ ಸಾಧ್ಯವಾಗುವದಿಲ್ಲ. ಲೆವಿ ಮೂಲಕ ರೈತರಿಂದ ಎರಡೂವರೆ ಲಕ್ಷ ಟನ್‌ನಿಂದ 4 ಲಕ್ಷ ಟನ್‌ವರೆಗೆ ಸಂಗ್ರಹ ಮಾಡಬಹುದು; ಈ ಸಂಗ್ರಹದಿಂದ ರಾಜ್ಯದ ಎಲ್ಲ ಬಳಕೆದಾರರಿಗೆ ಹಂಚುವುದು ಕಷ್ಟದ ಕೆಲಸ. ಇದಕ್ಕೆ ಬದಲು ಕಂದಾಯವನ್ನು ಧಾನ್ಯದ ರೂಪದಲ್ಲಿ ವಸೂಲಿ ಮಾಡಿದರೆ 7 ರಿಂದ 9 ಲಕ್ಷ ಟನ್‌ಗಳವರೆಗೆ ಸಂಗ್ರಹವಾಗುವುದಕ್ಕೆ ಸಾಧ್ಯವಿದೆ. ಈ ಹಿಂದೆಯೂ ಸಹ ಬೆಳೆದ ಬೆಳೆಯಲ್ಲಿ ಆರನೇ ಒಂದು ಭಾಗವನ್ನು ಧಾನ್ಯದ ರೂಪದಲ್ಲಿ ಕಂದಾಯವನ್ನು ವಸೂಲಿ ಮಾಡಲಾಗುತ್ತಿತ್ತು ಆದರೆ ಕೆಲವು ಕಾಲದ ನಂತರ ಆಹಾರವನ್ನು ಶೇಖರಿಸುವ ಅವಶ್ಯಕತೆ ಇಲ್ಲದಿದ್ದರಿಂದ, ಮತ್ತು ಅದನ್ನು ಸಂಗ್ರಹಿಸಿ ಯೋಗ್ಯ ರೀತಿಯಿಂದ ವಿತರಣೆ ಮಾಡುವುದು ಕಷ್ಟ ಎಂದು ಕಂಡುಬಂದಿದ್ದರಿಂದ ಜೊತೆಗೆ ಆಹಾರದ ಅಭಾವವೂ ಸಹ ಇಲ್ಲದಿದ್ದರಿಂದ ಕಂದಾಯವನ್ನು ಹಣದ ರೂಪದಲ್ಲಿಯೇ ವಸೂಲಿ ಮಾಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಆದರೆ ಈಗ ಆಹಾರದ ಅಭಾವ ಇರುವುದರಿಂದ ಮೊದಲಿನಂತರಹದಲ್ಲಿಯೇ ಕಂದಾಯವನ್ನು ಧಾನ್ಯದ ರೂಪದಲ್ಲಿ ವಸೂಲಿ ಮಾಡಬಹುದು; ಆರನೇ ಒಂದು ಬಾಗ ವಸೂಲಿ ಮಾಡಿದರೆ ರೈತರಿಗೆ ಕಷ್ಟವಾಗುತ್ತದೆ ಎನ್ನುವುದಾದರೆ ಹತ್ತನೇ ಒಂದು ಬಾಗ ಅಥವಾ ಬೇರೆ ಯಾವುದೇ ಒಂದ

ನಿರ್ದಿಷ್ಟವಾದ ಭಾಗವನ್ನು ಸಂಗ್ರಹ ಮಾಡಿದರೆ ನಾನು ಮೊದಲು ಹೇಳಿದಂತೆ 7 ರಿಂದ ೮ ಲಕ್ಷ ಟನ್‌ವರೆಗೆ ಸಂಗ್ರಹಿಸುವುದಕ್ಕೆ ಸಾಧ್ಯವಾಗುಬಹುದು.

ರೈತರಿಗೆ ಸ್ವಲ್ಪ ಹೆಚ್ಚಿನ ಕಷ್ಟ ನಷ್ಟ ಆಗದಂತೆ ಕಂದಾಯ ನಗದು ಬದಲಿಗೆ ಕಂದಾಯ ಏನಿದೆ ಅದರ ಇಷ್ಟು ಪಾಲು ಧಾನ್ಯ ಎಂದು ಗೊತ್ತುಮಾಡಿ ಧಾನ್ಯದ ರೂಪದಲ್ಲಿ ವಸೂಲು ಮಾಡುವುದಾದರೆ ಒಳ್ಳೆಯದು ಇದರಿಂದ ಪ್ರತಿಯೊಬ್ಬ ರೈತನೂ ತನ್ನ ಕರ್ತವ್ಯವನ್ನು ನಿರ್ವಹಿಸುವುದರ ಜೊತೆಗೆ ಅಹಾರದ ಅಭಾವವನ್ನೂ ನೀಗಿಸುವುದಕ್ಕೆ ಹೆಚ್ಚು ಬೆಂಬಲವನ್ನು ಕೊಟ್ಟಹಾಗಾಗುತ್ತದೆ. ಆದ್ದರಿಂದ ರೈತನಿಂದ ಲೆವಿ ವಸೂಲು ಮಾಡುವಾಗ ಸಣ್ಣಪುಟ್ಟ ವಿಚಾರಗಳಲ್ಲಿ ರೈತನಿಗೆ ಕಿರುಕುಳ ಆಗುವುದನ್ನು ಕೊನೆಗಾಣಿಸಿ ಕಂದಾಯವನ್ನು ಧಾನ್ಯ ರೂಪದಲ್ಲಿ ಸಂಗ್ರಹಿಸಬೇಕು. ಈ ದಿಶೆಯಲ್ಲಿ ಸರ್ಕಾರ ಹೆಚ್ಚಿನ ಆಳವಾದ ಅಭ್ಯಾಸವನ್ನು ಮಾಡಿ ಅದರಲ್ಲಿ ಏನಾದರೂ ತೊಂದರೆಗಳು ಇದ್ದರೆ ಅದನ್ನು ಪರಿಶೀಲಿಸಿ ಅದನ್ನು ಜಾರಿಗೆ ತರಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಐದನೇ ಪಂಚವಾರ್ಷಿಕ ಯೋಜನೆಯ ವಿಚಾರವನ್ನು ಹೇಳುವುದಾದರೆ ಮನಸ್ಸಿಗೆ ಸ್ವಲ್ಪ ಕಳವಳ ಉಂಟಾಗುತ್ತದೆ. ರಾಜ್ಯದ ಅನೇಕ ದೊಡ್ಡ ದೊಡ್ಡ ಬೃಹತ್ ಯೋಜನೆಗಳನ್ನು ಕೇಂದ್ರ ಸರ್ಕಾರದವರು ಕೈಬಿಟ್ಟ ಹಾಗೆ ಕಾಣುತ್ತದೆ. ಮೊನ್ನೆ ಕೇಂದ್ರ ಸರ್ಕಾರದವರು ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದ ನಮಗೆ ಬೇಸರವಾಗಿದೆ. ಈಗ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅಭಾವ ಇದೆ. ಆದ್ದರಿಂದ ಶ್ರೀಮಾನ್ ಚನ್ನಬಸಪ್ಪನವರು ವಿದ್ಯುತ್ ನೀರಾವರಿ ಯೋಜನೆಯ ಬಗ್ಗೆ ಆಸಕ್ತಿವಹಿಸಿ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಆದರೆ ಅದನ್ನು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸದೇ ಇರುವುದರಿಂದ ಔಟ್‌ಸೈಡ್ ದಿ ಪ್ಲಾನಿನಲ್ಲಿ ನಾನ್ ಪ್ಲಾನ್ ಸ್ಕೀಮಿನಲ್ಲಿ ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಸರ್ಕಾರ ಈ ದಿಶೆಯಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರತಿಭಟನೆಯನ್ನು ಸಲ್ಲಿಸಿ ದೊಡ್ಡ ದೊಡ್ಡ ಯೋಜನೆಗಳನ್ನು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವಂತೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಹಾಗೆಯೇ ಪಶ್ಚಿಮ ಘಟ್ಟದ ಮಲೆನಾಡು ಅಭಿವೃದ್ಧಿ ಯೋಜನೆ. ಈ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ವಿವರವಾಗಿ ಈ ಸದನದ ಮುಂದೆ ಮಾತನಾಡಿದ್ದಾರೆ, ಪಶ್ಚಿಮ ಘಟ್ಟದ ಸದುಪಯೋಗವಾಗಬೇಕಾದರೆ ಕೇಂದ್ರ ಸರ್ಕಾರದವರು ಹಾಕುವಂತಹ ಅಭಿವೃದ್ಧಿ ಯೋಜನೆ ಏನಿದೆ ಅದರಲ್ಲಿ ರಾಜ್ಯ ಸರ್ಕಾರದವರು ಕೂಡ ಆ ಪ್ರದೇಶಕ್ಕೆ ಸಂಬಂಧಪಟ್ಟ ಹೊಸ ಕೆಲಸಗಳು ಏನಿವೆ

(ಶ್ರೀ ಎ. ಜಿ. ಕೊಡ್ಗಿ)

ಅವುಗಳನ್ನು ಆ ಯೋಜನೆಯಲ್ಲಿ ಸೇರಿಸಿ ಪಶ್ಚಿಮ ಘಟ್ಟದಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡುವಂತೆ ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿರತಕ್ಕ ಅರಣ್ಯ ಸಂಪತ್ತು ಏನಿದೆ ಅದನ್ನು ಸದುಪಯೋಗ ಮಾಡಬೇಕು. ಫಾರೆಸ್ಟ್ ಬೇಸ್ಡ್ ಇಂಡಸ್ಟ್ರಿಯನ್ನು ಮಾಡುವುದಕ್ಕೆ ಅನೇಕ ಅವಕಾಶಗಳು ಇವೆ. ಅದಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅನೇಕ ವಿಚಾರಗಳನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ಯಾವ ಕೆಲಸವೂ ಕೂಡ ಆಗಿಲ್ಲ ಎಂದು ನಾನು ಬಹಳ ಬೇಸರದಿಂದ ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಯಾವ ಒಂದು ನೀರಾವರಿ ಯೋಜನೆಯನ್ನೂ ಸಹ ಕೈಗೊಂಡಿಲ್ಲ. ಬೃಹತ್ ನೀರಾವರಿ ಯೋಜನೆಯನ್ನು ಈಗ 15 ವರ್ಷಗಳಿಂದ ಇನ್‌ವೆಸ್ಟಿಗೇಷನ್ ಮಾಡಿ ಅದಕ್ಕೆ 16 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆ ಯೋಜನೆಯನ್ನು ಹಾಗೆಯೇ ಕೈಬಿಟ್ಟ ಹಾಗೆ ಕಾಣುತ್ತದೆ. ಅಲ್ಲಿ ವರಾಹಿ ಯೋಜನೆಯನ್ನು ಬೇಗ ಕಾರ್ಯಗತ ಮಾಡುವುದು ಅವಶ್ಯಕ. ಬೃಹತ್ ನೀರಾವರಿ ಯೋಜನೆಗೆ ಸಂಬಂಧ ಪಟ್ಟ ಹಾಗೆ ಅನೇಕ ಎಸ್ಟಿಮೇಟುಗಳು ಇವೆ. ಈಗ 3—4 ವರ್ಷಗಳಿಂದ ಯಾವ ಯೋಜನೆಯನ್ನು ಕೈಗೊಂಡಿಲ್ಲ ಎಂದು ನಾನು ಬಹಳ ಬೇಸರದಿಂದ ಹೇಳ ಬೇಕಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರದ ಅಭಾವ ಇದೆ. ಅಲ್ಲಿ ಸಾಕಷ್ಟು ಭೂಮಿ ಇದೆ. ಆದರೆ ಅಲ್ಲಿ ನೀರಿನ ಕೊರತೆ ಇದೆ. ಅಲ್ಲಿ ವ್ಯವಸಾಯಕ್ಕೆ ಮಳೆ ನೀರನ್ನೇ ಅವಲಂಬಿಸಿಕೊಂಡಿರುವುದರಿಂದ ಅಲ್ಲಿ ಒಂದು ಬೆಳೆಯನ್ನು ಮಾತ್ರ ತೆಗೆಯಬೇಕಾಗಿರುವುದರಿಂದ ಆಹಾರದ ಸಮಸ್ಯೆ ಉಂಟಾಗು ವುದಕ್ಕೆ ಕಾರಣವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೀರಾವರಿ ಯೋಜನೆ ಗಳನ್ನು ಮಂಜೂರು ಮಾಡಿ ಅವುಗಳನ್ನು ಕಾರ್ಯಗತ ಮಾಡಿದರೆ ದಕ್ಷಿಣ ಕನ್ನಡ ಜಿಲ್ಲೆ ಆಹಾರದ ಕಣಜ ಆಗುವುದಕ್ಕೆ ಸಾಧ್ಯವಿದೆ. ಆದ್ದರಿಂದ ಸರ್ಕಾರದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಬೇಕಾಗಿರುವ ಬೃಹತ್ ನೀರಾವರಿ ಯೋಜನೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಗಮನ ಕೊಟ್ಟು ಅವುಗಳಿಗೆ ಮಂಜೂರಾತಿಯನ್ನು ಕೊಟ್ಟು ಕಾರ್ಯಗತ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಳಂನಲ್ಲಿ ಒಂದು ಪ್ರವಾಸಿ ಕೇಂದ್ರವನ್ನು ಸ್ಥಾಪನೆ ಮಾಡುವ ಬಗ್ಗೆ ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರ ದವರು ಅನೇಕ ಮಂತ್ರಿಗಳು ಒಪ್ಪಿದ್ದಾರೆ. ಆದರೆ ಇದು ದುರ್ದೈವ ಈ

ವಿಚಾರದಲ್ಲಿ ಸರ್ಕಾರದವರು ಇದುವರೆಗೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಪ್ರವಾಸಿ ಕೇಂದ್ರದಿಂದ ಸರ್ಕಾರಕ್ಕೆ ಒಂದು ಒಳ್ಳೆಯ ಆದಾಯ ಬರುವಂಥಾದ್ದು ಇದೆ. ಆದ್ದರಿಂದ ಕೋಳಂನಲ್ಲಿ ಒಂದು ಪ್ರವಾಸಿ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಮೀನುಗಾರಿಕೆಯ ವಿಚಾರ. ಇದರಲ್ಲಿ ಕೂಡ ಸಾಕಷ್ಟು ಹೆಚ್ಚಿನ ಕೆಲಸ ಆಗಬೇಕಾಗಿದೆ. ಮೀನುಗಾರರಿಗೆ ಮೆಕನೈಜ್ಡ್ ಬೋಟುಗಳನ್ನು ಒದಗಿಸಬೇಕಾಗಿದೆ. ಡೀಪ್ ಸೀ ಷಿಪಿಂಗಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಮೀನುಗಾರರ ಕೆಲಸ ಬಹಳ ಕಷ್ಟಕರವಾದ ಕೆಲಸವಾಗಿರುವುದರಿಂದ ಅವರಿಗೆ ಕಂಪಲ್ಸರಿ ಇನ್‌ಷ್ಯೂರೆನ್ಸ್ ಸ್ಕೀಮನ್ನು ಜಾರಿಗೆ ತರಬೇಕು. ಮೀನುಗಾರರಿಗೆ ಯೋಗ್ಯ ವಸತಿ ಸೌಕರ್ಯವನ್ನು ಒದಗಿಸಬೇಕು. ಇದು ಸರ್ಕಾರದ ಒಂದು ಘೋಷಣೆಯಲ್ಲಿಯೇ ಉಳಿದಿದೆ. ಕೇರಳದಲ್ಲಿ ಮೀನುಗಾರರಿಗೆ 30 ಸಾವಿರ ಮನೆಗಳನ್ನು ಸರ್ಕಾರದವರು ಕಟ್ಟಿದ್ದಾರೆ. ಮಾರ್ಚಿ 31ರಲ್ಲಿ ಅವರಿಗೆ ಮನೆಗಳನ್ನು ಕೊಡುತ್ತಾರೆ. ಇನ್ನು ಬೇರೆ ಬೇರೆ ಹಂತದಲ್ಲಿ ಒಂದು ಲಕ್ಷ ರೂಪಾಯಿಗಳ ಯೋಜನೆಯನ್ನು ಕೈಗೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅಂಥಾ ಒಂದು ಯೋಜನೆಯನ್ನು ಮಾಡುವುದು ಅವಶ್ಯಕ. ಇದುವರೆಗೂ ಅದು ಆಗದೇ ಇರುವುದು ಬಹಳ ಬೇಸರವನ್ನುಂಟುಮಾಡುತ್ತದೆ. ಸರ್ಕಾರದಿಂದ ಈ ಯೋಜನೆ ಯೋಗ್ಯ ರೀತಿಯಲ್ಲಿ ಕಾರ್ಯಗತವಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮೀನುಗಾರರು ಮೆಕನೈಜ್ಡ್ ಬೋಟುಗಳಲ್ಲಿ ಮೀನುಗಳನ್ನು ಹಿಡಿಯುವುದಕ್ಕೆ ಹೋಗಿ ಅವರು ಮುಳುಗಿ ಹೋಗುವಂತಹ ಪ್ರಸಂಗಗಳು ಇರುವುದರಿಂದ ಅವರಿಗೆ ಸಹಾಯ ಧನವನ್ನು ಕೊಡುವ ದೃಷ್ಟಿಯಿಂದ ಡಿಸ್ಟ್ರೆಸ್ ರಿಲೀಫ್ ಫಂಡಿನಿಂದ ಮೀನುಗಾರರಿಗೆ ಪರಿಹಾರ ಕೊಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಕೊಲ್ಲೂರಿನಲ್ಲಿ ಒಂದು ಗೇಮ್ಸ್ ಸ್ಯಾಂಗುಚರಿಯನ್ನು ಮಂಜೂರು ಮಾಡಬೇಕು. ಮತ್ತು ಕೊಲ್ಲೂರಿನಲ್ಲಿ ಬೇಕಾದಷ್ಟು ಆಯುರ್ವೇದಕ್ಕೆ ಸಂಬಂಧ ಗಿಡಮೂಲಿಕೆಗಳು ದೊರೆಯುತ್ತವೆ. ಆದ್ದರಿಂದ ಅಲ್ಲಿ ಒಂದು ಆಯುರ್ವೇದ ರೀಸರ್ಚ್ ಸೆಂಟರನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

ಶಿಕ್ಷಣದ ವಿಚಾರದಲ್ಲಿ ಹೆಚ್ಚು ಮಾತನಾಡುವುದಕ್ಕೆ ನಾನು ಬಯಸುವುದಿಲ್ಲ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ನರ್ಸರಿ ಶಾಲೆಗಳನ್ನು ಮತ್ತು

(ಶ್ರೀ ಎ. ಜಿ. ಕೊಡ್ಗಿ)

ನಮ್ಮ ಜಿಲ್ಲೆಯಲ್ಲಿ ಹೆಚ್ಚು ಪ್ರಾಥಮಿಕ ಮತ್ತು ನರ್ಸರಿ ಶಾಲೆಗಳನ್ನು ಸ್ಥಾಪನೆ ಮಾಡಬೇಕು, ಅವುಗಳಿಗೆ ಬೇಕಾದ ಕಟ್ಟಡ ಉಪಕರಣ ಮತ್ತು ಉಪಾಧ್ಯಾಯರನ್ನು ಒದಗಿಸುವಂತಹ ಪ್ರಯತ್ನ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ ಒಂದು ವರ್ಷದಿಂದ 275-300 ಶಾಲಾ ಅಧ್ಯಾಪಕರು ಬೇಕಾಗಿತ್ತು. ಮೊನ್ನೆ ಕಂಟ್ರಾಕ್ಟ್ ಬೇಸಿಸ್ ಮೇಲೆ 50 ಜನ ಉಪಾಧ್ಯಾಯರನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಮಾರ್ಚಿ 30 ರಂದು ಅವರು ಬಿಡುವಂತಹ ಸನ್ನಿವೇಶ ಇದೆ. ಈ ರೀತಿ ಮಾಡಿದರೆ ಶಿಕ್ಷಣ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಶಾಲೆಗಳಿಗೆ ಸಕಾಲದಲ್ಲಿ ಶಿಕ್ಷಕರನ್ನು ಒದಗಿಸಬೇಕು. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕು.

ವೈದ್ಯಕೀಯ ಮತ್ತು ಜನಾರೋಗ್ಯದ ವಿಚಾರದಲ್ಲಿ ತುಳುನಾಡಿನ ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟರ ಮಟ್ಟಿಗೆ ಸೌಕರ್ಯವನ್ನು ಒದಗಿಸಿದೆ ಎಷ್ಟರ ಮಟ್ಟಿನ ಪ್ರಗತಿಯನ್ನು ಸಾಧಿಸಿದೆ ಎನ್ನುವುದು ಹೆಮ್ಮೆಪಡಬೇಕಾದ ವಿಚಾರ. ಇನ್ನೂ ಯೋಗ್ಯ ರೀತಿಯಲ್ಲಿ ಕೆಲಸ ಆಗಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅವಸಾನದ ಘಂಟಾನಾದ ಬಾರಿಸುವುದು ಸ್ವಲ್ಪಮಟ್ಟಿಗೆ ನಿಜ ಎಂದು ಕಂಡು ಬಂದರೂ ಕೂಡಾ ಉತ್ತರ ಪ್ರದೇಶದಲ್ಲಿ ವಿರೋಧ ಪಕ್ಷದ ನಾಯಕರ ಪಕ್ಷದವರ ಅವಸಾನ ಆಗಿದೆ.

3-30 P.M.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಮಿತ್ರರಾದಂತಹ ಕೆ. ಆರ್ ಎಸ್. ನಾಯುಡುರವರು ರಾಜ್ಯಪಾಲರ ಭಾಷಣಕ್ಕೆ ತಂದಿರತಕ್ಕಂತಹ ವಂದನಾ ನಿರ್ಣಯವನ್ನು ನಾನು ಕಟುವಾಗಿ ವಿರೋಧಿಸುತ್ತಾ ಈ ಸುಸಂದರ್ಭದಲ್ಲಿ ಗಂಭೀರವಾಗಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ರಾಜಪಾಲರ ಭಾಷಣದಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೆ ಕರ್ನಾಟಕವೆಂದು ಹೆಸರನ್ನಿಟ್ಟು ಜನತೆಯ ಕನಸನ್ನು ನೆನಸು ಆಗಿದೆ ಎಂದು ಹೇಳಿದ್ದಾರೆ, ನನ್ನ ಹೆಸರು ಪುಟ್ಟಸ್ವಾಮಿ ಎಂದು. ನನ್ನ ಸೊಗಸಾದ ಹೆಸರು ನನ್ನ ಹೆಂಡತಿ ಮಕ್ಕಳಿಗೆ, ತಂದೆ ತಾಯಿಗಳಿಗೆ ಮತ್ತು ನನ್ನ ಸೇವಕರಿಗೆ ಆಗಿರಬಹುದು. ಆದರೆ ನನ್ನ ಕುಟುಂಬದ ಎಲ್ಲಾ ಜನರಿಗೆ ಅದು ಸೊಗಸು ಹೇಗಾಗುತ್ತದೆ? ಅದು ನನ್ನ ಕರ್ತವ್ಯ. ನಿಷ್ಠೆ ಬಂಧುಪ್ರೇಮ ಭಕ್ತಿಗಳಿಂದ ಉಂಟಾಗುತ್ತದೆ. ಆಗ ನನ್ನ ಬಗ್ಗೆ ಅವರಿಗೆ ಗೌರವ ಉಂಟಾಗುತ್ತದೆ.

ಆದರೆ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾದಾಗ ತಕ್ಷಣ ನಮ್ಮ ಕರ್ನಾಟಕದ ಮೂರು ಕೋಟಿ ಜನ ನಮ್ಮ ರಾಜ್ಯದ ಆಡಳಿತ ಹೇಗಿರಬೇಕು. ನಮ್ಮ ರಾಜ್ಯದ ಶಾಸಕರು ಹೇಗಿರಬೇಕು, ಮಂತ್ರಿಮಂಡಲ ಹೇಗೆ ಇರಬೇಕು ಎಂಬ ಚಿತ್ರವನ್ನು ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ನಾನು ಇದನ್ನು ಆಡಳಿತ ಕಾಂಗ್ರೆಸ್ಸಿನ ಶಾಸಕರ ಮನಸ್ಸನ್ನು ಚುಚ್ಚುವುದಕ್ಕೆ ಹೇಳುತ್ತಾ ಇಲ್ಲ. ನಮ್ಮ ಕರ್ನಾಟಕ ರಾಜ್ಯ ಎತ್ತ ಕಡೆ ಸಾಗುತ್ತದೆ ಎಂಬುದನ್ನು ಗಂಭೀರ ವಾಗಿ ಯೋಚನೆ ಮಾಡಬೇಕಾಗಿದೆ. ಕರ್ನಾಟಕದ ಹೆಸರು ಭಾರತದಲ್ಲೇ ಅಲ್ಲದೆ ಪರದೇಶಗಳಲ್ಲಿಯೂ ಸಹ ಹೆಸರುವಾಸಿಯಾಗಿತ್ತು. ಆದರೆ ಇಂದು ನಮ್ಮ ನಾಡಿನ ನಾಗರಿಕತೆಯನ್ನು ಬೇರೆ ಜನರು ಹೇಗೆ ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಜವಾಬ್ದಾರಿಯನ್ನು ಹೊತ್ತು ನೀವು ಮತ್ತು ನಾವು ಯೋಚನೆ ಮಾಡಬೇಕಾಗಿದೆ. ಈ ಮನೆಗೆ ಮಾತ್ರವಲ್ಲದೆ ಇಡೀ ಕರ್ನಾಟಕದ ಜನತೆ ಗಂಭೀರವಾಗಿ ಯೋಚನೆ ಮಾಡತಕ್ಕ ವಿಚಾರ. ಈ ಕರ್ನಾಟಕದ ಮಂತ್ರಿ ಮಂಡಲದಲ್ಲಿರುವವರ ಹೆಸರನ್ನು ಕತ್ತೆ ಕುರಿಗಳಿಗೆ ಇಟ್ಟು ಮೆರವಣಿಗೆ ನಡೆದುದು ಹಿಂದೆ ಎಂದಾದರೂ ಆಗಿತ್ತೇ? ಅದರಲ್ಲಿ ವಿದ್ಯಾವಂತರು, ವಕೀಲರು ಮತ್ತು ಇತರ ಗಣ್ಯ ವ್ಯಕ್ತಿಗಳು ಇದ್ದುಕೊಂಡು ಮಂತ್ರಿಗಳ ಹೆಸರನ್ನು ಕತ್ತೆಗಳ ಮೇಲೆ ಬರೆದು ಮೆರವಣಿಗೆ ಮಾಡಿದ್ದಾರೆ. ಇದನ್ನು ನೋಡಿದರೆ ನಮಗೆ ಬಹಳ ದುಃಖ ವಾಗುತ್ತದೆ. ಇದರಲ್ಲಿ ನಿಮಗೆ ಎಷ್ಟು ನೋವಾಗಿದೆಯೋ ಅಷ್ಟೇ ನೋವು ನಮಗೆ ಆಗಿದೆ. ಇದು ಕರ್ನಾಟಕ ರಾಜ್ಯಕ್ಕೆ ಭೂಷಣ ತರತಕ್ಕ ವಿಚಾರವಲ್ಲ. ಶಾಸಕರಿಗೆ ನಾಯಿಗಳ ಹೆಸರಿನ್ನಿಟ್ಟು ಮೆರವಣಿಗೆ ಮಾಡುತ್ತಿದ್ದಾರೆ. ಈ ಜನರು ಇದನ್ನು ಕುಚೋದ್ಯಕ್ಕೆ ಮಾಡುತ್ತಾ ಇಲ್ಲ. ನಿಮ್ಮ ಹೆಸರನ್ನು ಅವುಗಳ ಮೇಲೆ ಬರೆದಿದ್ದಾರೆ. ಇವತ್ತು ಯಾರೇ ಆಗಲಿ, ವ್ಯವಸಾಯಗಾರನೇ ಆಗಲಿ, ಕಾರ್ಮಿ ಕನೇ ಆಗಲಿ, ಅಧಿಕಾರಿಯೇ ಆಗಲಿ, ಅಥವಾ ಪತ್ರಿಕಾ ಕರ್ತರೇ ಆಗಲಿ....ಈ ಕರ್ನಾಟಕ ರಾಜ್ಯದಲ್ಲಿ ಸುಭಿಕ್ಷೆಯಿಂದ ಬಾಳಬಹುದೆಂಬ ನಂಬಿಕೆಯನ್ನು ಇಟ್ಟು ಕೊಂಡಿದ್ದಾರೆ. ಅದರಿಂದಲೇ ನೀವೆಲ್ಲರೂ ಆರಿಸಿ ಬಂದಿದ್ದೀರಿ. ಆದರೆ ನಾನು ಗೃಹಕೃತ್ಯದ ಅನಾಚಾರ ಮಾಡುವಾಗ ನನ್ನ ಹಿಡಿತದಲ್ಲಿರುವ ಜನರು ಹೇಗೆ ತಾನೆ ಸತ್ಯವಂತರಾಗಿರುವುದಕ್ಕೆ ಸಾಧ್ಯ? ನಾನು ಎಲ್ಲಾ ಮಂತ್ರಿಗಳು ಲಂಚ ತೆಗೆದುಕೊಳ್ಳುತ್ತಾರೆಂದು ಹೇಳುವುದಿಲ್ಲ. ನಾನು ಮೊದಲು ಹೇಳಿದ ಹಾಗೆ ಕೆಲವು ಮಂತ್ರಿಗಳಿಗೆ ಮೂರು ಆಫೀಸುಗಳು ಇವೆ. ಒಂದು ರಾಯರ ಆಫೀಸು, ಒಂದು ಅಮ್ಮಾವ್ರ ಆಫೀಸು, ಮತ್ತೊಂದು ಚಿಕ್ಕರಾಯರ ಆಫೀಸು. ಉಪಾಧ್ಯಾಯರುಗಳಿಗೆ 55 ವರ್ಷಕ್ಕೆ ನಿವೃತ್ತಿಯಾಗಬೇಕೆಂದು ಕಾನೂನು ಮಾಡಿದ್ದೀರಿ. ಆದರೆ ರಾಜ್ಯಮಟ್ಟದ ಅಧಿಕಾರಿಯೊಬ್ಬರು ನಿವೃತ್ತಿಯಾಗ ಬೇಕಾಗಿದ್ದರೂ ಬೆಳಿಗ್ಗೆಯಿಂದ ಸಾಯಂಕಾಲದ ಒಳಗೆ ಎರಡು ಲಕ್ಷ ರೂಪಾಯಿ ತಾಂಡವವಾಡಿದುದರಿಂದ ಆ ಅಧಿಕಾರಿಯನ್ನು ನಿವೃತ್ತಿ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ ;—ಯಾರು ಆ ಅಧಿಕಾರಿ ಮತ್ತು ಅವರ ಹೆಸರೇನು ?

ಶ್ರೀ ಬಿ. ಪುಟ್ಟಸ್ವಾಮಯ್ಯ ;- ಅವರು ಡೈರೆಕ್ಟರ್ ಅಫ್ ಸಿರಿಕಲ್ಚರ್— ಶ್ರೀ ರಂಗನಾಥರಾವ್ ಎನ್ನುವವರು. ಇನ್ನೂ ಬೇಕಾದರೆ ಹತ್ತಾರು ನಿದರ್ಶನ ಗಳನ್ನು ನಾನು ಕೊಡಬಲ್ಲೆ. ಶ್ರೀ ಚನ್ನಬಸಪ್ಪನವರು ವಿಧಿನಿಯಮ ಪ್ರಕಾರ ಆಡಳಿತ ನಡೆಸುತ್ತೇವೆಂದು ಹೇಳುತ್ತಿದ್ದರು. ಆದರೆ ಈಗ ಆಗುವುದಾದರೂ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಮಾನ್ಯ ಪುಟ್ಟಸ್ವಾಮಯ್ಯನವರು ಬಹಳ ಶಿಸ್ತುಗಾರರಾಗಿ ಮಾತನಾಡುತ್ತಾರೆ. ತಾವು ಏನು ಹೇಳುತ್ತೀರಿ ಅದಕ್ಕೆ ತಾವು ಬದ್ಧರಾಗಬೇಕು.

ಶ್ರೀ ಎಂ. ಎಸ್. ಕೃಷ್ಣನ್ :- ತಾವು ಹೇಳುವ ರೀತಿ ನೊಡಿದರೆ ಆ ರೀತಿ ನಡೆದಿದೆ ಎಂದು ಸಂಶಯ ಬರುತ್ತದೆ.

SRI H. M. CHANNABASAPPA :—We are working in a parliamentary democracy. The hon. Member is making certain statements and he has every right to do so. All that I said was that he must stick to what he says and at the appropriate time Government will answer his charges.

ಶ್ರೀ ಬಿ. ಪುಟ್ಟಸ್ವಾಮಯ್ಯ ;—ನಾನು ಈ ದಿವಸ ಗಂಭೀರವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ ಎಂದು ಪ್ರಾರಂಭದಲ್ಲಿಯೇ ನಿವೇದನೆ ಮಾಡಿಕೊಂಡಿದ್ದೇನೆ. ನನ್ನ ಪ್ರತಿಯೊಂದು ಪದವೂ ಗಂಭೀರವಾಗಿರುತ್ತದೆ, ಹೊರತು ನಿಮ್ಮ ಮೇಲೆ ಸುಣ್ಣ ಎರಚುವ ದೆಸೆಯಲ್ಲಿ ಮಾತನಾಡುತ್ತಾ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಹಿಂದೆ ರತ್ನ, ವಜ್ರ, ವೈಢೂರ್ಯಗಳನ್ನು ಅಳತೆ ಮಾಡುತ್ತಿದ್ದರು. ಆದರೆ ದುರದೃಷ್ಟವಶಾತ್ ಇಂದು ಕರ್ನಾಟಕದ ರೈತರು ವಜ್ರ ವೈಢೂರ್ಯ ಬಿಡಿ, ಕೇವಲ ರಾಗಿಯನ್ನು ಸಹ ಅಳತೆ ಮಾಡುವುದು ಒಂದು ಪ್ರಮಾದವಾಗುತ್ತದೆ. ಅಂಥ ಸ್ಥಿತಿ ನಮ್ಮ ರಾಜ್ಯದಲ್ಲಿ ಬಂದಿದೆ. ರೈತನಿಗೆ ನಾವು ಉತ್ತೇಜನ ಕೊಡುವ ಬದಲು ಅವನಿಗೆ ಹಿಂಸೆ ಕೊಡುತ್ತಿದ್ದೇವೆ ಇವತ್ತು ದೇಶದಲ್ಲಿ ಅನ್ನದ ಅಭಾವ ನೀಗಬೇಕಾದರೆ ರೈತ ಮುಂದೆ ಬರಬೇಕಾಗಿದೆ. ಅವರಿಗೆ ನಾವು ಯಾವ ಸವಲತ್ತನ್ನು ಕೊಟ್ಟಿದ್ದೇವೆ ಎಂದು ಯೋಚನೆ ಮಾಡಬೇಕು.

ನೀವು ಆತನ ಮನೆಗೆ ಪೋಲೀಸ್ ಅಧಿಕಾರಿಗಳನ್ನು ನುಗ್ಗಿಸಿ ದಾಂಧಲೆ ಮಾಡಿಸುತ್ತಿದ್ದೀರಿ. ರೈತ ನಾಳೆ ಮನಸ್ಸು ಮಾಡಿ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಬದಲಾಗಿ ಸರ್ಕಾರಕ್ಕೆ ಹೆಚ್ಚಿಗೆ ವರಮಾನ ಬರತಕ್ಕ ಕೃಷಿಯನ್ನೇ ಬಿಟ್ಟು ಬಿಡುವ ಹಾಗೆ ಪರಿವರ್ತನೆಯಾದರೆ ಆ ದಿವಸ ನಿಮ್ಮ ಗತಿ ಏನಾಗುತ್ತದೆಂಬುದನ್ನು ನೋಡಬೇಕು.

Smt. ADDY SALDHANA: It is the result of 25 years and not two years.

ಶ್ರಿ ಕೆ. ಹೆಚ್. ಹನುಮೇಗೌಡ: ಮೊದಲಿನಿಂದಲೂ ಜನ ನೆಮ್ಮದಿಯಿಂದಿದ್ದರು. ಆದರೆ ಆಗ ಇಷ್ಟೊಂದು ಅಭಾವವಿರಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ: ನೀವು ಬಹಳ ಪ್ರಾಮಾಣಿಕವಾಗಿ ಆಡಳಿತವನ್ನು ನಡೆಸುತ್ತಿದ್ದೀರೆಂದು ನಿಮ್ಮ ಭಾವನೆ ಇರಬಹುದು. ನನ್ನ ಬಾವನೆಯಲ್ಲಿ ಆ ರೀತಿ ಇಲ್ಲ. ಹಿಂದಿನ ಸರ್ಕಾರಗಳೂ ಸಹ ಕೆಲವಾರು ಸಂದರ್ಭಗಳಲ್ಲಿ ಎಡವಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ತಮ್ಮಲ್ಲಿ ಕೆಲವರು ಆಗಲೂ ಮಂತ್ರಿಗಳಾಗಿಯೇ ಇದ್ದರು. ಆದರೂ ಹಿಂದಿನವರ ಮೇಲೆ ಅಪಾದನೆಯನ್ನು ಹೊರಿಸಿ ಅವರನ್ನು ಈ ಸಭೆಯಲ್ಲಿ ಜರಿಯುವುದು ಬೇಡ. ಈ ಕರ್ನಾಟಕದಲ್ಲಿ ನಮ್ಮ ಮತ್ತು ನಿಮ್ಮ ಹೊಣೆ ಬಹಳವಾಗಿದೆ. ನಮ್ಮ ಹಿಂದಿನ ಸಂಸ್ಕೃತಿ, ಧರ್ಮ ಏನೆಂಬುದನ್ನು ಎಲ್ಲರೂ ಮನಗಾಣಬೇಕು. ಈಗ ದೇಶದಲ್ಲಿರತಕ್ಕ ಅನ್ನದ ಅಭಾವ, ದಿನನಿತ್ಯಬಳಕೆಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವುದರಲ್ಲಿ ನಮ್ಮೆಲ್ಲರ ಜವಾಬ್ದಾರಿಯೂ ಇದೆಯೆಂಬುದಾಗಿ ನಾನು ಮತ್ತೆ ಪುಷ್ಟೀಕರಿಸಿ ಹೇಳುತ್ತೇನೆ. ನಾನು ತಿಳಿದಿರುವ ಹಾಗೆ ಒಂದು ಸಾವಿರ, ಎರಡು ಸಾವಿರ ರೂಪಾಯಿಗಳಷ್ಟು ವರಮಾನ ಇರತಕ್ಕ ಅಧಿಕಾರಿಯೂ ಕೂಡ ಈಗ ಸಂತುಷ್ಟಿಯಿಂದ ಬಾಳುತ್ತಾ ಇಲ್ಲ ಅವನು ತನ್ನ ಮನೆಗೆ ಹೋದ ಕೂಡಲೇ ತನ್ನನ್ನೇ ನಂಬಿರತಕ್ಕ ತನ್ನ ಹೆಂಡತಿ, ಮಕ್ಕಳಿಗೆ ಸಂತುಷ್ಟಿಯಾಗಿ ಅನ್ನ ಬಟ್ಟೆ ಕೊಡದೇ ಇರುವ ಪರಿಸ್ಥಿತಿ ಈಗ ಎಲ್ಲೆಲ್ಲಿಯೂ ಇರುವುದರಿಂದಲೇ ಅವನು ಲಂಚಕ್ಕೆ ಹೋಗುತ್ತಾನೆ. ಇನ್ನು ಅಧಿಕಾರಿಗಳ ವರ್ಗದ ಬಗ್ಗೆ ಹೇಳುವುದಕ್ಕೆ ಏನು ಹೇಳಲಿ ಎಂದಾಗಿದೆ. ಏಕೆಂದರೆ ಇವರ ಸಂಸ್ಕೃತಿ ಎಲ್ಲಿ ಹೋಗಿದೆಯೋ ಗೊತ್ತಿಲ್ಲ. ಸಾಮಾನ್ಯವಾಗಿ ಒಬ್ಬ ಅಧಿಕಾರಿ ವರ್ಗ ಆಗುತ್ತಾನೆನ್ನೋಣ. ಅವನು ಅಮ್ಮಾವರ ಆಫೀಸಿಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಹೇಳಿದರೆ ಅವನ ವರ್ಗ ರದ್ದಾಗುತ್ತದೆ. ಅದನ್ನು ರುಜುವಾತು ಮಾಡಲೇ ?

SRI H. M. CHANNABASAPPA.—When the hon. member makes a serious allegation, he must be specific. He must say who has paid and to whom. If he furnishes the information certainly we will take necessary action. What is the use of simply making allegations off-hand in a manner which is not intelligible and for which no answer can be given?

ಶ್ರೀ ಬಿ. ಪುಟ್ಟಸ್ವಾಮಯ್ಯ ; ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ನಿಮ್ಮ ಮೇಲೆ ನಮಗೆ ನಂಬಿಕೆ ಹೋಗಿದೆ. ಸರ್ಕಾರದಲ್ಲಿ ನೇರವಾಗಿ ಇಂತಹ ಅಚಾತುರ್ಯ ನಡೆದಿದೆ ಅದನ್ನು ಮಂತ್ರಿಗಳ ಗಮನಕ್ಕೆ ತಂದರೂ ಇದುವರೆಗೆ ಏನೂ ಮಾಡಿಲ್ಲ.

ಶ್ರೀ ಹೆಚ್. ಎಂ, ಚನ್ನಬಸಪ್ಪ : ನನಗೆ ಇಂತಹ ಅಲಿಗೇಷನ್ ಕೊಟ್ಟು ಸಹ ಇನ್ನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲವೆಂದು ಹೇಳುವುದನ್ನು ಬಿಟ್ಟು ಕೇಳಿ. ಸುಮ್ಮನೆ ಮನಸ್ಸಿಗೆ ಬಂದ ಹಾಗೆ ಹೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ತಮಗೂ ವಿಷಯ ಗೊತ್ತಿದೆ. ಅಷ್ಟೊಂದೇಕೆ ಅವರನ್ನು ಕಷ್ಟಕ್ಕೆ ಗುರಿಮಾಡುತ್ತೀರಾ ?

ಶ್ರೀ ಹೆಚ್. ಎಂ, ಚನ್ನಬಸಪ್ಪ ; ಈ ತರಹ ಭಾಷಣ ಮಾಡುವುದು ಕಮ್ಯೂನಿಸ್ಟರಿಗೆ ಸಲ್ಲತಕ್ಕದ್ದಲ್ಲ.

ಶ್ರೀ ಎಂ. ಎಸ್. ಕೃಷ್ಣನ್ ; ನಿಮಗೆ ನಿಜಾಂಶ ಗೊತ್ತಿದೆ. ನಿಜಾಂಶ ಗೊತ್ತಿದ್ದರೂ ಅದನ್ನು ಹೇಳುವುದಕ್ಕೆ ನೀವು ಇಷ್ಟಪಡುವುದಿಲ್ಲ. ಅದನ್ನು ನೀವು ಒಳಗೇ ಇಟ್ಟುಕೊಂಡಿದ್ದೀರಿ.

ಶ್ರೀ ಟಿ. ಎಂ. ಮಂಜುನಾಥ್ ; ಮಾನ್ಯ ಮಂತ್ರಿಗಳು ಮನಸ್ಸು ನೊಂದಿಕೊಂಡು ಸ್ಪೆಸಿಫಿಕ್ ಚಾರ್ಜ್ ಕೊಡಿ ಎಂದು ಕೇಳುತ್ತಾರೆ. ತಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಇಂತಹ ಒಂದು ಕಾರ್ಯಕ್ರಮದಲ್ಲಿ ಲೋಪವಾಗಿದೆಯೆಂದು ಅರ್ಜಿ ಕೊಟ್ಟಿದ್ದರೂ, ಜನತೆ ಅದನ್ನು ನಿಮ್ಮ ಮುಂದೆ ಇಟ್ಟಿದ್ದರೂ ಅದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ತಾವು ಮಫ್ತಿಯಲ್ಲಿ ಅಥವಾ ವೇಷ ಬದಲಾಯಿಸಿಕೊಂಡು, ಮಾರಿಸಿಕೊಂಡು ಹೋಗಿ ಕೆಲವಾರು ಕೇಸುಗಳನ್ನು ಹಿಡಿಯಬೇಕು. ತಮ್ಮ ಇಲಾಖೆಯಲ್ಲಿ ಅಂಥಾದ್ದು ಇಲ್ಲದೇ ಇರಬಹುದು. ಆದರೆ ಬೇರೆ ಇಲಾಖೆಗಳಲ್ಲಿ ಜನರಿಂದ ದುಡ್ಡು ಅಧಿಕಾರಿಗಳಿಗೆ ಯಾವರೀತಿ ಹೋಗುತ್ತದೆಂಬುದನ್ನು ಕಂಡುಹಿಡಿಯಬೇಕು. ಅದು ಈಗ ಜಾಸ್ತಿ ಆಗುತ್ತಿದೆ.

Sri H. M. CHANNABASAPPA. —I take this challenge. I am prepared to go with him.

ಶ್ರೀ ಟಿ. ಎಂ. ಮಂಜುನಾಥ್ : ನಿಮ್ಮಲ್ಲಿ ಒಂದು ರೀತಿಯಲ್ಲಿ ಜಿಗುಪ್ಸೆ ಇರಬಹುದು. ನಿಮ್ಮ ಸರ್ಕಾರದಲ್ಲಿ ನಡೆಯುತ್ತಾ ಇರತಕ್ಕ ಭ್ರಷ್ಟಾಚಾರ ಇನ್ನಾವ ಸರ್ಕಾರದಲ್ಲಿಯೂ ನಡೆಯುತ್ತಾ ಇಲ್ಲ. ಈ ಸರ್ಕಾರ ನಿಜವಾಗಿಯೂ ನಾಚಿಕೆ ಪಡಬೇಕು.

ಒಬ್ಬ ಸದಸ್ಯರು : ಹಿಂದಿನ ಸರ್ಕಾರದ ಪಾಪದ ಹೊರೆ ಇದು.

ಶ್ರೀ ಹೆಚ್. ಎಂ. ಚನ್ನಬಸಪ್ಪ : ಈ ರೀತಿ ಚಾಲೆಂಜ್ ಕೊಡತಕ್ಕವರು ಬಹಳವಾಗಿ ನಮ್ಮಲ್ಲಿ ಇದ್ದಾರೆ. ಅಂತಹವರನ್ನು ನಾನು ಬಹಳವಾಗಿ ನೋಡಿದ್ದೇನೆ. ಎಂತಹ ಚಾಲೆಂಜನ್ನಾದರೂ ಈ ಸರ್ಕಾರ ತೆಗೆದು ಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಚಾಲೆಂಜ್ ಮಾಡಿದ್ದಾರೆ. ನೀವು ಅದನ್ನು ಒಪ್ಪಿಕೊಂಡಿದ್ದೀರಿ. ನಾಳೆ ನೀವೂ, ಅವರೂ ಅದೇ ಒಂದು ಮಾತಿನಲ್ಲಿ ಹೋಗಬೇಕು.

SRI H. M. CHANNABASAPPA.—We are doing serious business as Legislators and Government. Therefore, I am prepared to take the challenge and go with him and find out cases that he refers to. ಅದು ಬಿಟ್ಟು ಸುಮ್ಮನೆ ಎದ್ದೆದ್ದು ಏನೋ ಹೇಳುತ್ತಾ ಇರುವುದರಲ್ಲಿ ಏನು ಅರ್ಥವಿದೆ ?

ಶ್ರೀ ಎಂ ಎಸ್. ಕೃಷ್ಣನ್.—ಆ ಪ್ರವೃತ್ತಿಗೆ ನಾವು ಹೋಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವೂ ಸಹ ಆ ರೀತಿಯಾಗಿ ಹೋಗುವುದಿಲ್ಲ. ಮಾನ್ಯ ಸದಸ್ಯರು ಒಂದು ಗಂಭೀರವಾದ ಅಪಾದನೆಯನ್ನು ಮಾಡದೆ ಯಾವುದಕ್ಕೂ ಕೈಗೆ ಸಿಗದೇ ಇರುವ ರೀತಿಯಲ್ಲಿ ಆಪಾದನೆಗಳನ್ನು ಮಾಡುವುದು ಸರಿಯಲ್ಲ. ಸ್ಪೆಸಿಫಿಕ್ಕಾಗಿ ಏನಾದರೂ ನಿರ್ಧಾರವಾದ ಅಪಾದನೆ ಇದ್ದರೆ ಅದನ್ನು ಹೇಳಬೇಕು. ಆಗ ಸರ್ಕಾರ ಅದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಮಾನ್ಯ ಶ್ರೀ ಚನ್ನಬಸಪ್ಪನವರಿಗೇ ಎಲ್ಲವೂ ಗೊತ್ತಿದೆ ದುರಾದೃಷ್ಟವಶಾತ್ ಅವರು ಈಗ ಅತ್ತ ಕಡೆ ಮಂತ್ರಿಗಳಾಗಿ ಕುಳಿತು ನಮ್ಮ ಅಭಿಪ್ರಾಯವನ್ನು ವಿರೋಧಿಸುತ್ತಿದ್ದಾರೆಂದು ನಾನು ಗಾಂಭೀರ್ಯವಾಗಿ ಗೌರವದಿಂದ ಹೇಳಬೇಕಾಗಿದೆ. ಪ್ರಾಯಶಃ ಅವರು ಮಂತ್ರಿಗಳಾಗದೇ ಇದ್ದಿದ್ದರೆ ಈ ಕರ್ನಾಟಕ ರಾಜ್ಯದ ಕ್ಷೇಮಕ್ಕಾಗಿ ಹಾಗೂ ಇಲ್ಲಿನ ಲಂಚಗುಳಿತನದ ನಿರ್ಮೂಲನಕ್ಕಾಗಿ, ಮತ್ತು ದಿನ ನಿತ್ಯವಸ್ತುಗಳ ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕಾಗಿ ಹೋರಾಟಮಾಡಿ, ಚಳುವಳಿ ಮಾಡಿ ಅದರ ಒಂದು ನಾಯಕತ್ವವನ್ನೇ ವಹಿಸುತ್ತಿದ್ದರೆಂದು ನಾನು ಸ್ಪಷ್ಟವಾಗಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ. ಯಾವ ಒಂದು ಸದುದ್ದೇಶದಿಂದ ಈ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಬಂತೋ ಅದೇ ಒಂದು ಸದುದ್ದೇಶದಿಂದ ಈ ಕರ್ನಾಟಕದ ಎಲ್ಲ ಜನರನ್ನೂ ಕೂಡ ಸುಖ ಸಂತೋಷದಿಂದ ಇಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಏನು ದುರಾದೃಷ್ಟವೋ ಗೊತ್ತಿಲ್ಲ. ವಿದ್ಯಾರ್ಥಿಗಳು ಮಂತ್ರಿ ಮಂಡಲವನ್ನು ಬದಲಾವಣೆ ಮಾಡುವ ಪರಿಸ್ಥಿತಿ ಉಂಟಾಗುತ್ತಿದೆ ಈ ಕರ್ನಾಟಕ ರಾಜ್ಯದಲ್ಲಿ ಈ ಸ್ಥಿತಿ ಉಂಟಾಗುತ್ತಾ ಇರುವುದು ವಿರೋಧ ಪಕ್ಷದವರ ತಪ್ಪೋ ಅಥವಾ ಆಡಳಿತದ ವೈಖರಿ ತಪ್ಪೋ, ನಮ್ಮ ಮಕ್ಕಳು ಸಮಾನವಾಗಿರತಕ್ಕ ವಿದ್ಯಾರ್ಥಿಗಳು ನಮ್ಮ ನಿಮ್ಮ ಬುದ್ಧಿ, ನಡವಳಿಕೆಗಳ ಬಗ್ಗೆ ತಿಳುವಳಿಕೆ ಹೇಳುವ ಕಾಲ ಬರುತ್ತಿದೆ.

SMT. ADDY SALDANHA.—Student movement is there all over India and not only in our state.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮನ್ನು ತಿದ್ದುವುದಕ್ಕೆ ನಮ್ಮ ಮಕ್ಕಳಂತಿರುವ ವಿದ್ಯಾರ್ಥಿಗಳು ಹೊರಟರೆಂದರೆ, ನಾವು ಎಲ್ಲಿ ಇದ್ದೇವೆ ? ನಮ್ಮ ಯೋಗ್ಯತೆಗಳನ್ನು ಮಕ್ಕಳಂತಿರುವ ವಿದ್ಯಾರ್ಥಿಗಳು ಕೇಳಕೂಡದು. ಅವರಿಂದ ಬುದ್ಧಿ ಕಲಿಯುವುದೆಂದರೇನು ? ಈಗಲೇ ಸರ್ಕಾರ ಎಚ್ಚರಿಕೆಯನ್ನು ವಹಿಸದಿದ್ದರೆ ಕರ್ನಾಟಕದ ಗತಿಯೇನಾಗಬೇಕು ? ಹಿರಿಯ ವ್ಯಕ್ತಿಗಳಾಗಿ, ಪಿತೃ ಸಮಾನವಾಗಿರತಕ್ಕ ಮಾನ್ಯ ಶ್ರೀ ಚನ್ನಬಸಪ್ಪನವರಿಗೆ ಈ ಮಾತನ್ನು ನಾನು ಒತ್ತೊತ್ತಿ ಹೇಳಬೇಕಾಗಿದೆ. ಈಗಲಾದರು ಮಂತ್ರಿಮಂಡಲ ಎಚ್ಚೆತ್ತು ಕರ್ನಾಟಕ ಜನತೆಯ ಕಲ್ಯಾಣಕ್ಕಾಗಿ ಈ ರಾಜ್ಯದಲ್ಲಿರತಕ್ಕ ಭ್ರಷ್ಟಾಚಾರ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಅದನ್ನು ಕೂಡಲೇ ನಿರ್ನಾಮ ಮಾಡಲು ಯತ್ನಿಸಬೇಕು. ನಾನು ಕೇವಲ ನಿಮ್ಮ ಇಲಾಖೆಯ ಬಗ್ಗೆ ಮಾತನಾಡುತ್ತಾ ಇಲ್ಲ. ಆದರ ಬಗ್ಗೆ ಮುಂದೆ ನಿಮ್ಮ ಇಲಾಖೆಯ ಬೇಡಿಕೆ ಎಂದಾಗ ಎಲ್ಲ ವಿಷಯಗಳನ್ನೂ ಮಾತನಾಡುತ್ತೇನೆ. ಒಂದು ವಿಷಯವನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಬಡ್ಜೆಟ್‌ನಲ್ಲಿ ಕಾಮಗಾರಿಗಳಿಗಾಗಿ ಒದಗಿಸಿದ ಹಾಗೆ ಹಳೆಯ ಮೈಸೂರಿನಲ್ಲಿ ಕಾಮಗಾರಿಗಳನು

ತೆಗೆದುಕೊಂಡಿಲ್ಲ. ಅದು ಪಕ್ಷಪಾತವಲ್ಲವೇ? ಹಳೆಯ ಮೈಸೂರಿನ ಜನರು ಏನು ಪಾಪ ಮಾಡಿದ್ದಾರೆ? ಹಳೆಯ ಮೈಸೂರಿನ ರೈತರ ಮನೆ ಬಾಗಿಲಿಗೆ ಅಧಿಕಾರಿಗಳು ಹೋಗಿ ರಾಗಿ ಲೆವಿಯನ್ನು ವಿಧಿಸಿದ್ದಾರೆ ಅವರಿಗೆ ಈ ರೀತಿ ಮಾಡಲು ಏನು ಹಕ್ಕು ಉಂಟು? ಕೇವಲ ಗೊಬ್ಬರವನ್ನು ರೈತರಿಗೆ ಸಕಾಲಕ್ಕೆ ಸಾಕಷ್ಟು ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗಿಲ್ಲ. ಕೇವಲ ಒಂದು ಎಕರೆಯಿಂದ 10 ಎಕರೆಗಳ ವರೆಗೆ ಖುಷ್ಕಿ ಜಮೀನು ಇಟ್ಟಿರತಕ್ಕವರಿಗೆ ಅದರಲ್ಲಿ ಕಡು ಬಡವರಾದ ರೈತರಿಗೆ ಯಾವೊಂದೂ ಸವಲತ್ತು ಒದಗಿಸದೇ ಇರುವ ಈ ಸರ್ಕಾರ ರೈತರ ಮನೆಯ ಹತ್ತಿರ ಹೋಗಿ ರಾಗಿ ಲೆವಿ ಕೊಡಿ ಎಂಬುದಾಗಿ ಅಧಿಕಾರಿಗಳಿಂದ ಕೇಳುವ ಸೌಜನ್ಯ ಈ ಸರ್ಕಾರಕ್ಕೆ ಏನಿದೆ? ಯಾವ ಒಂದು ನೈತಿಕ ಅಧಿಕಾರವನ್ನು ತಾವು ಪಡೆದಿದ್ದೀರಿ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಪ್ರಶ್ನೆಮಾಡಬೇಕಾಗುತ್ತದೆ.

Mr. Deputy Speaker in the Chair

ಇನ್ನು ನಮ್ಮ ರಾಜ್ಯದಲ್ಲಿ ನಾಗರೀಕರ ಆತ್ಮರಕ್ಷಣೆ, ಆಸ್ತಿಗಳ ರಕ್ಷಣೆ ಎಷ್ಟರಮಟ್ಟಿಗೆ ಇದೆಯೆಂಬುದನ್ನು ನೋಡೋಣ. ನಾನು ಇರತಕ್ಕ ಸತ್ಯದ ಮಾತುಗಳನ್ನಾಡಿದರೆ ಮಾನ್ಯ ಚೆನ್ನಬಸಪ್ಪನವರಿಗೆ ಕೆಂಡದಂಥ ಕೋಪ ಬರುತ್ತದೆ. ನನಗೆ ಗೊತ್ತಾಗಿದೆ ನಮ್ಮ ರಾಜ್ಯದಲ್ಲಿ ಲಂಚ ತೆಗೆದುಕೊಳ್ಳತಕ್ಕ ಕೆಲವು ಮಂತ್ರಿಗಳಿಗೆ ಪೋಲೀಸರ ರಕ್ಷಣೆ ಇದೆ ಎಂದು. ನನ್ನ ಹೊಸಾಹೊಸ ಕಾರನ್ನೆ ಕಳ್ಳರು ಎತ್ತಿ ಕೊಂಡು ಹೋದರು. ಅದಕ್ಕೆ ಸರ್ಕಾರದವರು ನನಗೆ ಏನು ಡ್ಯಾಮೇಜ್ ಕೊಟ್ಟರು? ನನ್ನ ಸ್ವಂತ ಆಸ್ತಿಯನ್ನು ನಾಳೆ ಹೀಗೆ ಬೇರೆ ಯಾರಾದರೂ ಅಪಹರಿಸಿಕೊಂಡು ಹೋದರೆ ನನಗೆ ರಕ್ಷಣೆ ಎಲ್ಲಿದೆ? ಹಾಗೇ ನನ್ನ ಹೆಂಡತಿ ಮಕ್ಕಳಿಗೇನಾದರೂ ಅಪಾಯವಾದರೆ ರಕ್ಷಣೆ ಈ ರಾಜ್ಯದಲ್ಲಿ ಎಲ್ಲಿದೆ? ಹೊಟ್ಟೆಗಿಲ್ಲದವನು ಯಾರಾದರೂ ಹೆಂಡತಿ ಮೈ ಮೇಲಿರತಕ್ಕ ಆಭರಣಗಳನ್ನು ನೋಡಿ ಆಕೆಯನ್ನು ಎಳೆದುಕೊಂಡು ಹೋದರೆ ಏನು ಗತಿ, ಯಾರಿಗೆ ದೂರನ್ನು ಹೇಳಿ ಕೊಳ್ಳಬೇಕು? ಇದು ನಮ್ಮ ಕರ್ನಾಟಕ ರಾಜ್ಯದಲ್ಲಿ ನಾಗರಿಕರಿಗೆ ದೊರೆಯತಕ್ಕ ರಕ್ಷಣೆ. ಶಾಸಕನಾದ ನನ್ನಂಥವನ ಗತಿಯೇ ಹೀಗಾದ ಮೇಲೆ ಇನ್ನು ರಾಜ್ಯ ದಲ್ಲಿರತಕ್ಕ ಸಾಮಾನ್ಯ ಪ್ರಜೆಗಳ ಬಡಬಗ್ಗರ ಗತಿಯೇನಾಗಿರಬೇಕು? ಸುಮ್ಮನೆ ಇಲ್ಲಿ ನಮ್ಮ ಮಾನ್ಯ ಚೆನ್ನಬಸಪ್ಪನವರು ಎಲ್ಲದಕ್ಕೂ ವಿಧಿನೇಮಗಳಿವೆ ಎಂದು ಘರ್ಜನೆ ಮಾಡಿದರಾಯಿತೆ? ನನ್ನ ಹೆಂಡತಿ ಮಕ್ಕಳಿಗೆ, ಆಸ್ತಿಗೆ ಇವರೇನು ರಕ್ಷಣೆ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ? ಮಾನ್ಯ ಚೆನ್ನಬಸಪ್ಪನವರು ನನಗೆ ತಿಳಿದಿರುವಂತೆ ಲಂಚ ತೆಗೆದುಕೊಳ್ಳುವುದಿಲ್ಲ. ಆದರೆ ಇತ್ತೀಚೆಗೆ ಅವರೇನಾದರೂ ಕಳ್ಳರ ತಂಡವನ್ನು ಇಟ್ಟುಕೊಂಡು, ಏಕೆಂದರೆ ನಿತ್ಯವಸ್ತುಗಳ ಬೆಲೆ ಏರಿರುವುದ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ರಿಂದ ಅವರಿಗೂ ಜೀವನಕ್ಕೆ ತೊಂದರೆಯಾಗಿ, ಹೀಗೆ ದೇಶದಲ್ಲಿ ಕಳ್ಳತನಗಳನ್ನು ಮಾಡಿಸುತ್ತಿರಬಹುದೇ ಎಂದು ನನಗೆ ಅನಿಸುತ್ತಿದೆ. ನಾನು ಕಳ್ಳನಲ್ಲ--ಕಾಕನಲ್ಲ. ನಾನೊಬ್ಬ ಸಭ್ಯನಾಗರೀಕ ನಾನು ನನ್ನ ಮನೆಗೆ ಹೋಗುತ್ತಿದ್ದಾಗ ನನಗೆ ಯಾವ ಅಪಾಯಗಳೂ ಆಗದಂತೆ ನೋಡಿಕೊಳ್ಳಲು ನನಗೆ ರಾಜ್ಯದಲ್ಲಿ ಒಂದು ರಕ್ಷಣೆ ಇರುವುದು ಬೇಡವೇ ? ಇಂಥ ಅವಹೇಳನದ ಕಾರ್ಯಗಳು ಇಲ್ಲಿ ನಡೆಯುತ್ತಿರುವಾಗ ಇವರು ಯಾವ ಮುಖ ಇಟ್ಟುಕೊಂಡು ಇನ್ನೂ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸುವ್ಯವಸ್ಥಿತವಾಗಿದೆ ಎಂದು ಹೇಳುತ್ತಿದ್ದಾರೋ ಅದು ನನಗೆ ಅರ್ಥವಾಗುತ್ತಿಲ್ಲ. ಇವರ ನಾಯಕರಾದ ಶ್ರೀಮಾನ್ ದೇವರಾಜ ಅರಸರು ಒಂದು ಮುತ್ತಿನಂಥ ಮಾತನ್ನು ಹೇಳಿದ್ದಾರೆ. ಅವರು ಒಂದೊಂದಾವರ್ತಿ ಭಗವದ್ ಪ್ರೇರಣೆಯಾದಾಗ-ಸ್ವಾಮಿ ಏರಿದಾಗ ಸೊಗಸ್ಸಾದ ಮಾತಗಳನ್ನು ಹೇಳುತ್ತಾರೆ. ಅವರು ಸಂಡೂರಲ್ಲಿ ಒಂದು ಪ್ರಸಂಗದಲ್ಲಿ ಹೇಳಿದ್ದಾರೆ ಆ ಮಾತುಗಳೇನೆಂದರೆ--ಮೈಸೂರು ಶಾಸಕರೇನಿದ್ದಾರೆ ಈ ದಿವಸ, ಅವರಿಗೆ ಚುನಾವಣೆಗಳಲ್ಲಿ ಗೆದ್ದು ಬರತಕ್ಕ ಯೋಗ್ಯತೆಯಿಲ್ಲದೆ ಅವರಿಗೆ ? ಪ್ರಧಾನಿ ಇಂದಿರಾಗಾಂಧಿ ಬೀಸಿದ್ದರಿಂದ ಇವರೆಲ್ಲಾ ಗೆದ್ದು ಬಂದಿದ್ದಾರೆ. ಎಂದು ಹೇಳಿದ್ದಾರೆ. ಹಾಗೆ ಅವರು ಹೇಳಿರತಕ್ಕ ಮಾತುಗಳನ್ನು ಕೇಳಿದರೆ ಅವರು ಈ ಸಭೆಯ ವಿರೋಧ ಪಕ್ಷಗಳ ಸದಸ್ಯರನ್ನೂ ಕೂಡ ಸೇರಿಸಿ ಮಾತನಾಡಿದಂತೆ ಕಾಣುತ್ತಿದೆ. ಸರ್ಕಾರ ನಡೆಸತಕ್ಕ ಪಾರ್ಟಿಯನ್ನು ಉದ್ದೇಶಿಸಿ ಅವರು ಹೇಳಿದ್ದರೆ ಚೆನ್ನಾಗಿತ್ತು. ಅದನ್ನು ಬಿಟ್ಟು ಅವರು ಎಲ್ಲಾ ಸದಸ್ಯರನ್ನೂ ಸೇರಿಸಿ ಒಟ್ಟಿಗೆ ಹೊಡೆದಿದ್ದಾರೆ. ಅವರು ಇನ್ನೂ ಏನು ಹೇಳಿದ್ದಾರೆಂದರೆ ಹೊಟ್ಟೆಹೊರೆಯುವುದಕ್ಕೂ ಕೂಡ ಯೋಗ್ಯತೆ ಇಲ್ಲದ ಜನರು ಶಾಸಕರಾಗಿ ಬಂದಿದ್ದಾರೆಂದು ಅವರು ಹೇಳಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಗಂಭೀರ ಪರಿಸ್ಥಿತಿಯಲ್ಲೇ ಉತ್ತರಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನ ಏನಾದರೂ ಹೇಳುವುದಕ್ಕೆ ನಿಂತರೆ ಮಾನ್ಯ ಚನ್ನಬಸಪ್ಪನವರು ಅವರ ಕೈಎತ್ತಿ ನನ್ನ ಬಾಯಿ ಬಡಿಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ಈ ಶಾಸನ ಸಭೆಗೆ ನಾನೇನೋ ಹೊಸಬ. ಮಾನ್ಯ ಚನ್ನಬಸಪ್ಪನವರು ರಾಜಕೀಯ ತಜ್ಞರು, ವಯೋವೃದ್ಧರು, ಜ್ಞಾನವೃದ್ಧರು, ಒಳ್ಳೇ ಅರಿತುನುರಿತ ಅನುಭವಿಗಳು ಅವರು ಇಂಥ ಮಾತುಗಳನ್ನು ಜೀರ್ಣಿಸಿಕೊಳ್ಳುವುದೆಂದರೇನರ್ಥ ? ಈ ದಿವಸ ಅಧಿಕಾರದಲ್ಲಿ ಇಲ್ಲಿರತಕ್ಕ ಯಾವ ವ್ಯಕ್ತಿಗೂ ಅಧಿಕಾರದಲ್ಲಿರತಕ್ಕ ಯೋಗ್ಯತೆಯಿಲ್ಲ ಎಂದು ಅವರು ಹೇಳಿದ್ದಾರೆ. ಅವರು ಹಾಗೆ ಹೇಳಿದ್ದನ್ನು ನಾವು ಇಲ್ಲಿ ಕೇಳಿಕೊಂಡು ಕುಳಿತುಕೊಳ್ಳುವುದು ಸರಿಯಲ್ಲ. ಅದಕ್ಕಾಗಿ ಅಧಿಕಾರದಲ್ಲಿರತಕ್ಕ ಅವರೂ ಮತ್ತು ನಾವೆಲ್ಲರೂ ಒಟ್ಟಿಗೆ ರಾಜೀನಾಮೆ ಕೊಡೋಣ ಎಂದು ನಾನು ಸಲಹೆ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು "ನಾವೂ ನೀವು" ಎಂದು ಹೇಳುತ್ತಿದ್ದಾರೆ. ಇಲ್ಲಿ "ನೀವೂ" ಎಂದರೆ ಅಧ್ಯಕ್ಷರೆಂದಾಗುತ್ತದೆ. ಅದು ಸರಿಯಲ್ಲ.....

ಶ್ರೀ ಬಿ. ಪುಟ್ಟಸ್ವಾಮಯ್ಯ ; ಸ್ವಾಮಿ, ನಾನು ತಮ್ಮನ್ನು....

ಶ್ರೀ ಹೆಚ್. ಎಂ. ಚನ್ನಬಸಪ್ಪ ; ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡುತ್ತಿರುವಾಗ "ನೀವು" ಎಂದು ಹೇಳಬಾರದು.

ಉಪಾಧ್ಯಕ್ಷರು : "ನೀವೂ ವರ್ತ್‌ಲೆಸ್ ಪೀಪಲ್" ಎಂದರೇನು ಅದರ ಅರ್ಥ ಏನು ?

ಶ್ರೀ ಬಿ. ಪುಟ್ಟಸ್ವಾಮಯ್ಯ : ಸ್ವಾಮಿ, ನಾನು ತಮಗೆ ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈಗಿರತಕ್ಕ ಶಾಸಕರೆಲ್ಲಾ ನಾಲಾಯಖ್ ಜನರೆಂದು ಅವರು ಹೇಳಿದನ್ನು ನಾನಿಲ್ಲಿ ಹೇಳಿದೆ ಅಷ್ಟೇ;

ಶ್ರೀ ಎಂ ಎಸ್. ಕೃಷ್ಣನ್ · ಬಹುಶಃ ಮಾನ್ಯ ಪುಟ್ಟಸ್ವಾಮಯ್ಯನವರು ಮಂತ್ರಿಮಂಡಲವನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಹಾಗೆ ಹೇಳಿರಬೇಕು. ಅಲ್ಲವೇ ?

MR. DEPUTY SPEAKER :—I am not concerned about what the Hon. Chief Minister has said somewhere and what has appeared in the press. Now that the Hon. Member is supporting what has been said he means what he has said. It is not correct.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಉಪಸಭಾಪತಿಯವರೇ ನಾನು ಮಂತ್ರಿಮಂಡಲದಲ್ಲಿರತಕ್ಕ ಸದಸ್ಯರು ನಾಲಾಯಕ್ ಎಂದು ಹೇಳಿದೆನೇ ಶಿವಾಯಿ ಸಭೆಯಲ್ಲಿರತಕ್ಕವರೆಲ್ಲರೂ ಎಂದು ಹೇಳಲಿಲ್ಲ. ಅವರು ಏನೋ ಕೆಲವರು ಕೇವಲ ಹೊಟ್ಟೆಹೊರೆಯುವುದಕ್ಕೆ ಇಲ್ಲಿಗೆ ಬಂದಿದ್ದಾರೆ. ಅವರು ನಿತ್ಯವೂ ನನ್ನ ಮನೆಯ ಬಾಗಿಲಲ್ಲಿ ಕಾದು ಬಿದ್ದಿರುತ್ತಾರೆಂದು ಕೂಡ ಅವರು ಹೇಳಿದ್ದಾರೆ. ಇದು ಬಹಳ ಗಂಭೀರವಾದ ವಿಷಯ. ಇದರಲ್ಲಿ ವಿರೋಧ ಪಕ್ಷದವರೂ ಕೂಡ ಸೇರುತ್ತಾರೆ. ಈ ಸಭೆಯಲ್ಲಿ ಸದಸ್ಯರಾಗಿರುವುದಕ್ಕೆ ಲಾಯಖ್ ಇಲ್ಲದ ಜನರು ಇದರಲ್ಲಿದ್ದರೆ ಈ ಸಭೆ ಅಸ್ತಿತ್ವದಲ್ಲಿರುವುದಕ್ಕೆ ಸಾಧ್ಯವಿಲ್ಲ. ಇಂಥ ಮುಖ್ಯ ಮಂತ್ರಿಗಳಲ್ಲಿ ನಾವು ನಂಬಿಕೆ ಇಡುವುದೂ ಕೂಡ ಸರಿಯಲ್ಲ. ಹಿಂದೆ ದೇಶದಲ್ಲಿ ಒಬ್ಬ ಮಂತ್ರಿಯು

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಬಗ್ಗೆ ಎಂಥಾ ಗೌರವವಾದ ಭಾವನೆಗಳಿದ್ದವು. ಈ ದಿವಸ ಆ ಮಂತ್ರಿಗಳ ಸ್ಥಾನಮಾನಗಳು ಎಲ್ಲಿಗಿಳಿದಿವೆ? ದೇಶದ ಒಬ್ಬ ಮುಖ್ಯ ಮಂತ್ರಿಯಾಗಿದ್ದು ಕೊಂಡು ಇವರು ಶಾಸಕರ ಬಗ್ಗೆ ಇಷ್ಟು ಅಲೋಚವಾಗಿ ಮಾತನಾಡಬಹುದೇ ಎಂದು ಕೇಳುತ್ತೇನೆ? ಹೀಗಾಗೇ ನಾವು ಈ ದಿವಸ ಈ ಖಾದಿ ಬಟ್ಟೆ ಹಾಕಿ ಕೊಂಡು ಸಿಟಿ ಮಾರ್ಕೆಟ್ ಚೌಕ ಮತ್ತು ಮೆಜೆಸ್ಟಿಕ್ ಸರ್ಕಲ್ಲುಗಳಲ್ಲಿ ತಿರುಗಾಡು ವುದಕ್ಕೆ ಬಹಳ ಕಷ್ಟ ಬಂದಿದೆ....

ಒಬ್ಬ ಮಾನ್ಯ ಸದಸ್ಯರು :—ಹಾಗಾದರೆ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ದಿನ ಬಂದಿದ್ದ ಡ್ರೆಸ್ಸಿನಲ್ಲಿದ್ದರೆ ಅಪಾಯವಿಲ್ಲವಲ್ಲವೇ?

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅದಕ್ಕಾಗಿಯೇ ನಾನು ನನ್ನ ರಕ್ಷಣೆಗಾಗಿ ಹಿಂದೆ ನಮ್ಮ ತಂದೆಯವರು ಹಾಕಿಕೊಳ್ಳುತ್ತಿದ್ದ ಪೇಟವನ್ನು ಬಿಟ್ಟು ಹೋಗಿದ್ದಾರೆ. ಅವನ್ನು ನಾನು ಉಪಯೋಗ ಮಾಡಿಕೊಂಡು ನನ್ನ ರಕ್ಷಣೆ ಮಾಡಿಕೊಳ್ಳು ತ್ತಿದ್ದೇನೆ. ಈ ದಿವಸ ಈ ರಾಜ್ಯದಲ್ಲಿ ಅಧಿಕಾರಿಗಳಾಗಲಿ, ವಿದ್ಯಾರ್ಥಿಗಳಾಗಲೀ, ಯಾವ ಸಭ್ಯ ನಾಗರೀಕರಾಗಲ ನೆಮ್ಮದಿಯಿಂದ ಬಾಳುವುದಕ್ಕೆ ಅವಕಾಶವಿಲ್ಲ.

4 P. M.

ಈ ಸರ್ಕಾರ ಅಸ್ತಿತ್ವದಲ್ಲಿ ಉಳಿಯಬೇಕಾದರೆ ಅದಕ್ಕೆ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಅವರೇ ಗೌರವವಾಗಿ ರಾಜಿನಾಮೆ ಕೊಡಬೇಕೆಂದು ಹೇಳಿದ್ದೇನೆ. ಒಂದು ವೇಳೆ ರಾಜಿನಾಮೆ ಕೊಡದೆ ಉಳಿದ ಪಕ್ಷದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆ ಯಾಗಬೇಕು. ಉಪಾಧ್ಯಾಯರು ನಮ್ಮ ಮಕ್ಕಳನ್ನು ಈ ದೇಶದ ಸತ್ಪ್ರಜೆ ಗಳನ್ನಾಗಿ ಮಾಡಬೇಕಾದ ಜವಾಬ್ದಾರಿಯನ್ನು ಹೊತ್ತಿರುವ ಗುರುಗಳು ಒಂದು ಕಡೆ ಮುಷ್ಕರ ಹೂಡಿದ್ದಾರೆ, ಮಕ್ಕಳು ಪೋಷಕರ ಮತ್ತು ಬೋಧಕರ ಹತೋಟಿ ಯಲ್ಲಿಲ್ಲದೆ ಇರತಕ್ಕ ಪರಿಸ್ಥಿತಿ ಕರ್ನಾಟಕದಲ್ಲಿದೆ. ಆದುದರಿಂದ ವಿದ್ಯಾರ್ಥಿಗಳು ಬೇರೆ ಮಾರ್ಗದಲ್ಲಿ ಹೋಗಲು ಸರ್ಕಾರವೇ ಅವಕಾಶವನ್ನು ಕಲ್ಪಿಸಿದ ಹಾಗೆ ಆಗು ತ್ತಿದೆ. ಈ ರಾಷ್ಟ್ರದ ಯುವಕರಿಗೆ ಶ್ರೀ ಜಯಪ್ರಕಾಶನಾರಾಯಣ್ ಅವರು ಒಂದು ಕರೆಯನ್ನು ಕೊಟ್ಟಿದ್ದಾರೆ. ರಾಷ್ಟ್ರದಲ್ಲಿ ನೆಮ್ಮದಿ ಸುಖಸಂತೋಷಗಳು ಸ್ಥಾಪಿತ ವಾಗಬೇಕಾದರೆ ಲಂಚಗುಳಿತನ ಹೋಗಬೇಕಾದರೆ, ಸ್ವಜನ ಪಕ್ಷಪಾತ ಹೋಗ ಬೇಕಾದರೆ, ಜಾತೀಯತೆಯ ಭಾವನೆ ಹೋಗಬೇಕಾದರೆ,—ಕರ್ನಾಟಕದಲ್ಲಿ ಲಿಂಗಾಯಿತರಾಗಿ, ಒಕ್ಕಲಿಗರಾಗಿ ಏನೋ ಶಾಪದಿಂದ ಹುಟ್ಟಿದ್ದೇವೆ ಎನ್ನುವುದು ಜನಜನಿತವಾಗಿದೆ–ರಾಷ್ಟ್ರದಲ್ಲಿ ಯುವಕರು ಕ್ರಾಂತಿ ಮಾಡಿ ಒಳ್ಳೆಯ ಆಡಳಿತವನ್ನು

ಸೃಷ್ಟಿ ಮಾಡಬೇಕೆಂದು ಕರೆ ಕೊಟ್ಟಿದ್ದಾರೆ. ಆದರೆ ಯುವಕರು ಇವರನ್ನು ಸರಿಪಡಿಸುವುದಕ್ಕೆ ಮೊದಲು ಇವರ ನಡವಳಿಕೆಗಳನ್ನು ಇವರೇ ಸಂಪೂರ್ಣವಾಗಿ ತಿದ್ದಿಕೊಂಡು ಕರ್ನಾಟಕ ಜನತೆಯ ಸೇವಕರಾಗಿ, ಎಲ್ಲ ವರ್ಗದ ದಾಸಾನುದಾಸ ರಾಗಿ. ಇಲ್ಲದೆ ಹೋದರೆ ಮುಕ್ತಿ ಇಲ್ಲ. ಪ್ರಾಣಕ್ಕೆ, ಆಸ್ತಿಗೆ ರಕ್ಷಣೆ ಇಲ್ಲ ಎನ್ನತಕ್ಕ ಅರಿವನ್ನು 170 ಜನ ಸದಸ್ಯರೂ ಸದಾಕಾಲ ಎಚ್ಚರಿಕೆಯಲ್ಲಿ ಇಟ್ಟು ಕೊಂಡು ತಮ್ಮ ಪಕ್ಷದ ನಾಯಕರಿಗೆ ಅಣತಿಯನ್ನು ಕೊಟ್ಟು ಕರ್ನಾಟಕ ರಾಜ್ಯಕ್ಕೆ ಸಮರ್ಥ ಆಡಳಿತವನ್ನು, ಗಂಭೀರ ಆಡಳಿತವನ್ನು ಲಂಚಗುಳಿತನವಿಲ್ಲದೆ ಇರತಕ್ಕ ಆಡಳಿತವನ್ನು ಒದಗಿಸಿ ಕೊಡಬೇಕು. ಒಂದು ಮನೆಯಲ್ಲಿ ರಾಯರ ಆಫೀಸು ರೂಮು ಒಂದು, ಚಿಕ್ಕರಾಯರ ಆಫೀಸು ರೂಮು ಅಮ್ಮಾವ್ರ ಆಫೀಸು ರೂಮು ಎನ್ನುವ ರೀತಿಯಲ್ಲಿಲ್ಲದೆ ನಾವು ಹೋದರೆ ಪ್ರೈವೇಟ್ ಸೆಕ್ರೆಟರಿಯವರನ್ನು ನೋಡಿಕೊಂಡು ಬೇರೆ ಆಫೀಸುಗಳಿಗೆ ಹೋಗದಂತೆ ರಕ್ಷಣೆಯನ್ನು ಕೊಡಬೇಕು. ಕರ್ನಾಟಕದ ಸಂಸ್ಕೃತಿ, ಘನತೆ ಮುಂತಾದುವನ್ನು ಉಚ್ಚಮಟ್ಟಕ್ಕೆ ಏರಿಸಬೇಕು ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಚನ್ನಬಸಪ್ಪನವರು ನನಗೆ ಪಿತೃಸಮಾನರಾಗಿದ್ದಾರೆ. ಅವರು ಇತರ ಮಂತ್ರಿ ವರ್ಗದವರೊಡನೆ ತಿರುಪತಿ ವೆಂಕಟರಮಣ ಸ್ವಾಮಿಯ ಸನ್ನಿಧಿಗೆ ಬಂದು ಯಾರೂ ಲಂಚ ತೆಗೆದು ಕೊಂಡಿಲ್ಲ ಎಂಬುದಾಗಿ ಪ್ರಮಾಣ ಮಾಡಿದರೆ ನಾನು ಅವರ ಕಾಲನ್ನು ಹಿಡಿದು ಕೊಳ್ಳುತ್ತೇನೆ. ಇವರೆಲ್ಲ ತಿರುಪತಿ ವೆಂಕಟರಮಣಸ್ವಾಮಿಯ ಸನ್ನಿಧಿಗೆ ಬಂದು ನಾನಾಗಲೀ, ನನ್ನ ಹೆಂಡತಿ ಮಕ್ಕಳಾಗಲೀ, ಅಳಿಯನಾಗಲೀ, ಲಂಚ ತೆಗೆದು ಕೊಳ್ಳಲಿಲ್ಲ ಎಂದು ಹೇಳುವುದಾದರೆ ತಾವು ಕೊಡತಕ್ಕ ಶಿಕ್ಷೆಗೆ ಸ್ವಾಮಿ ಪಾದದಡಿ ಯಲ್ಲಿ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಇವರಿಂದ ಇವರ ಅದಿಕಾರಿಗಳಿಂದ ನಮಗೆ ನ್ಯಾಯ ದೊರೆಯುವುದಿಲ್ಲ, ಕರ್ನಾಟಕದ ಜನತೆಗೆ ನ್ಯಾಯ ದೊರೆಯುವು ದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮಂತ್ರಿ ಮಂಡಲದಲ್ಲಿ ಮಧ್ಯದಲ್ಲಿ ಬದಲಾವಣೆ ಆಯಿತು. ಲಂಚ ತಿಂದವರು ಅಧಿಕಾರದಲ್ಲಿದ್ದಾರೆ. ಶುದ್ಧಹಸ್ತ ರಾಗಿದ್ದವರು ಮನೆಗೆ ಹೋಗಿದ್ದಾರೆ ಎನ್ನುವ ಮಾತು ಜನ ಆಡಿಕೊಳ್ಳುತ್ತಿದ್ದಾರೆ. ಲಕ್ಷಗಟ್ಟಲೆ ಮಾಡಿಕೊಂಡು ಹೋದರು. ಧರ್ಮರಾಯನಂಥವರು ಕೈ, ಬಾಯಿ, ಕಚ್ಚೆ ಶುದ್ಧವಾಗಿರುವವರನ್ನು ಮಂತ್ರಿಮಂಡಲದಲ್ಲಿ ಇಟ್ಟುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟು ಕರ್ನಾಟಕದ ಜನತೆಗೆ ರಕ್ಷಣೆಕೊಡಬೇಕು. ಮಂತ್ರಿಮಂಡಲದಲ್ಲಿ ಕೆಲಸವಿಲ್ಲದ ಮಂತ್ರಿಗಳನ್ನು ಬೇರೆ ಇಟ್ಟುಕೊಂಡಿದ್ದಾರೆ. ಯಾರ ಮನೆ ದುಡ್ಡು ? ಅವರಿಗೆ ಒಂದು ಫೈಲ್ ಸಹ ಹೋಗುವುದಿಲ್ಲವಂತೆ. ನಮ್ಮ ಅಪ್ಪ ಕಂದಾಯ ಕೊಟ್ಟಿದ್ದಾನೆ, ನಾನು ಕಂದಾಯ ಕೊಡುತ್ತೇನೆ. ನಾವು ಕಂದಾಯದ ರೂಪದಲ್ಲಿ ಕೊಡುವುದನ್ನು ಬಿಟ್ಟಿಯಾಗಿ ಮಂತ್ರಿಗಳಿಗೆ ಕೊಡುತ್ತಿದ್ದಾರೆ. ಕೆಲಸವಿಲ್ಲದೆ ಇರತಕ್ಕ ಮಂತ್ರಿಗಳು ಒಂದು ಗಳಿಗೆಯೂ ಸಹ ಇರಬಾರದು. ನಮ್ಮ ಮುಖ್ಯ ಮಂತ್ರಿಗಳು ಕೆಲವು

(ಶ್ರೀ ಬಿ ಪುಟ್ಟಸ್ವಾಮಯ್ಯ)

ಸಲ ಸತ್ಯವನ್ನು ಹೇಳಿ ಮಾತನಾಡುತ್ತಾರೆ. ಒಂದೇ ಕಲ್ಲಿನಲ್ಲಿ ಅವರು ಎರಡು ಕೆಲಸ ಮಾಡಿದರು. ಬಸವಲಿಂಗಪ್ಪನವರನ್ನು ಮನೆಗೆ ಕಳುಹಿಸಿ ಸವರನ್ ಬಣ್ಣ ಇದ್ದಂಥ ರಂಗನಾಥ್ ಅವರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡರು. ಇದೆಲ್ಲದರ ಬಗ್ಗೆ ಉತ್ತರ ಕೊಡಬೇಕು. ತಿರುಪತಿ ವೆಂಕಟರಮಣ ಸ್ವಾಮಿಯ ಪಾದಕ್ಕೆ ಇವರೆಲ್ಲರನ್ನೂ ಒಂದು ಸಲ ಹಾಕಬೇಕು. ತಿರುಪತಿ ವೆಂಕಟರಮಣ ಸ್ವಾಮಿಯು ಇವರಿಗೆಲ್ಲ ಸದ್ಬುದ್ಧಿಯನ್ನು ಕೊಡಲಿ, ದೇಶಕ್ಕೆ ಕಲ್ಯಾಣವಾಗಲಿ ಎಂದು ಹರಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು) — ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ರಾಜ್ಯಪಾಲರು ಎರಡೂ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು ಅವರು ವಂದನಾ ನಿರ್ಣಯ ವನ್ನು ಸೂಚನೆ ಮಾಡಿದ್ದಾರೆ. ಅದನ್ನು ಬೆಂಬಲಿಸಿ ಕೆಲವಾರು ವಿಚಾರಗಳನ್ನು ಈ ಸದನದ ಮುಂದೆ ಇಡಲು ಇಚ್ಛೆಪಡುತ್ತೇನೆ.

ವಿರೋಧಪಕ್ಷದ ನಾಯಕರು ಹಾಗೂ ವಿರೋಧಪಕ್ಷದ ಸದಸ್ಯರು ನಮ್ಮ ರಾಜ್ಯದ ಆಡಳಿತದ ವಿಚಾರವಾಗಿ ಅನೇಕ ವಿಧವಾಗಿ ಟೀಕೆಟಿಪ್ಪಣಿಗಳನ್ನು ಬಹಳ ಗಂಭೀರವಾಗಿ ಕೆಲವು ಸಂದರ್ಭಗಳಲ್ಲಿ ಅತಿರೇಕವಾಗಿ ಕೂಡ ಮಾಡಿದ್ದಾರೆ. ಈಗತಾನೇ ಮಾತನಾಡಿದ ಶ್ರೀ ಪುಟ್ಟಸ್ವಾಮಯ್ಯನವರು ಮಂತ್ರಿಮಂಡಲವು ರಾಜಿನಾಮೆ ಕೊಡಬೇಕೆಂದು ಕೇಳುವ ಮಟ್ಟಕ್ಕೆ ಬಂದಿರುವುದನ್ನು ನೋಡಿದರೆ ನಿಜವಾಗಿಯೂ ಅದು ಶೋಚನೀಯವಾದ ವಿಷಯವೆಂದು ನಾನು ಸ್ವಲ್ಪಮಟ್ಟಿಗೆ ವಿಷದಪಡುತ್ತೇನೆ.

ಈ ದೇಶದ ಪರಿಸ್ಥಿತಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ಆ ಕಡೆಯ ಸದಸ್ಯರಿಗೆ ಗೊತ್ತಿದೆ. ಸುಮಾರು 25 ವರ್ಷಗಳಿಂದ ಸತತವಾಗಿ ರಾಜ್ಯವನ್ನಾಳಿದ ಸರ್ಕಾರ ಬಹುಮಟ್ಟಿಗೆ ಈ ಒಂದು ಕಷ್ಟ ಪರಿಸ್ಥಿತಿ ಈ ದಿವಸ ನಮ್ಮ ರಾಜ್ಯದಲ್ಲಿ ಬರುವುದಕ್ಕೆ ಕಾರಣವೆಂದರೆ ತಪ್ಪಾಗಲಾರದು. 25 ವರ್ಷ ಗಳಿಂದ ಮಾಡಬೇಕಾದಂಥ ಕೆಲಸವನ್ನು ನಾವು ಮಾಡಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿದೆ. ನಿಜವಾಗಿಯೂ ಮಾಡಬೇಕಾದ ಕೆಲಸಗಳನ್ನು ಮಾಡಿದ್ದ ಪಕ್ಷದಲ್ಲಿ ಇಂಥ ಗಂಭೀರವಾದ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿರಲಿಲ್ಲ ವೆಂದು ನಾನು ತಿಳಿದುಕೊಂಡಿದ್ದೇನೆ.

ನಮ್ಮ ದೇಶಕ್ಕೆ ಅತಿ ಮುಖ್ಯವಾಗಿ ಬೇಕಾಗಿರತಕ್ಕದ್ದು ಎಂದು ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಯ್ಯನವರು ಇದೇ ತಾನೇ ಹೇಳಿದಂತೆ ಕರ್ನಾಟಕ ರಾಜ್ಯದಲ್ಲಿ ವಜ್ರ ವೈಡೂರ್ಯ ಇತ್ಯಾದಿಗಳನ್ನು ಬೆಳೆಯುತ್ತಿದ್ದಂತಹ ದೇಶದಲ್ಲಿ ಅವೆಲ್ಲವನ್ನೂ ಸರಿಯಾಗಿ ಆಳೆಯುವುದಕ್ಕೆ ಶಕ್ತಿ ಕೂಡಾ ಇಲ್ಲವಾಗಿದೆ ಎಂದರು. ಇದರ ಬಗ್ಗೆ ತಾವೆಲ್ಲರೂ ಒಂದು ಮಾತನ್ನು ನೆನಪಿನಲ್ಲಿಡಬೇಕು. ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ನಮ್ಮ ದೇಶದಲ್ಲಿರತಕ್ಕ ಕಾವೇರಿ, ಕೃಷ್ಣಾ ಹಾಗೂ ತುಂಗಭದ್ರಾ ನದಿಗಳಿಗೆ ಸರಿಯಾದ ನೀರಾವರಿ ಯೋಜನೆಗಳನ್ನು ಹಾಕಿಕೊಂಡು ಅದನ್ನು ಪೂರ್ತಿಯಾಗಿ ಕಾರ್ಯರೂಪಕ್ಕೆ ತಂದಿದ್ದರೆ ಇವೊತ್ತಿನ ದಿವಸ ಇಂತಹ ಕಷ್ಟಗಳನ್ನು ಅನುಭವಿಸಬೇಕಾಗಿರಲಿಲ್ಲ. ಆದರೆ ನಮ್ಮ ಪಕ್ಕದ ನೆರೆರಾಜ್ಯಗಳನ್ನು ತಾವು ನೋಡಿದರೆ ಅವರು ಫರ್ಟಿಲೈಸರು ಹಾಗೂ ಕಬ್ಬಿಣದ ಕಾರ್ಖಾನೆಗಳನ್ನು ಮಾಡಿಕೊಂಡು ಜನತೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅಲ್ಲಿ ರೈತರಿಗೆ ಗೊಬ್ಬರ ಸುಲಭವಾಗಿ ಸಿಗುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಇನ್ನೂ ಒಂದು ಗೊಬ್ಬರ ಕಾರ್ಖಾನೆಯನ್ನೂ ಕೊಡಲಿಲ್ಲ. ಹಾಗೂ ನಮ್ಮಲ್ಲಿರುವ ನೀರಾವರಿ ಯೋಜನೆಯನ್ನೂ ಪೂರ್ಣ ಮಾಡಲಿಲ್ಲ ಇದನ್ನು ನಮ್ಮ ವಿರೋಧ ಪಕ್ಷದ ನಾಯಕರುಗಳು ತಿಳಿದುಕೊಳ್ಳಬೇಕಾಗಿದೆ. ಇಷ್ಟು ವರ್ಷಗಳಾದರೂ ಒಂದು ನೀರಾವರಿ ಯೋಜನೆಯನ್ನೂ ಪೂರ್ತಿಯಾಗಿ ಮಾಡಲಾಗಲಿಲ್ಲ. ಇದರಿಂದಾಗಿ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಿದೆ. ಅದೇ ನಮ್ಮ ನೆರೆಯ ರಾಜ್ಯಗಳಾದ ತಮಿಳು ನಾಡು ಹಾಗೂ ಆಂಧ್ರ ದೇಶಗಳನ್ನು ನೋಡಿದರೆ ಅವರು ಎಷ್ಟುಮಟ್ಟಿಗೆ ನೀರಾವರಿ ಯೋಜನೆಗಳನ್ನು ಮಾಡಿ ಅದನ್ನು ಪೂರ್ಣವಾಗಿ ಕಾರ್ಯಗತಮಾಡಿದ್ದಾರೆನ್ನುವುದು ನಮಗೆ ಗೊತ್ತಾಗುತ್ತದೆ ಮತ್ತು ಅವರು ಅಲ್ಲಿರುವ ರೈತಾಪಿಜನಗಳಿಗೆ ಬೇಕಾದಷ್ಟು ಸುಖ ಸೌಲಭ್ಯಗಳನ್ನು ಪಡೆದು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಅದೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಏನು ಮಾಡಿದರು ಎಂದರೆ ಅನೇಕ ರಸ್ತೆಗಳನ್ನು ಹಾಗೂ ಸೇತುವೆಗಳನ್ನು ಮಾಡಿದರು. ಕೆಲವು ನೀರಾವರಿ ಯೋಜನೆಗಳನ್ನು ಆರಂಭ ಮಾಡಿದರು. ಹಾಗೆ ಯಾವ ಕೆಲಸಗಳನ್ನು ಮಾಡಿದರೂ ಅದನ್ನು ಅರ್ಧಂಬರ್ಧ ಮಾಡಿ ಹಾಗೇ ನಿಲ್ಲಿಸಿ ಯಾವ ನೀರಾವರಿ ಯೋಜನೆಗಳೂ ಪೂರ್ಣವಾಗಿ ಆಗಲಿಲ್ಲ. ಆದರೆ ನಮ್ಮ ಸರಕಾರ ಬಂದು ಕೇವಲ ಎರಡು ವರ್ಷಗಳ ಕಾಲದಲ್ಲಿ ಇದು ಮಾಡಲಿಲ್ಲ, ಅದು ಮಾಡಲಿಲ್ಲ ಎಂದು ಟೀಕೆಗಳನ್ನು ಮಾಡಿದರೆ ಒಂದೇ ಸಾರಿಗೆ ಎಲ್ಲವನ್ನೂ ನಂದನವನ ಮಾಡುವುದಕ್ಕಾಗುವುದಿಲ್ಲ. ಸುಮ್ಮನೆ ಇಲ್ಲದ ಆರೋಪಗಳನ್ನು ಮಾಡುವುದರಿಂದೇನೂ ಆಗುವುದಿಲ್ಲ. ಇಂತಹ ಟೀಕೆಗಳನ್ನು ಕೇಳಿ ನಿಜವಾಗಿಯೂ ನನಗೆ ಬಹಳ ವ್ಯಥೆಯಾಗುತ್ತಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಈ ದೇಶದ ಜನತೆಗೆ ಗೊತ್ತಿರುವ ಹಾಗೆ ಉತ್ತರ ಕರ್ಣಾಟಕದ ಕೆಲವು ಭಾಗಗಳಲ್ಲಿ ನಮ್ಮ ದೇಶದಲ್ಲಿ ಎಂದೂ ಕಾಣದೇ

(ಶ್ರೀ ವಿ. ಕೃಷ್ಣ ರಾವ್)

ಇರತಕ್ಕಂತಹ ಷಾಮ ಡಾಮರ ಬಂದ ಕಾಲದಲ್ಲಿ ನಮ್ಮ ಕರ್ಣಾಟಕ ರಾಜ್ಯದವರು ಜನತೆಗೆ ಅನುಕೂಲ ಮಾಡಿ ಕೊಡಲು ಸುಮಾರು 63 ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚಮಾಡಿ ಇದರ ಬಗ್ಗೆ ಮುಂದೆ ಇಂತಹ ಕಷ್ಟಗಳು ಬಾರದಂತೆ ಶಾಶ್ವತವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡರು. ಇದನ್ನು ವಿರೋಧ ಪಕ್ಷದವರು ತಿಳಿದೂ ತಿಳಿದೂ ಇಂತಹ ಟೀಕೆ ಮಾಡಿರುವುದನ್ನು ನೋಡಿ ನನಗೆ ಬಹು ವಿಷಾದವಾಗುತ್ತದೆ. ಹಿಂದೆ ಇದ್ದ ಸರಕಾರಗಳು ಕ್ಷಾಮ ಬಂದಿದ್ದ ಕಾಲ ದಲ್ಲಿ ನೀರಾವರಿ ಯೋಜನೆಗಳು ಹಾಗೂ ಇನ್ನಿತರ ಶಾಶ್ವತವಾದ ಕಾರ್ಯಕ್ರಮ ಗಳನ್ನು ತೆಗೆದುಕೊಂಡು ಪೂರ್ಣ ಮಾಡಿದ್ದರೆ ಇಂದು ಜನ ಇಷ್ಟು ಕಷ್ಟಗಳನ್ನು ಅನುಭವಿಸಬೇಕಾಗಿರಲಿಲ್ಲ. ಎಡನೇದಾಗಿ ಅಂತಹ ಒಂದು ಪರಿಸ್ಥಿತಿಯಲ್ಲಿ ಸ್ವಲ್ಪ ಕಾಲ ತೀವ್ರವಾದ ಗಮನವನ್ನು ಕೂಡ ಅಲ್ಲಿ ಹರಿಯಬೇಕಾಗಿ ಬಂತು. ಆಗಿನಿಂದ ಕೆಲವು ಕಾರ್ಯಕ್ರಮಗಳು ಕೂಡ ಕುಂಠಿತವಾದವು. ಇದರಿಂದ ಸಾವಕಾಶ ವಾಗಲು ಕಾರಣವಾಯಿತು.

ನಮ್ಮ ಪಕ್ಕದ ರಾಜ್ಯಗಳಲ್ಲಿ ನೋಡುವಾಗ ಎಸನ್‌ಷಿಯಲ್ ಕಮಾಡಿಟೀಸ್ ಅದರಲ್ಲೂ ಪ್ರಾಮುಖ್ಯವಾಗಿ ಅಕ್ಕಿ ವಿಚಾರ ನೋಡಿದರೆ ಆಂಧ್ರ ಹಾಗೂ ತಮಿಳು ನಾಡಿನಲ್ಲಿ ಅಕ್ಕಿ ಬೆಲೆ ಕಡಿಮೆ ಇದೆ ಎಂದು ಕೇಳುತ್ತೇವೆ. ಮದ್ರಾಸಿನಲ್ಲಿ ನಾನು ಈಚೆಗೆ ಪ್ರವಾಸ ಹೋಗಿದ್ದಾಗ ಒಂದು ರೂಪಾಯಿಗೆ ಒಂದು ಕೆ. ಜಿ. ಅಕ್ಕಿ ಸಿಗುತ್ತಿತ್ತು ಎಂದ ಕೇಳಿದೆ. ಇಲ್ಲಿ ನೀರಾವರಿ ಯೋಜನೆ ಸೌಲಭ್ಯಗಳು ಹಾಗೂ ಗೊಬ್ಬರದ ಸೌಕರ್ಯ ಇವೆಲ್ಲ ರೈತರಿಗೆ ದೊರೆತುದರಿಂದ ಅಲ್ಲಿನ ಜನಕ್ಕೆ ಕಮ್ಮಿ ಬೆಲೆಯಲ್ಲಿ ಅಕ್ಕಿ ಇತ್ಯಾದಿ ಪದಾರ್ಥಗಳು ಸಿಗಲು ಅವಕಾಶವಾಯಿತು. ಹಿಂದೆ ಇದ್ದ ಸರಕಾರಗಳು ಇಂತಹ ಒಂದು ಕಾರ್ಯಕ್ರಮವನ್ನು ಶಾಶ್ವತವಾಗಿ ಹಾಕಿ ಕೊಂಡು ಕಾರ್ಯಗತ ಮಾಡಿದ್ದರೆ ನಮ್ಮ ರಾಜ್ಯದಲ್ಲೂ ಕೂಡ ಜನಕ್ಕೆ ಒಂದು ರೂಪಾಯಿಗೆ ಒಂದು ಕೆ. ಜಿ. ಸಿಗಬಹುದಾಗಿತ್ತು. ಆದರೆ ಆಗ ನಮ್ಮ ಸರಕಾರ ಮಾಡಿದ ನೀರಾವರಿ ಯೋಜನೆಗಳಾಗಲಿ ಗೊಬ್ಬರದ ಕಾರ್ಖಾನೆ ಆಗಲಿ ಪೂರ್ಣ ವಾಗಿ ಆಗಲಿಲ್ಲ, ಇದು ಬಹು ಪ್ರಾಮುಖ್ಯವಾದ ಅಂಶ. ಇದರಿಂದಾಗಿ ಇಂತಹ ಕಷ್ಟಗಳು ಈಗ ಬಂದಿವೆ, ಈಗಲಾದರೂ ಇಂತಹ ಕಷ್ಟಗಳನ್ನು ದೂರ ಮಾಡಲು ಶಾಶ್ವತವಾದ ಯೋಜನೆಗಳನ್ನು ಮಾಡಿ ಪೂರ್ಣ ಮಾಡಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಆಹಾರದ ವಿಚಾರದಲ್ಲಿ ಇವೊತ್ತಿನ ದಿನಸ ಸ್ವಲ್ಪ ಮಟ್ಟಿನ ಕಷ್ಟಗಳು ಇರಬಹುದು. ಕಷ್ಟಗಳಿಲ್ಲ ಎಂದು ಹೇಳುತ್ತಿಲ್ಲ. ಹೋದ ವರ್ಷಕ್ಕೂ ಮತ್ತು ಈ ವರ್ಷಕ್ಕೂ ಹೋಲಿಸಿದರೆ ಆಹಾರದ ಬೆಲೆ ಸ್ವಲ್ಪ ಉತ್ತಮವಾಗಿದೆ ಎಂದು

ಹೇಳಬಹುದು. ಈ ವರ್ಷ ಸ್ವಲ್ಪ ಉತ್ತಮವಾದ ಮಳೆ ಬಂದು ಮಳೆ ಬೆಳೆಗಳು ಆಗಿ ಆಹಾರದ ಕೊರತೆಯನ್ನು ಕಡಿಮೆ ಮಾಡುವ ಸ್ಥಿತಿಗೆ ಬಂದಿದೆ. ಇದೂ ಅಲ್ಲದೆ ಬಾರ್ಡರು ಭಾಗಗಳಲ್ಲಿ ಎಂದರೆ ಕೇರಳಕ್ಕೆ ನಮ್ಮ ರಾಜ್ಯದಿಂದ ಕಳ್ಳ ಸಾಗಣಿಕೆಯಾಗುತ್ತಿತ್ತು. ಇದರಿಂದಾಗಿ ಇಂದು ಬೆಲೆಗಳು ಹೆಚ್ಚು ಆಗಲು ಕಾರಣವಾಯಿತು. ಇದರ ಬಗ್ಗೆ ಸರಕಾರ ಸಾಕಷ್ಟು ತೀವ್ರವಾದ ಕ್ರಮ ತೆಗೆದು ಕೊಂಡು ಇದನ್ನು ತಡೆಗಟ್ಟಲು ತಕ್ಕ ಸಿಬ್ಬಂದಿ ಇಟ್ಟು ಆಹಾರ ಪದಾರ್ಥಗಳು ಹೊರಗಡೆಗೆ ಹೋಗದಂತೆ ಮಾಡಬೇಕು.

ಮೂರನೇದಾಗಿ ವ್ಯವಸಾಯದ ಬಗ್ಗೆ ಎಷ್ಟರ ಮಟ್ಟಿನ ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳಬೇಕೋ ಅಷ್ಟು ಮಟ್ಟಿನ ಕಾರ್ಯಗಳನ್ನು ಮಾಡಲಾಗಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ, ನಾವು ನೀರಾವರಿ ಯೋಜನೆಗಳನ್ನು ಮಾಡುವುದರಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ಹಿಂದೆ ಇದ್ದ ಸರಕಾರ ನೀರಾವರಿಗೆ ಹೆಚ್ಚು ಆದ್ಯತೆ ಕೊಟ್ಟು ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಎಲ್ಲ ಯೋಜನೆಗಳನ್ನೂ ಪೂರ್ಣ ಮಾಡಿದ್ದರೆ ಪ್ರಾಯಶಃ ನಮ್ಮ ದೇಶದಲ್ಲಿ ಬರಗಾಲ ಎನ್ನುವುದು ಬರುತ್ತಲೇ ಇರಲಿಲ್ಲ. ನೀರಾವರಿ ಯೋಜನೆಗಳು ನಮ್ಮ ದೇಶಕ್ಕೆ ಬಹು ಮುಖ್ಯವಾದವು. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದು. ನೀರಾವರಿ ಯೋಜನೆಗಳನ್ನು ತಡಮಾಡದೆ ತ್ವರಿತಯಿಂದ ಪೂರ್ಣವಾಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಹಿಂದೆ ಅರಂಭ ವಾದ ನೀರಾವರಿ ಯೋಜನೆಗಳು ಕೆಲಸ ಮಾಡಿ ಅದಕ್ಕೆ ಖರ್ಚು ಮಾಡಿದ್ದರೂ ಅವು ಪೂರ್ಣವಾಗದೆ ಇದ್ದುದರಿಂದ ಇಂತಹ ತೊಂದರೆಗಳು ಬರಲು ಕಾರಣ ವಾಯಿತು. ಹತ್ತು ಯೋಜನೆಗಳನ್ನು ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಬದಲಾಗಿ ಒಂದೆರಡು ಯೋಜನೆಗಳನ್ನು ಪೂರ್ಣವಾಗಿ ತೆಗೆದುಕೊಂಡು ತೀವ್ರವಾಗಿ ಮುಗಿಸಲು ತೀವ್ರ ಕ್ರಮ ತೆಗೆದುಕೊಂಡಿದ್ದರೆ ಅದರಿಂದ ಜನತೆಗೆ ಎಷ್ಟೋ ಅನುಕೂಲಗಳು ಸಿಗುತ್ತಿತ್ತು. ಆದರೆ ತೆಗೆದುಕೊಂಡು ಯೋಜನೆಗಳು ಪೂರ್ತಿ ಯಾಗದೆ ಅರ್ಧಂಬರ್ಧ ಉಳಿದವು. ಇದರಿಂದಾಗಿ ಕಷ್ಟಗಳು ಜನತೆಗೆ ಆದವು. ಇದರ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಪಿ. ಡಬ್ಲು. ಡಿ. ಮಂತ್ರಿಗಳು ತೀವ್ರವಾದ ಗಮನ ಹರಿಸಿ ನೀರಾವರಿ ಯೋಜನೆಗಳು ಪೂರ್ಣವಾಗಿ ಕಾರ್ಯ ರೂಪಕ್ಕೆ ಬರುವಂತೆ ಮಾಡಿ ರೈತಾಪಿ ಜನಕ್ಕೆ ಅನುಕೂಲ ಮಾಡಿಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟು ರೈತರ ಬಗ್ಗೆ ಬಹಳವಾಗಿ ಹೇಳಿದರು. ರೈತರಿಗಾಗಿ ಒಳ್ಳೆಯ ಬೀಜ ಹಾಗೂ ಗೊಬ್ಬರ ಒದಗಿಸದೇ ಇದ್ದರೆ ಅವರು ಹೇಗೆ ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಇದರ ಬಗ್ಗೆ ಯಾರೂ ಯೋಚನೆ ಮಾಡಲಿಲ್ಲ. ಗೊಬ್ಬರದ ಕಾರ್ಖಾನೆ ಏನೋ ಬೇಗನೆ ಬರುತ್ತದೆ ಎಂದು ಕೇಳುತ್ತೇನೆ. ಅ ರೀತಿ ಬೇಗನೆ ನಮ್ಮ ರಾಜ್ಯದಲ್ಲಿ ಒಂದು ಗೊಬ್ಬರ

(ಶ್ರೀ ವಿ. ಕೃಷ್ಣರಾವ್)

ಕಾರ್ಖಾನೆಯಾದರೆ ರೈತರಿಗೆ ಗೊಬ್ಬರ ಸಿಗಲು ಸಹಾಯವಾಗುತ್ತದೆ. ಇದರ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳಾದ ಶ್ರೀ ಕೃಷ್ಣಾರವರು ಶ್ರದ್ಧೆಯಿಂದ ಹಾಗೂ ತೀವ್ರವಾಗಿ ಈ ಕಾರ್ಖಾನೆಯಾಗುವಂತೆ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ. ಹಾಗೇನೇ ಅರಣ್ಯದ ಬಗ್ಗೆ ಹೇಳಬೇಕಾಗಿದೆ. ಅರಣ್ಯಕ್ಕೂ ವ್ಯವಸಾಯಕ್ಕೂ ಸಂಬಂಧ ಬಹಳ ಇದೆ. ಅರಣ್ಯ ಇದ್ದರೆ ಮಳೆ ಬರುತ್ತದೆ. ಮಳೆ ಬಂದರೆ ಬೆಳೆಯಾಗುತ್ತದೆ. ಮಳೆಬೆಳೆಗಳಾದರೆ ಜನತೆಗೆ ಅನುಕೂಲ ವಾಗುತ್ತದೆ. ಆದರೆ ಇಂದು ನಮ್ಮ ರಾಜ್ಯದ ಅರಣ್ಯವನ್ನು ನೋಡಿದರೆ ಬಹಳ ಶೋಚನೀಯವಾಗುತ್ತದೆ. ಕೇರಳದಂತಹ ಹೊರ ರಾಜ್ಯಗಳಿಗೆ ಶ್ರೀಗಂಧದ ಕಳ್ಳಸಾಗಾಣಿಕೆಯಾಗುತ್ತಿದೆ. ಇದನ್ನು ತಡೆಗಟ್ಟಲು ಸರಕಾರ ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮುಂದೆ ಗಂಧದ ಮರದ ಕಳ್ಳಸಾಗಣಿಕೆಯಾಗದಂತೆ ಸರ್ಕಾರ ದವರು ಗಡಿಗಳಲ್ಲಿ ಕಟ್ಟುನಿಟ್ಟಾದ ಕಾವಲನ್ನು ಹಾಕುವುದರ ಮೂಲಕ ಅರಣ್ಯ ಸಂಪತ್ತನ್ನು ಉಳಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಅರಣ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಟನ್ ಒಂದಕ್ಕೆ ನೂರು ರೂಪಾಯಿ ಬೆಲೆ ಬಾಳುವ ನೀಲಗಿರಿ ಮರಗಳನ್ನು ಕೇವಲ ಟನ್ ಒಂದಕ್ಕೆ 24 ರೂಪಾಯಿಗಳ ಪ್ರಕಾರ ಕೈಗಾರಿಕೋದ್ಯಮಿಗಳಿಗೆ ಮಾರಾಟ ಮಾಡುವುದಕ್ಕೆ ಹಿಂದಿನ ಸರ್ಕಾರ ದವರು ಒಪ್ಪಂದ ಮಾಡಿಕೊಂಡಿದ್ದು ಭಾರಿ ಅಪರಾಧ ಎಂದು ಹೇಳಿದರೆ ತಪ್ಪಾಗ ಲಾರದು. ಇಂತಹ ಒಂದು ಅಕ್ರಮವಾದಂಥ ಕೆಲಸವನ್ನು ಹಿಂದಿನ ಸರ್ಕಾರ ಏತಕ್ಕೆ ಮಾಡಿತ್ತು ಎಂದು ನಾನು ನೇರವಾಗಿ ಮಾನ್ಯ ಪುಟ್ಟಸ್ವಾಮಿಯವರನ್ನು ಕೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :- ಆ ದಿವಸದ ಬೆಲೆ ಆ ರೀತಿ ಇತ್ತು;

ಶ್ರೀ ಕಾಗೋಡು ತಿಮ್ಮಪ್ಪ :- ಈ ವಿಚಾರ ಹೋದ ಸಲ ಈ ಸಭೆಯಲ್ಲಿ ಚರ್ಚೆಗೆ ಬಂದಿದ್ದಾಗ ನಾವು ಈ ಅಕ್ರಮ ವ್ಯವಹಾರವನ್ನು ರದ್ದುಮಾಡಿ ಹೊಸ ಅರ್ಜಿಯನ್ನು ಹೊರಡಿಸಿ ಎಂದು ಹೇಳಿದ್ದೆವು. ಅದರ ಬಗ್ಗೆ ನಿಮ್ಮ ಕೆ. ಎಚ್. ಪಾಟೀಲ್ ಅವರು ಏತಕ್ಕೆ ಕ್ರಮ ಕೈಕೊಳ್ಳಲಿಲ್ಲ ಎಂದು ಕೇಳುತ್ತೇನೆ?

ಶ್ರೀ ಎಂ. ಎಸ್. ಕೃಷ್ಣನ್ :- ಹಿಂದಿನವರು ಆ ರೀತಿ ಮಾಡಿದರು, ಈ ರೀತಿ ಮಾಡಿದರು ಎಂದು ಹೇಳುವುದರ ಬದಲು ನೀವು ಏನು ಮಾಡಿದ್ದೀರಿ, ಏನು ಮಾಡುತ್ತೀರಿ ಎಂಬುದನ್ನು ಹೇಳಿ; ಹಿಂದಿನವರು ಅಡ್ಡದಾರಿ ಹಿಡಿದರೆ ನೀವೂ ಸಹ ಅಡ್ಡದಾರಿ ಹಿಡಿಯುವುದು ಬೇಡ;

ಶ್ರೀ ವಿ. ಕೃಷ್ಣರಾವ್ ;- ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಹಿಂದಿನ ಸರ್ಕಾರದವರು ಏನು ಕಾನೂನು ಕಟ್ಟಳೆಯನ್ನು ಈ ಬಗ್ಗೆ ಮಾಡಿದ್ದಾರೋ ಅದನ್ನು ಏಕ್‌ದಮ್ ಕಿತ್ತುಹಾಕುವುದಕ್ಕೆ ಅನೇಕ ಅಡ್ಡಿ ಅತಂಕಗಳು ಬರುತ್ತ ವೆಂಬುದನ್ನು ತಾವು ತಿಳಿದುಕೊಳ್ಳಬೇಕು. ಈ ಒಂದು ದಿಶೆಯಲ್ಲಿ ನಮ್ಮ ಅರಣ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕಲ್ಲದೆ ಇರುವ ಅರಣ್ಯ ಸಂಪತ್ತನ್ನು ವೃದ್ಧಿ ಮಾಡಬೇಕೆಂದು ಮತ್ತು ಮುಂದೆ ಇಂತಹ ಅಕ್ರಮಗಳು ಆಗದಂತೆ ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ಕೈಗಾರಿಕೆಯ ಬಗ್ಗೆ ಹೇಳುವುದಾದರೆ, ನಮ್ಮ ಕರ್ನಾಟಕ ರಾಜ್ಯ ವನ್ನು ಇಡೀ ಭಾರತ ದೇಶಕ್ಕೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯ ಕೈಗಾರಿಕಾ ರಂಗದಲ್ಲಿ ಮುಂದೆ ಇದೆ ಎಂಬುದನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ. ಈಗ ನಮ್ಮ ರಾಜ್ಯದಲ್ಲಿರುವ ಪ್ರಮುಖ ಕೈಗಾರಿಕೆಗಳೆಲ್ಲಾ ಬೆಂಗಳೂರು ನಗರದಲ್ಲಿಯೇ ಸೀಮಿತವಾಗಿವೆ. ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದಂತೆ ಪ್ರತಿ ಹಳ್ಳಿಗಳಲ್ಲಿಯೂ ಕೈಗಾರಿಕೆಗಳು ಪ್ರಾರಂಭವಾಗಬೇಕು. ಹಳ್ಳಿಗಳಲ್ಲಿರುವ ಪ್ರತಿ ಗುಡಿಸಿಲಿನಲ್ಲಿಯೂ ಸಣ್ಣ ಸಣ್ಣ ಕೈಗಾರಿಕೆಗಳು ಪ್ರಾರಂಭವಾಗುವಂತಹ ಯೋಜನೆಯನ್ನು ನಮ್ಮ ಸರ್ಕಾರದವರು ತಯಾರು ಮಾಡಬೇಕೆಂದು ಈ ಸಂದರ್ಭ ದಲ್ಲಿ ಕೇಳಿಕೊಳುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆ ಎಂಬುದು ಇಂದು ನಮ್ಮ ದೇಶದಲ್ಲಿ ತಾಂಡವಾಡುತ್ತಿದೆ. ಈ ಸಮಸ್ಯೆಯನ್ನು ಹೋಗಲಾಡಿಸುವ ಸಲುವಾಗಿ ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಒಂದು ಯೋಜನೆ ಯನ್ನು ಈಗಾಗಲೇ ಹೊರಡಿಸಿದ್ದಾರೆ. ಇದರ ಜೊತೆಗೆ ನಮ್ಮ ಸರ್ಕಾರದವರು ಸಹ ಹೊಸದಾಗಿ ಹತ್ತು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುವುದರ ಮೂಲಕ ಈ ನಿರುದ್ಯೋಗ ಸಮಸ್ಯೆಯನ್ನು ತಗ್ಗಿಸಲು ಹೊರಟಿರುವುದು ಸಂತೋಷದ ಸಂಗತಿ. ಈ ಕಾರ್ಖಾನೆಗಳು ಪ್ರಾರಂಭವಾದರೆ ಸಾವಿರಾರು ಜನರಿಗೆ ಕೆಲಸ ಸಿಗುತ್ತದೆ. ಮತ್ತು ದೇಶದ ಸಂಪತ್ತು ಹೆಚ್ಚಾಗುವು ದಕ್ಕೆ ಸಹ ಅವಕಾಶವಾಗುತ್ತದೆಂದು ಭಾವಿಸುತ್ತೇನೆ. ವಿರೋಧಪಕ್ಷದ ನಾಯಕ ರಾದ ಶ್ರೀಮಾನ್ ದೇವೇಗೌಡರು ಶ್ರೀಮತಿ ಇಂದಿರಾಗಾಂಧಿಯವರನ್ನು ಅಳತೆ ಮಾಡುವುದಕ್ಕೆ ಹೊರಟರು. ಅವರನ್ನು ದೇಹಲಿಯ ಮೋಹಿನಿ ಎಂದು ಕರೆದರು. ಮತ್ತು ಅವರಿಂದಲೇ ಡೆಮೊಕ್ರಸಿ ಪತನವಾಯಿತು ಎಂದು ಹೇಳಿದರು. ಅವರು ವಿರೋಧಪಕ್ಷದ ನಾಯಕರಾಗಿದ್ದುಕೊಂಡು ದಯಮಾಡಿ ಆ ರೀತಿ ಅವರ ಮೇಲೆ ಅಪಾದನೆ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ, ಏಕೆಂದರೆ ಶ್ರೀಮತಿ ಇಂದಿರಾಗಾಂಧಿಯವರನ್ನು ಇಡೀ ಪ್ರಪಂಚವೇ ಮೆಚ್ಚಿಕೊಂಡಿದೆ. ಅವರು ಇಲ್ಲಿಯವರೆಗೆ ನಮ್ಮ ದೇಶದ ಅನೇಕ ಸಮಸ್ಯೆಗಳನ್ನು ಪರಿಹಾರ ಮಾಡಿದ್ದಾರೆ.

(ಶ್ರೀ ಪಿ. ಕೃಷ್ಣರಾವ್)

ಅದನ್ನು ನಾನು ವಿವರವಾಗಿ ಹೇಳಬೇಕಾಗಿಲ್ಲ; ಇಂತಹವರನ್ನು ಶ್ರೀಮಾನ್ ದೇವೇಗೌಡರು ದೂಷಣೆ ಮಾಡುವುದಕ್ಕೆ ಹೊರಟಿದ್ದು ಸರಿಯಲ್ಲ; ಶ್ರೀಮಾನ್ ಕಾಮರಾಜ್ ಅವರು ಸಹ ಶ್ರೀಮತಿ ಇಂದಿರಾಗಾಂಧಿಯವರ ಆಶೀರ್ವಾದ ಪಡೆಯುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಶ್ರೀಮಾನ್ ಗುಪ್ತಾ ಅವರು ಚುನಾವಣೆಯಲ್ಲಿ ಸೋತಿರುವುದರಿಂದ ಅವರು ಸಹ ಇಷ್ಟರಲ್ಲಿಯೇ ಶ್ರೀಮತಿ ಇಂದಿರಾಗಾಂಧಿಯವರ ಆಶೀರ್ವಾದ ಪಡೆಯುವುದಕ್ಕೆ ಬರುತ್ತಾರೆ. ಅದೇ ರೀತಿ ಶ್ರೀಮಾನ್ ದೇವೇಗೌಡರು ಸಹ ಶ್ರೀಮತಿ ಇಂದಿರಾಗಾಂಧಿಯವರ ಆಶಿರ್ವಾದ ಪಡೆದು ಶ್ರೀಮತಿ ಇಂದಿರಾಗಾಂಧಿಕಿ ಜೈ ಅನ್ನುವ ಕಾಲ ಬರುತ್ತವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ :....ಕಾಮರಾಜರ ಜೊತೆ ಸೇರಿದ್ದರಿಂದ ಎಲ್ಲವೂ ಹಾಳಾಗಿ ಹೋಯಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಕಾಮರಾಜರು ವೈಯಕ್ತಿಕವಾಗಿ ನಮ್ಮ ನಾಯಕರಾಗಿದ್ದಾರೆ. ನಾವುಗಳು ಯಾರೂ ಇವರ ಜೊತೆಯಲ್ಲಿ ಸೇರುವುದಿಲ್ಲ; ಏಕೆಂದರೆ ಇವರನ್ನು ಮುಟ್ಟಿದರೆ ನಾವು ಭಸ್ಮವಾಗುತ್ತೇವೆ.

‡ಶ್ರೀ ಸಿ. ಬೈರೇಗೌಡ (ವೇಮಗಲ್): ....ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯದ ವಿಧಾನಮಂಡಲದಲ್ಲಿ ಎರಡು ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿರತಕ್ಕಂತಹ ಭಾಷಣಕ್ಕೆ ಈ ಸದನದ ಹಿರಿಯ ಸದಸ್ಯರಾದ ಶ್ರೀ ಕೆ. ಆರ್. ಎಸ್. ನಾಯಿಡು ಅವರು ಮಂಡಿಸಿರತಕ್ಕಂಥ ಈ ಒಂದು ವಂದನಾ ನಿರ್ಣಯವನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳ ಬೇಕೆಂದಿದ್ದೇನೆ. ಮೊದಲು ಈ ರಾಜ್ಯಕ್ಕೆ ಮೈಸೂರು ಎಂದು ಹೆಸರು ಇತ್ತು. ಆ ಕಾಲದಲ್ಲಿ ಮಂತ್ರಿಗಳಾಗಿದ್ದವರ ಪೈಕಿ ಕೆಲವರು ಇಂದು ಆ ಕಡೆ ಕುಳಿತು ಕೊಳ್ಳುವುದಕ್ಕೆ ಬದಲಾಗಿ ಈ ಕಡೆ ಕುಳಿತುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ಏನು ? ಕೆಲವರ ಮೇಲೆ ಅನೇಕ ರೀತಿಯ ಅಪಾದನೆಗಳು ಬಂದಿದ್ದರಿಂದ ಜನತೆ ಕೆಲವು ಕಡೆ ಅವರನ್ನು ಕತ್ತೆಗಳನ್ನಾಗಿ ಮಾಡಿದರು, ಕೆಲವು ಕಡೆ ಅವರನ್ನು ನಾಯಿಗಳನ್ನಾಗಿ ಮಾಡಿದರು, ಕೆಲವು ಕಡೆ ಕುರಿಗಳನ್ನಾಗಿ ಮಾಡಿದರು ;

ಆದರೆ ಇವೊತ್ತಿನ ದಿವಸ ಕೆಲವರು ಇಲ್ಲಿ ಕುಳಿತುಕೊಂಡು ಅಲ್ಲಿ ಕೆಲವರು ಕುಳಿತುಕೊಳ್ಳಬೇಕಾದರೆ ಏನು ಕಾರಣ ? ಇನ್ನೂ ಕೆಲವರು ಹೊಸಬರು ಈ ಮಂತ್ರಿಗಳ ಸ್ಥಾನದಲ್ಲಿ ಬಂದು ಕುಳಿತುಕೊಂಡಿದ್ದಾರೆ. ಯಾವ ಅರ್ಹತೆಯ

ಮೇಲೆ ಅವರು ಇಲ್ಲಿ ಬಂದು ಕುಳಿತುಕೊಂಡಿದ್ದಾರೆ? ಅವರಿಗೆ ಇರುವ ವಿಶೇಷ ಗುಣಗಳು ಏನು ಎಂಬುದು ಅರ್ಥವಾಗುವುದಿಲ್ಲ. ಇದನ್ನು ನೋಡಿ ಸಾಮಾನ್ಯ ಜನಗಳು ಏನು ಹೇಳುತ್ತಾರೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಇವೊತ್ತು ಈ ಸರ್ಕಾರ ದಲ್ಲಿ ಮಂತ್ರಿ ಮಂಡಲದಲ್ಲಿ ಯಾರೇ ಸದಸ್ಯರಾಗಿರಬೇಕಾದರೆ ಅವರಿಗೆ ಅನೇಕ ಅರ್ಹತೆಗಳು ಇರಬೇಕು ಎಂದು. ಅವರಿಗೆ ಇರಬೇಕಾದ ಪ್ರಾಮುಖ್ಯವಾದ ಅರ್ಹತೆಗಳು ಏನು ಎಂಬುದನ್ನು ನಮ್ಮ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಹೇಳುತ್ತಿದ್ದರು ಕೈ ಮತ್ತು ಕಚ್ಚೆ ಈ ಎರಡರಲ್ಲಿ ಶುದ್ಧ ರಾಗಿದ್ದರೆ, ನಿಸ್ಸೀಮರಾಗಿದ್ದರೆ ಅಂಥವರಿಗೆ ಈ ಮಂತ್ರಿಮಂಡಲದಲ್ಲಿ ಅವಕಾಶ ಇದೆ ಎಂದು. ಆದರೆ ಈ ಮಂತ್ರಿಮಂಡಲದಲ್ಲಿ ಅಂಥಾ ಅರ್ಹತೆ ಇರತಕ್ಕವರು ಯಾರು ಎಂದರೆ ಶ್ರೀಮಾನ್ ಚನ್ನಬಸಪ್ಪನವರು ಒಬ್ಬರು ಇದ್ದಾರೆ. ಶ್ರೀಮಾನ್ ಕೆ. ಹೆಚ್. ರಂಗನಾಥ್ ಅವರು ಒಬ್ಬರು ಇದ್ದಾರೆ. ಏನೂ ಗೊತ್ತಿಲ್ಲದೇ ಇರತಕ್ಕ ವರು ಶ್ರೀಮಾನ್ ಬದರೀನಾರಾಯಣ್ ಅವರು ಮತ್ತು ಶ್ರೀಮಾನ್ ಶಂಕರಆಳ್ವ ಅವರು. ಶ್ರೀಮಾನ್ ಬಸವಲಿಂಗಪ್ಪನವರ ವೈಯಕ್ತಿಕವಾದ ಜೀವನದ ವಿಷಯ ಏನೇ ಇರಲಿ. ಅವರು ಈ ರಾಜ್ಯದಲ್ಲಿ ಕೆಲವು ವಿಭಾಗದ ಸಮಸ್ಯೆಗಳಿಗೆ ಸಂಬಂಧ ಪಟ್ಟ ಕೆಲಸಗಳನ್ನು ಅವರು ಮಾಡಿದ್ದನ್ನು ಯಾರೂ ಮರೆಯುವ ಹಾಗಿಲ್ಲ. ಅವರಿಗೆ ಈ ಮಂತ್ರಿಮಂಡಲದಲ್ಲಿ ಸ್ಥಾನವಿಲ್ಲ. ಇದನ್ನು ನೋಡಿದರೆ ಕೆಲವರು ಕೊಟ್ಟಿರತಕ್ಕ ಅಪಾದನೆಗಳು ಅವರ ಮೇಲೆ ಇತ್ತು. ಕೆಲವರು ಏನು ಅಪಾದನೆ ಗಳನ್ನು ಮಾಡಿದ್ದರು ಆ ಪಾದನೆಗಳಿಗೆ ಇಡೀ ಮಂತ್ರಿಮಂಡಲವೇ ರೆಸ್‌ಪಾನ್ಸಿಬಲ್ ಆಗಿತ್ತು. ಆ ಅಪಾದನೆಗಳಿಗಾಗಿ ಜವಾಬ್ದಾರರಾಗಿ ಅವರು ಏನಾದರೂ ಮಂತ್ರಿ ಮಂಡಲದಿಂದ ಹೊರಗಡೆ ಹೋಗಿದ್ದರೆ ಮೊದಲನೆಯದಾಗಿ ಮುಖ್ಯ ಮಂತ್ರಿಗಳು ಹೊರಗಡೆ ಹೋಗಬೇಕಾಗಿತ್ತು. ಅವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಇಂಥಾ ಅಪಾದನೆಗಳಿರತಕ್ಕ ಮಂತ್ರಿಮಂಡಲ ರಾಜ್ಯದಲ್ಲಿ ಎರಡು ವರ್ಷಗಳು ರಾಜ್ಯಭಾರವನ್ನು ಮಾಡಿದ್ದಾರೆ. ಆದ್ದರಿಂದ ಅವರು ಮೊದಲು ರಾಜೀನಾಮೆ ಯನ್ನು ಕೊಡಬೇಕಾಗಿತ್ತು ಈ ಕೆಲಸವನ್ನು ಮುಖ್ಯ ಮಂತ್ರಿಗಳು ಮಾಡಲಿಲ್ಲ. ಅವರು ಗಟ್ಟಿಮುಟ್ಟಾಗಿ ಮುಖ್ಯ ಮಂತ್ರಿಗಳ ಸ್ಥಾನದಲ್ಲಿ ಕುಳಿತುಕೊಂಡಿದ್ದಾರೆ. ಈಗಿರತಕ್ಕ ಮಂತ್ರಿಮಂಡಲದಿಂದ ನಮ್ಮ ರಾಜ್ಯದ ಪರಿಸ್ಥಿತಿ ಏನಾಗಿದೆ ಎಂದರೆ 1972-73ರ ಅಂಕಿ ಅಂಶಗಳ ಪ್ರಕಾರ ರಾಷ್ಟ್ರದ ಆದಾಯ ಶೇಕಡಾ 2 ರಷ್ಟು ಜಾಸ್ತಿಯಾಗಿದ್ದರೆ ಇವರ ಆಡಳಿತದಲ್ಲಿ ನಮ್ಮ ರಾಜ್ಯದಲ್ಲಿ ಪರ್‌ಕ್ಯಾಪಿಟಾ ಇನ್‌ಕಂ ಶೇಕಡಾ 4 ರಷ್ಟು ಕಡಿಮೆಯಾಗಿದೆ. ಇವೊತ್ತು ರಾಜ್ಯದ ಅಭಿವೃದ್ಧಿ ಹಿಂದಕ್ಕೆ ಹೋಗುತ್ತಿದೆ, ಕಡಿಮೆಯಾಗಿದೆ. ಇದೇ ರೀತಿಯಲ್ಲಿ ಗರೀಬಿಹಠಾವೋ ಕಾರ್ಯ ಕ್ರಮದಲ್ಲಿ ತಮಟೆ ಹೊಡೆದು ಭೂಸುಧಾರಣಾ ಕಾನೂನು ಜಾರಿಗೆ ತರುತ್ತೇವೆ, ನಗರ ಆಸ್ತಿಮಿತಿ ತರುತ್ತೇವೆ ಎಂದು ಹೇಳುತ್ತಿದ್ದರು. ಈಗ ಇವರು ತಂದಿರತಕ್ಕ ಭೂಸುಧಾರಣಾ ಕಾನೂನು ಪ್ರಗತಿಪರ ಕಾನೂನು ಎಂದು ನಾನು ಹೇಳುವುದಿಲ್ಲ.

(ಶ್ರೀ ಸಿ. ಬೈರೇಗೌಡ)

ಇವರ ಇನ್ನೊಂದು ಕಾನೂನು ನಗರ ಆಸ್ತಿ ಮಿತಿ ಕಾನೂನು ಏನಾಯಿತು. ಈ ನಗರ ಆಸ್ತಿ ಮಿತಿಗೆ ಸಂಬಂಧಪಟ್ಟ ಹಾಗೆ ಈ ಸದನದಲ್ಲಿ ಒಂದು ನಿರ್ಣಯವನ್ನು ತಂದು ಕೇಂದ್ರದಲ್ಲಿ ಪಾರ್ಲಿಮೆಂಟಿನಲ್ಲಿ ಇಂದಿರಾ ಗಾಂಧಿಯವರು ಈ ಕಾನೂನು ಮಾಡುತ್ತಾರೆ ಎಂದು ಆ ನಿರ್ಣಯವನ್ನು ಇಲ್ಲಿ ಪಾಸು ಮಾಡಿ ಕಳುಹಿಸಿದರು. ಆದರೆ ರಾಜ್ಯಪಾಲರ ಭಾಷಣದಲ್ಲಿ ಮೊದಲನೆಯ ಪುಟದಿಂದ ಕೊನೆಯ ಪುಟದವರೆಗೂ ಹುಡುಕಿದರೂ ಕೂಡ ಈ ನಗರಾಸ್ತಿ ಮಿತಿ ಕಾನೂನಿಗೆ ಸಂಬಂಧಪಟ್ಟ ಪ್ರಸ್ತಾಪವನ್ನು ಮಾಡಿಲ್ಲ. ಏತಕ್ಕೆ ಇವರು ಅರ್ಬನ್ ಸೀಲಿಂಗ್ ಪ್ರಾಪರ್ಟಿ ಕಾನೂನನ್ನು ಏತಕ್ಕೆ ಇವರು ತರುತ್ತಾ ಇಲ್ಲ ಎಂದರೆಯಾರು ಈ ದೇಶದಲ್ಲಿ ಲಕ್ಷಾಂತರ ಮಂದಿ ಕಾರ್ಮಿಕರನ್ನು ಶೋಷಣೆ ಮಾಡುತ್ತಾ ರೈತರನ್ನು ಶೋಷಣೆ ಮಾಡುತ್ತಾ ಕೋಟಿಗಟ್ಟಲೆ ಹಣವನ್ನು ಸಂಗ್ರಹಿಸುತ್ತಾರೆಯೋ ಅವರ ಕೃಪಾಕಟಾಕ್ಷದಿಂದ ಇವರು ಇಲ್ಲಿ ಬಂದು ಕುಳಿತುಕೊಂಡಿದ್ದಾರೆ. ಅವರ ಕೃಪಾಕಟಾಕ್ಷವನ್ನು ಕಳೆದುಕೊಂಡರೆ ಇವರಿಗೆ ತೊಂದರೆಯಾಗುತ್ತದೆ. ರಾಜ್ಯದಲ್ಲಿರತಕ್ಕ ಟಾಟಾ ಬಿರ್ಲಾ ಅವರ ಆಸ್ತಿಯನ್ನು ಮುಟ್ಟುವುದಕ್ಕೆ ಇವರಿಗೆ ಹೆದರಿಕೆಯಾಗಿದೆ. ಆದ್ದರಿಂದ ನಗರಾಸ್ತಿಮಿತಿಯ ಕಾನೂನು ತರುವ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ ಅಂಥಾ ಕಾರ್ಯಕ್ರಮಗಳನ್ನು ಈ ದೇಶದಲ್ಲಿ ಅವರು ಮಾಡುವುದಕ್ಕೆ ಹೋಗಿಲ್ಲ. ಗ್ರಾಮಾಂತರ ಪ್ರದೇಶಗಳವರು ಈ ಕಾನೂನನ್ನು ವಿರೋಧ ಮಾಡಿಲ್ಲ. ಇಂದಿರಾ ಗಾಂಧಿಯವರ ಸಮಾಜವಾದ ವರ್ಷೇ ವರ್ಷೇ ಮಾಡಲ್ ಸಮಾಜವಾದ ಬರುತ್ತಿದೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ. ಇವರ ಮಾಜವಾದ ಈ ರೀತಿಯ ಒಂದು ಪರಿಸ್ಥಿತಿಗೆ ಬಂದಿದೆ.

ಕರ್ಮಕಾಂಡಗಳು : ಅನೇಕ ಕರ್ಮಕಾಂಡಗಳ ನಿವಾರಣೆಗೆ ಶ್ರೀಮಾನ್ ಚನ್ನಬಸಪ್ಪನವರು ದಕ್ಷರು ಮತ್ತು ಹೆಸರಾಗಿದ್ದರು. ಅವರು ಈಗ ಇಲ್ಲಿ ಇದ್ದಾರೆ. ಅವರು ಈ ಸದನದಲ್ಲಿ ಈಗ ಕುಳಿತುಕೊಂಡಿರತಕ್ಕ ಜಾಗದಲ್ಲಿ ಕುಳಿತುಕೊಂಡು ಹೇಳಿದ ಮಾತುಗಳು ಏನೆಂದರೆ ಶರಾವತಿಯ ಕರ್ಮಕಾಂಡದ ಬಗ್ಗೆ ವಿಧಿವತ್ತಾದ ಸಕಾಲದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಅದನ್ನು ನ್ಯಾಯಾಂಗ ವಿಚಾರಣೆಗೆ ಇಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಇವೊತ್ತಿನ ದಿವಸ ಅದು ಏನಾಗಿದೆ? ರಾಜ್ಯಪಾಲರ ಭಾಷಣದಲ್ಲಿ ಅದು ಎಲ್ಲಿದೆ? ಅದರ ವಿಷಯದ ಪ್ರಸ್ತಾಪವೇ ಇಲ್ಲ. ಶರಾವತಿಯ ಕರ್ಮಕಾಂಡದ ಬಗ್ಗೆ ಮೈಸೂರಿನಲ್ಲಿ ಕೆಲವರು ದೊಡ್ಡ ಆಪಾದನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಕೇಂದ್ರದ ಮಂತ್ರಿ ಮಂಡಲ ಆ ಬಗ್ಗೆ ಪರಿಶೀಲಿಸಲು ಒಂದು ಉಪಸಮಿತಿಯನ್ನು ನೇಮಿಸಿ ಅವರು ಆ ಬಗ್ಗೆ ಪರಿಶೀಲನೆ ಮಾಡಿ ಶರಾವತಿಯಲ್ಲಿ ಯಾವ ಅಕ್ರಮಗಳೂ ನಡೆದಿಲ್ಲ ಎಂದು ಕೇಂದ್ರದ ಕ್ಯಾಬಿನೆಟ್‌ನವರು ಒಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆಗ

ಶ್ರೀಮತಿ ಇಂದಿರಾಗಾಂಧಿಯವರು ಆ ಒಂದು ಮಂತ್ರಿಮಂಡಲದ ಸದಸ್ಯ ರಾಗಿದ್ದರು. ಆದ್ದರಿಂದ ಇವೊತ್ತು ಶ್ರೀಮಾನ್ ಚನ್ನಬಸಪ್ಪನವರು ಈ ಶರಾವತಿ ಕರ್ಮಕಾಂಡದ ಬಗ್ಗೆ ವಿಚಾರಣೆ ನಡೆಸಲು ಹೆದರುತ್ತಿದ್ದಾರೆ. ಏತಕ್ಕೆ ಹೆದರ ಬೇಕು. ನಿಜವಾದ ಅಂಶ ಏನು ನಡೆದಿದೆ ಎಂಬುದನ್ನು ತಿಳಿಸುವುದು ಅವರ ಜವಾಬ್ದಾರಿ. ಆ ಬಗ್ಗೆ ಅವರು ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಅವರು ಈ ಮಂತ್ರಿಮಂಡಲದಲ್ಲಿ ಇರುವವರೆಗೂ ಅವರು ಶರಾವತಿಯ ಕರ್ಮ ಕಾಂಡದ ಬಗ್ಗೆ ವಿಚಾರಣೆ ಮಾಡುವುದಿಲ್ಲ. ಭಯಪಡುತ್ತಾರೆ. ಈ ಮಂತ್ರಿ ಮಂಡಲ ಇರುವವರೆಗೂ ಅವರು ಈ ಬಗೆ ವಿಚಾರಣೆ ಮಾಡುವುದಿಲ್ಲ ಎಂದು ನಮಗೆ ಅನುಮಾನ ಬರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಅವರು ಸ್ಪಷ್ಟವಾಗಿ ತಿಳಿಸಬೇಕು. ಆಗ ತಮಗೆ ಧೈರ್ಯ ಇದೆಯೋ ಅಥವಾ ಇಲ್ಲವೇ ಎಂಬುದು ಗೊತ್ತಾಗುತ್ತದೆ. ತಮ್ಮ ದಿಟ್ಟ ನಿಲುವನ್ನು ತಾಳಿದರೆ ಕರ್ನಾಟಕದ ಜನರು ಮೆಚ್ಚುತ್ತಾರೆ. ಹಾಸನದಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ನಡೆದಂತಹ ಅಕ್ರಮ ಗಳ ವಿಷಯ ಏನಾಯಿತು? ಇದರ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತಳೆದು ಇದರಲ್ಲಿ ಯಾರು ಅಕ್ರಮ ವ್ಯವಹಾರವನ್ನು ನಡೆಸಿದ್ದಾರೆ, ಯಾರು ತಪ್ಪಿತಸ್ಥರಾಗಿದ್ದಾರೆ ಎಂಬುದನ್ನು ಕಂಡು ಹಿಡಿದು ತಕ್ಷಣ ಕ್ರಮವನ್ನು ತೆಗೆದು ಕೊಳ್ಳಬೇಕು. ಇದರಲ್ಲಿ ನನಗೆ ಗೊತ್ತಿರುವ ಹಾಗೆ ಪ್ರಭಾವಿ ಜನಗಳ ಒಂದು ಪಾತ್ರ ಇದರಲ್ಲಿ ನಡೆಯುತ್ತಿದೆ ಎಂದು ಗೊತ್ತಾಗಿದೆ. ಆದ್ದರಿಂದ ಈ ಬಗ್ಗೆ ಒಂದು ದಿಟ್ಟವಾದ ನಿಲುವನ್ನು ತಳೆದು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇದೇ ರೀತಿ ಮಂಗಳೂರು ಕೆಮಿಕಲ್ ಫರ್ಟಿಲೈಜರ್ ಫ್ಯಾಕ್ಟರಿ ಬೇಗ ಬರುತ್ತದೆ ಎಂದು ಅಂದುಕೊಂಡಿದ್ದೆವು. ಆದರೆ ಇವೊತ್ತು ಅಲ್ಲಿ ನಡೆಯುತ್ತಾ ಇರತಕ್ಕ ವಿದ್ಯಮಾನಗಳನ್ನು ನೋಡಿದರೆ ಅಲ್ಲಿ ಅನ್ಯುಯಲ್ ಜನರಲ್‌ಬಾಡಿ ಮೀಟಿಂಗ್ ಮಾಡುವುದಕ್ಕೆ ಆಗಿಲ್ಲ. ಉತ್ಪಾದನೆ ಇನ್ನೂ ಪ್ರಾರಂಭವಾಗಿಲ್ಲ. ಅಲ್ಲಿ ಸಾಕಷ್ಟು ಬಂಡವಾಳ ಶೇಖರಣೆಯಾಗಿ ಸಾಕಷ್ಟು ಯಂತ್ರೋಪಕರಣಗಳನ್ನು ಜೋಡಿಸಿ ಅದು ಯಶಸ್ವಿಯಾಗಿ ಕೆಲಸ ಮಾಡಬೇಕಾಗಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಅಲ್ಲಿ ಜನರಲ್‌ಬಾಡಿ ಮೀಟಿಂಗ್ ಆಗಿಲ್ಲ ಎಂದರೆ ಹೇಗೆ? ಅಲ್ಲಿ ಏನು ಅಕ್ರಮ ನಡೆದರೂ ಸರ್ಕಾರ ಪ್ರಭಾವಕ್ಕೆ ಒಳಗಾಗಿ ಕಣ್ಣು ಮುಚ್ಚಿ ಕೊಂಡು ಕೂತಿದೆ.

ಇನ್ನು ವಿಜಯನಗರದ ಉಕ್ಕಿನ ಕಾರ್ಖಾನೆ. ಕರ್ನಾಟಕದ ಜನತೆಗೆ ಎಷ್ಟು ಸಹನೆ ಇದೆ ಎಂದರೆ ಇವರಿಗೆ ಎಷ್ಟು ಏಟು ಮೇಲೆ ಏಟು ಕೊಟ್ಟರೂ— ಇಲ್ಲ ಏನೂ ಏಟು ಬಿದ್ದಿಲ್ಲವೆಂದು ಇಂದಿರಾ ಗಾಂಧಿಯ ಪಾದವೇ ಗತಿ ಎಂದು ಹೇಳುತ್ತಿದ್ದಾರೆ. ತಲೆ ಮೇಲೆ ಏಟು ಬಿದ್ದರೂ ಏನೂ ಬಿದ್ದಿಲ್ಲವೆಂದು ಹೇಳುತ್ತಿ

(ಶ್ರೀ. ಸಿ. ಬೈರೇಗೌಡ)

ದ್ದಾರೆ. ಕೃಷ್ಣ ನದಿ ನೀರಿನ ವಿಷಯ ತೆಗೆದುಕೊಂಡರೂ ಹಾಗೆ. ನಮ್ಮ ರಾಜ್ಯಕ್ಕೆ ಇದರಿಂದ ಎಷ್ಟು ಅನ್ಯಾಯವಾದರೂ ನಮ್ಮ ಸರ್ಕಾರದವರು ಅದನ್ನು ಸಹಿಸಿಕೊಂಡಿದ್ದಾರೆ. ಇಂದು ಕೇಂದ್ರದ ಬಜೆಟ್ ಬಂದಿದೆ. ಇಂದಿರಾ ಗಾಂಧಿ ಯವರು ಜನತೆಯ ಮೇಲೆ ಒಂದು ದೊಡ್ಡ ಬಾಂಬನ್ನೇ ಹಾಕಿದ್ದಾರೆ. ಇವರ ಪಕ್ಷದವರು ಯಾರು ಸಹ ಇದರ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾ ಇಲ್ಲ. ಆ ಕೃಷ್ಣ ನದಿಯ ನೀರಿನಲ್ಲಿ ನಮಗೆ ಅನ್ಯಾಯವಾಗಿದೆ ಎಂದು ಇವರು ಸಾಮೂಹಿಕ ವಾಗಿ ರಾಜಿನಾಮೆಯನ್ನು ಕೊಡಬೇಕಾಗಿತ್ತು. ಆದರೆ ಅದನ್ನು ಮಾಡುವುದಕ್ಕೆ ಯಾರೂ ತಯಾರಾಗಿಲ್ಲ. ಏಕೆಂದರೆ ಇವರು ಇಂದಿರಾ ಗಾಳಿಯಲ್ಲಿ ತೂರಿಕೊಂಡು ಬಂದಿದ್ದಾರೆ ಎಂದು ಇವರೇ ಹೇಳಿಕೊಂಡಿದ್ದಾರೆ. ಪುನಃ ಇಲ್ಲಿ ಬಂದು ಕೂತು ಕೊಳ್ಳುತ್ತೇವೊ ಇಲ್ಲವೋ ಎಂಬುದು ಅನುಮಾನ ಅನೇಕರಿಗೆ ಇದೆ. ಇವತ್ತು ಎಲೆಕ್ಟ್ರಿಸಿಟಿ ಬೋರ್ಡ್ ವಿಚಾರ ಹೇಳುವುದಾದರೆ ಒಂದಾನೊಂದು ಕಾಲದಲ್ಲಿ ಇಡೀ ಏಷ್ಯಾ ಖಂಡದಲ್ಲಿ ಪ್ರಥಮವಾಗಿ ಅದನ್ನು ಕಂಡ ನಾಡು ಕನ್ನಡ ನಾಡು. ಇವೊತ್ತಿನ ದಿವಸ ಕಾಳಿನದಿ ಪ್ರೊಜೆಕ್ಟನ್ನು ಕಟ್ಟುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ಸೂಪಾ ಅಣೆಕಟ್ಟಿನ ಪ್ರಾರಂಭೋತ್ಸವವನ್ನು ಇಂದಿರಾ ಗಾಂಧಿ ಯವರು ನೆರವೇರಿಸಿದ್ದಾರೆ. ಅಲ್ಲಿ ಒಂದು ಟನೆಲ್ ಕೆಲಸದ ಕಂಟ್ರಾಕ್ಟನ್ನು "ತಾಪರ್ ಅಂಡ್ ಕಂಪೆನಿ"ಯವರಿಗೆ ಕೊಟ್ಟಿದ್ದಾರೆ. ಟನೆಲ್ ಕೆಲಸ ಮಾಡು ವುದರಲ್ಲಿ ಅವರಿಗೆ ಅನುಭವ ಇಲ್ಲ. ಅವರಿಗೆ ಅನುಭವ ಇರುವುದು ಕೋಲ್ ಮೈನ್ಸ್ ಕೆಲಸ ಆ ಮೇಲೆ ಆ ಒಂದು ಕಂಪೆನಿಯಲ್ಲಿ ನಮ್ಮ ರಾಷ್ಟ್ರದ ಪ್ರದಾನ ಮಂತ್ರಿಯವರ ಹತ್ತಿರದ ಸಂಬಂಧಿಯೊಬ್ಬರು ಪಾಲುದಾರರಾಗಿದ್ದಾರೆಂದು ತಿಳಿದು ಬಂದಿದೆ.

SRI H. M. CHANNABASAPPA :—I am sorry that without knowing any facts whatsoever, you are speaking. If you had come to me to ascertain facts, I would have given you all facts and it would have helped you to make this speech. It would have gone a long way to enlighten the people. why not Hon. Members, if they do not know facts, maka an attempt to know them. After knowing facts, you can make your speech. I have no objection.

MR. DEPUTY SPEAKER :—I was about to tell the Hon. Member before making an allegation of this magnitude, he must say he has verified and he is satisfied about it. Without verification, it is not proper to make such state-

ment. Speeches here must be dignified, must have some decorum and above all, there is a sense of responsibility attached to every member, every word and even demeanour.

ಶ್ರೀ ಹೆಚ್. ಎಂ. ಚನ್ನಬಸಪ್ಪ:— ಕಂಟ್ರಾಕ್ಟನ್ನು ಕೊಡುವುದಕ್ಕೆ ಕೆಲವು ನಿಯಮಾವಳಿಗಳು ಇವೆ. ಪ್ರೊಸೀಜರ್ ಪ್ರಕಾರ ದೇಶಾದ್ಯಂತ ಟೆಂಡರ್ ಕರೆಯಬೇಕಾಗುತ್ತದೆ. ಟೆಂಡರ್ ಹಾಕಿದ ಮೇಲೆ ಯಾರ್ಯಾರು ಶ್ಯಾಉದಾರರಿದ್ದಾರೆ ಎಂದು ನೋಡುವುದು ನಮಗೆ ಅಗತ್ಯವಿಲ್ಲ. ನಮಗೆ ಕಮ್ಮಿ ಖರ್ಚಿನಲ್ಲಿ ಕೆಲಸ ಯಾರು ಮಾಡುತ್ತಾರೆ ಎಂದು ನೋಡುವುದು ಮುಖ್ಯ. ತಾಪರ್ ಅಂಡ್ ಕೊ ಎಂಬ ಕಂಪೆನಿ ಟೆಂಡರ್ ಹಾಕಿತ್ತು. ಅದು ಒಂದು ಫ್ರೆಂಚ ಕಂಪೆನಿ. ನಾವು ಕಂಪೆನಿ ಯೋಗ್ಯವಾದುದೇ, ಅದಕ್ಕೆ ಕೆಲಸ ಮಾಡುವ ಶಕ್ತಿ ಇದೆಯೋ ಇಲ್ಲವೇ, ಲೋಯೆಸ್ಟ್ ಟೆಂಡರ್ ಬಂದಿದೆಯೋ ಅವರಿಗೆ ಹಣದ ಶಕ್ತಿ ಇದೆಯೋ ಇತ್ಯಾದಿ ನೋಡಿ ಕನ್ಸಿಡರ್ ಮಾಡಬೇಕೇ ಹೊರತು ಅದರ ಪಾರ್ಟನರ್ಸ್ ಯಾರು ಅವರ ತಂದೆ ತಾಯಿ ಯಾರು ಎಂಬುದನ್ನು ವಿಚಾರ ಮಾಡುವುದು ಅಗತ್ಯವಿಲ್ಲ.

ಶ್ರೀ ಸಿ. ಬೈರೇಗೌಡ:—ಈ ಕಂಪೆನಿಯವರಿಗೆ ಸುಮಾರು 40 ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಏನೇನು ಕೊಟ್ಟಿದ್ದಾರೆ ಅದು ಅಗ್ರಿಮೆಂಟ್ ಪ್ರಕಾರ ಕೊಟ್ಟಿದ್ದಾರೆ. ನಿಮಗೆ ಏನು ಮಾಹಿತಿ ಬೇಕಾದರೂ ನಾನು ಕೊಡಬಲ್ಲೆ ಅದನ್ನು 1-2 ಗಂಟೆ ಅಭ್ಯಾಸ ಮಾಡಿ ಆ ಮೇಲೆ ಅದರ ಬಗ್ಗೆ ಭಾಷಣ ಮಾಡಿ.

Mr. DEPUTY SPEAKER:--Why not accept the challenge.? If you want to make an allegation, the Hon. Minister says that he will give him all the material for study.

ಶ್ರೀ ಹೆಚ್. ಎಂ ಚನ್ನಬಸಪ್ಪ :—ಯಾರು ಎಂಥ ವಿಷಯ ಕೇಳಿದರೂ ನಾನು ಅದನ್ನು ಒದಗಿಸಿಕೊಡುತ್ತೇನೆ. ವಿಷಯವನ್ನು ಪೂರ್ತಿಯಾಗಿ ತಿಳಿದುಕೊಂಡು ಅದರಲ್ಲಿ ಅನುಮಾನ ಇದ್ದರೆ ಕೇಳಿ. ಆ ಮೇಲೆ ಅವುಗಳನ್ನು ಇಟ್ಟುಕೊಂಡು ಭಾಷಣ ಮಾಡಿ.

Mr. DEPUTY SPEAKER :— Whatever is said here, it must be supported by all facts and figures.

ಶ್ರೀ ಟಿ. ಎಂ. ಮಂಜುನಾಥ್ :—ಮಾನ್ಯ ಚನ್ನಬಸಪ್ಪನವರು ಹೇಳಿದಂತಹ ಮಾತನ್ನು ನಾನು ನಂಬುತ್ತೇನೆ. ಆದರೆ ಒಂದು ಕಳಕಳಿಯ ಪ್ರಾರ್ಥನೆ ಏನೆಂದರೆ, ತಾವು ಇಷ್ಟು ಉತ್ಸಾಹದಿಂದ ಆತ್ಮವಿವೇಚನೆಯಿಂದ ಎಲ್ಲ ಜವಾಬ್ದಾರಿಯನ್ನು ಹೊರುವುದಕ್ಕೆ ಹೊರಟಿದ್ದೀರಿ. ಆದರೆ ತಮ್ಮ ಹಾಗೆ ತಮ್ಮ ಸಹೋದ್ಯೋಗಿಗಳು ಎಷ್ಟು ಜನ ಇದ್ದಾರೆ ಎಂಬುದನ್ನು ಯೋಚನೆ ಮಾಡಬೇಕು. ಅವರನ್ನು ನಂಬಬೇಡಿ. ಆದ್ದರಿಂದ ನೀವು ಎಲ್ಲ ಚ್ಯಾಲಂಜನ್ನು ಏಕೆ ತೆಗೆದುಕೊಳ್ಳುವುದಕ್ಕೆ ಹೋಗುತ್ತೀರಿ: ಅದು ತಮ್ಮ ಕೈಯಲ್ಲಿ ಇಲ್ಲ. ಮತ್ತು ಅದರ ಬಗ್ಗೆ ತಮಗೆ ಶಕ್ತಿಯೂ ಇಲ್ಲ.

Sri H. M. CHANNABASAPPA:—The Hon. Member referred to the working of the Kalinadi Project and he made particular reference to the tunnel work.

ಶ್ರೀ ಸಿ. ಬೈರೇಗೌಡ :—40 ಲಕ್ಷ ರೂಪಾಯಿ ಕಂಟ್ರಾಕ್ಟ್ ಟರ್ಮ್ಸ್ ಪ್ರಕಾರ ಕೊಟ್ಟಿದ್ದಾರೆಂದು ಈಗ ತಾನೇ ಹೇಳಿದರು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಕೊಟ್ಟಿದೇನೆಂದು ಹೇಳುತ್ತಾ ಇಲ್ಲ ಹಾಗೆ ಏನಾದರೂ ಕೊಟ್ಟಿದ್ದರೆ ಕಾಂಟ್ರ್ಯಾಕ್ಟ್ ಅಗ್ರಿಮೆಂಟ್ ಪ್ರಕಾರ ಕೊಟ್ಟಿದ್ದೇವೆ. ಒಂದುವೇಳೆ ಕಾಂಟ್ರಾಕ್ಟ್ ಅಗ್ರಿಮೆಂಟ್ ಮೀರಿ ಕೊಟ್ಟಿದ್ದರೆ ಏತಕ್ಕೋಸ್ಕರ ಆ ರೀತಿ ಕೊಟ್ಟಿದ್ದೀರಿ ಎಂದು ಕೇಳಿ, ವಿವರಣೆ ಕೊಡುತ್ತೇನೆ. ಕಾಂಟ್ರಾಕ್ಟ್ ಕೊಡುವುದಕ್ಕೂ ಮತ್ತು ಮಿಷನ್ ಕೊಡುವುದಕ್ಕೂ ಅಗ್ರಿಮೆಂಟ್‌ನಲ್ಲಿ ಇದ್ದರೆ, ಕೊಡುತ್ತೇವೆ. ಅಡ್ವಾನ್ಸ್ ಕೊಡಬೇಕೆಂಬುದಾಗಿ ಅಗ್ರಿಮೆಂಟಿನಲ್ಲಿದ್ದರೆ ಅದನ್ನೂ ಕೊಡುತ್ತೇವೆ

ಶ್ರೀ ಸಿ. ಬೈರೇಗೌಡ.—ಬಹಳ ಸಂತೋಷ. ಅಗ್ರಿಮೆಂಟ್ ತಯಾರು ಮಾಡಿದವರು ಯಾರು, ಅಗ್ರಿಮೆಂಟ್‌ನಲ್ಲಿ ಏನೇನು ಇರಬೇಕೆಂದು ಹೇಳುವವರು ಯಾರು ?

ಶ್ರೀ ಹೆಚ್.ಎಂ. ಚನ್ನಬಸಪ್ಪ.—ಅದನ್ನು ತಾವು ಹೇಳಬೇಕು. ಅಗ್ರಿಮೆಂಟ್‌ನಲ್ಲಿ ಏನೇನು ಕಲಂಗಳು ಇರಬೇಕು. ಒಬ್ಬ ಕಂಟ್ರಾಕ್ಟರ್‌ನ ಟೆಂಡರನ್ನು ಒಪ್ಪಿಕೊಳ್ಳುವಾಗ ಸಂಬಂಧಪಟ್ಟ ಬೋರ್ಡ್ ಆಫ್ ಡೈರೆಕ್ಟರ್ಸ್ ಕುಳಿತು ವಿಚಾರಮಾಡಿದ ಮೇಲೆಯೇ ಅದರ ಬಗ್ಗೆ ಇರತಕ್ಕ ಅಗ್ರಿಮೆಂಟ್ ಫೈನಲೈಜ್ ಆಗುತ್ತದೆ.

ಶ್ರೀ ಸಿ. ಬೈರೇಗೌಡ —ಕೋತಿ ತಾನು ತಿಂದ ಮೇಲೆ ಮೇಕೆ ಬಾಯಿಗೆ ಒರಸಿತಂತೆ.

SRI H. M. CHANNABASAPPA :—The Hon. Member will kindly withdraw all such things. They are not correct. I shall be too glad to give details to any project to anybody. ಮಾನ್ಯ ಸದಸ್ಯರು ಸಭೆಯಲ್ಲಿ ಈ ಶಾಸಕರಾಗಿ ಎಲ್ಲ ವಿಚಾರಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಹೇಳಬೇಕು. ಏನಾದರೂ ಅಕ್ರಮಗಳು, ತಪ್ಪು ನೆಪ್ಪುಗಳು ನಡೆಯುತ್ತಿದ್ದರೆ ಅವನ್ನು ಇಲ್ಲಿ ತಿಳಿಸಲಿ. ಮಾನ್ಯ ಸದಸ್ಯರು ರಚನಾತ್ಮಕವಾದಂಥ ಸಲಹೆಗಳನ್ನು ಇಲ್ಲಿ ಕೊಟ್ಟರೆ ಅವನ್ನು ನಾವು ವಿಶ್ವಾಸದಿಂದ ತೆಗೆದುಕೊಳ್ಳುತ್ತೇವೆ.

MR. DEPUTY SPEAKER :--The Hon. Member may leave that matter.

ಶ್ರೀ ಸಿ. ಬೈರೇಗೌಡ:—ಇವತ್ತಿನ ದಿವಸ ಒಬ್ಬ ರೈತ ತನ್ನ ಬೆಳೆಯು ಸಾಲವಾಗಿ 500 ರೂಪಾಯಿಗಳನ್ನು ಕೊಡಬೇಕಾದರೆ, ಅವನು ತನ್ನ ಮನೆ ಇಲ್ಲದಿದ್ದರೆ ತನ್ನ ಗದ್ದೆ, ಹೊಲ ಇವುಗಳನ್ನು ಮಾರಿ ಅಥವಾ ಒಂದು ಪತ್ರವನ್ನು ಅವನಿಂದ ಬರೆಸಿಕೊಂಡು ಆ ಸಾಲವನ್ನು ಇವರು ಪಡೆಯಬೇಕಾಗಿದೆ. ಇದರಿಂದ ರೈತನಾದವನು ತುಂಬಾ ನಿರ್ಗತಿಕನಾಗುತ್ತಾನೆ. ಆದ್ದರಿಂದ ಕೇವಲ ಒಂದು ಬಾವಿಗೋಸ್ಕರ 5000 ರೂಪಾಯಿಗಳೋ ಅಥವಾ ಒಂದು ಲಕ್ಷವೋ ಖರ್ಚುಮಾಡತಕ್ಕ ಶಕ್ತಿ ಇರುವ ಸರ್ಕಾರ ಅವನಿಗೆ ಅಷ್ಟು ಸಹಾಯ ಮಾಡುವುದಕ್ಕಾಗುವುದಿಲ್ಲವೇ ?

ಇನ್ನು ಎಲೆಕ್ಟ್ರಿಸಿಟಿ ವಿಷಯವಾಗಿ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಎಲೆಕ್ಟ್ರಿಸಿಟಿ ಬಹಳ ಕಡಿಮೆ ಇದೆಯೆಂಬ ಬಗ್ಗೆ ನನ್ನಲ್ಲಿ ಕೆಲವು ಅಂಕಿಅಂಶಗಳಿವೆ. ದೆಹಲಿಯಲ್ಲಿ ಪರ್‌ಕ್ಯಾಪಿಟ ಕನ್‌ಸಂಪ್‌ಷನ್ ಎಲೆಕ್ಟ್ರಿಸಿಟಿ 287 ಯೂನಿಟ್ಟುಗಳು. ಮಹಾರಾಷ್ಟ್ರದಲ್ಲಿ 177 ಯೂನಿಟ್ಟುಗಳು; ಪಂಜಾಬಿನಲ್ಲಿ 168 ಯೂನಿಟ್ಟುಗಳು, ನಮ್ಮ ಕರ್ನಾಟಕದಲ್ಲಿ 117 ಯೂನಿಟ್ಟುಗಳು.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಅದು ಸರಿಯಲ್ಲ. ಇಲ್ಲಿ 101 ಯೂನಿಟ್ಟುಗಳು.

ಶ್ರೀ ಸಿ. ಬೈರೇಗೌಡ :—ಈ ಮಟ್ಟಕ್ಕೆ ನಾವು ಇವತ್ತಿನ ದಿವಸ ಬಂದಿದ್ದೇವೆ. ಆದರೆ ಇದನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಒಂದು ಕಡೆ ಪಂಚಾಯಿತಿಯವರು ಚಕ್ ಡ್ರಾ ಮಾಡಬಾರದೆಂದು ಹೇಳುತ್ತಾರೆ. ಇನ್ನೊಂದು ಕಡೆ ತಾಲ್ಲೂಕುಬೋರ್ಡಿನವರೂ ಸಹ ಹಣವನ್ನು ಡ್ರಾ ಮಾಡಬಾರದೆಂದು ಹೇಳು

(ಶ್ರೀ ಸಿ. ಬೈರೇಗೌಡ)

ತ್ತಾರೆ ಯಾವಾಗಲೂ ಗ್ರಾಮಾಭಿವೃದ್ಧಿ ಆಗಬೇಕಾದರೆ ಹಣ ಖರ್ಚಾಗಬೇಕು. ಇಲ್ಲ ದಿದ್ದರೆ ಯಾವ ರೀತಿ ಅಭಿವೃದ್ಧಿ ಮಾಡುವುದು, ಎಲೆಕ್ಟ್ರಿಸಿಟಿ ಪರಿಸ್ಥಿತಿ ಈ ರೀತಿಯಾದರೆ ಇವತ್ತು ಸರ್ಕಾರದ ಆರ್ಥಿಕ ಪರಿಸ್ಥಿತಿ ಸಾಮಾನ್ಯವಾದಂಥ ಪಂಚಾಯತಿಗಿಂತ ಇನ್ನೂ ಅಧೋಗತಿಗೆ ಈ ರಾಜ್ಯ ಇಳಿದಿದೆಯೆಂದು ಹೇಳ ಬೇಕಾಗಿದೆ. ಪಂಚಾಯತಿಗಳಲ್ಲಿ ಅವರ ಚೆಕ್‌ಗೆ ಬೆಲೆ ಇದೆ. ಆದರೆ ಸರ್ಕಾರದ ಚೆಕ್‌ಗಳಿಗೆ ಒಂದು ಕಾಸಿನ ಕಿಮ್ಮತ್ತಿನಷ್ಟೂ ಬೆಲೆ ಇಲ್ಲ. ಈ ರೀತಿ ಸರ್ಕಾರದ ಆಡಳಿತವಿದೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಫರ್ಟಿಲೈಜರ್ಸ್ ಇವೆ. ಅವಕ್ಕೂ ಲೆವಿ ಹಾಕಿದ್ದಾರೆ. ಆದರೆ ನಾನು ಲೆವಿಗೆ ವಿರೋಧ ಮಾಡುವುದಿಲ್ಲ. ಉತ್ಪಾದನೆ ಚೆನ್ನಾಗಿ ಆಗುತ್ತಿದ್ದರೆ, ಆಗ ತೆರಿಗೆಯನ್ನು ಕೊಡಬೇಕು. ಮಾನ್ಯ ಮಂತ್ರಿ ಗಳಿಗೆ ಗೊತ್ತಿರುವ ಹಾಗೆ ಈಗಿನ ಒಂದು ಕಲುಷಿತ ವಾತಾವರಣದಲ್ಲಿ ಎಲ್ಲಿ ನೋಡಿದರೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ, ಅದು ತಾಂಡವವಾಡು ತ್ತಿದೆ. ನ್ಯಾಯವಾಗಿ ಗೌರವವಾಗಿ ಜೀವನವನ್ನು ಈಗ ರೈತ ಮಾಡುವುದಕ್ಕಾ ಗದೇ ಇರುವ ಪರಿಸ್ಥಿತಿಯನ್ನು ಇವರು ಉಂಟುಮಾಡುತ್ತಿದ್ದಾರೆ. ಅವನೂ ಸಹ 5-10 ರೂಪಾಯಿಗಳಿಗೆ ಕೈಯೊಡುವ ಪರಿಸ್ಥಿತಿ ಇದೆ. ಆದ್ದರಿಂದ ನಾನು ಈ ಸರ್ಕಾರವನ್ನು ಕೈಜೋಡಿಸಿ ಬೇಡುತ್ತೇನೆ. ಅವನಿಗೆ ಸಕಾಲದಲ್ಲಿ ಬೇಕಾ ದಂಥ ಸೌಕರ್ಯಗಳನ್ನು ಒದಗಿಸುವ ವ್ಯವಸ್ಥೆಯನ್ನು ಇವರು ಮಾಡಬೇಕು. ಗೊಬ್ಬರ ಕಾಲಕ್ಕೆ ಸರಿಯಾಗಿ ದೊರೆಯುತ್ತಿಲ್ಲ. ಯಾರಿಯೂ ಕೊಡಿ ಎಂದು ಹೇಳಿ ದರೆ ಅದನ್ನು ಕೊಡುವ ಶಕ್ತಿ ಸರ್ಕಾರಕ್ಕೆ ಇಲ್ಲ. ಮಾನ್ಯ ಶ್ರೀ ಚನ್ನಬಸಪ್ಪನವರು ಹಿಂದೆ ಒಂದು ಮಾತನ್ನು ಹೇಳುತ್ತಿದ್ದರು. ಡಿಕ್ಲರೇಷನ್ನನ್ನು ರೈತ ಏತಕ್ಕೆ ಕೊಡ ಬೇಕೆಂಬುದಾಗಿ. ರೈತರಲ್ಲಿ ಪ್ರತಿಯೊಬ್ಬರಲ್ಲಿಯೂ ಧಾನ್ಯಗಳ ಸ್ಟಾಕ್ ಎಷ್ಟಿದೆ ಯೆಂಬುದನ್ನು ಸರ್ಕಾರ ಮನಗಾಣಲು ರೈತರು ಡಿಕ್ಲರೇಷನ್ ಕೊಡಬೇಕು ಎಂಬು ದಾಗಿ ಹೇಳುತ್ತಿದ್ದರು. ಅದೂ ಅಲ್ಲದೆ, ಪ್ರತಿಯೊಬ್ಬನಲ್ಲಿಯೂ ಗೊಬ್ಬರ ಎಷ್ಟು ಸ್ಟಾಕ್ ಇದೆಯೆಂಬ ಬಗ್ಗೆ ಡಿಕ್ಲರೇಷನ್ ಕೊಡಬೇಕೆಂದು ಹೇಳುತ್ತಾರೆ. ನಾನು ಒಂದು ಮಾತನ್ನು ಕೇಳಬೇಕಾಗಿದೆ. ರೈತರನ್ನು ಡಿಕ್ಲರೇಷನ್ ಕೊಡಬೇಕೆಂದು ಕೇಳುವ ಈ ಸರ್ಕಾರ ತನ್ನ ವಶದಲ್ಲಿ ಗೊಬ್ಬರ ಎಷ್ಟು ಸ್ಟಾಕ್ ಇದೆಯೆಂಬುದನ್ನು ಈಗ ಹೇಳುವುದಕ್ಕಾಗುತ್ತದೆಯೇ ? ಅದನ್ನು ಹೇಳುವುದಕ್ಕಾಗದೇ ಇರತಕ್ಕ ಸರ್ಕಾರ ರೈತನಲ್ಲಿ ಧಾನ್ಯಗಳ ಸ್ಟಾಕ್ ಎಷ್ಟು ಇದೆಯೆಂದು ಡಿಕ್ಲರೇಷನ್ ಕೊಡ ಬೇಕೆಂದು ಕೇಳುವುದು ಯಾವ ನ್ಯಾಯ ? ಕೇವಲ 5 ಗ್ರಾಂ ಗೊಬ್ಬರವನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲ ಅಂದಮೇಲೆ ರೈತ ಡಿಕ್ಲರೇಷನ್ ಕೊಡಲಿಲ್ಲವೆಂದರೆ, ಅವನ ಮನೆಯ ಹತ್ತಿರ ಪೋಲೀಸಿನವರನ್ನು ಕಳುಹಿಸುತ್ತೀರಿ,

ಮಿಲಿಟರಿಯುವರನ್ನು ಕಳುಹಿಸುತ್ತೀರಿ, ಅವರು ಅಲ್ಲಿ ಹೋಗಿ ಜಬರದಸು ಮಾಡು ತ್ತಾರೆ ? ಇದರಲ್ಲಿ ನಿಮ್ಮ ನೈತಿಕ ಬೆಲೆಯೇನು ರೈತರಿಗೆ ಸಾಕಷ್ಟು ಗೊಬ್ಬರ ಕೊಡುವುದಕ್ಕೆ ಈ ಸರ್ಕಾರಕ್ಕೆ ಯೋಗ್ಯತೆ ಇಲ್ಲ. ಆಂದ ಮೇಲೆ ಲೆವಿ ಕೊಡಿ, ರಾಗಿ ಕೊಡಿ, ಬತ್ತ ಕೊಡಿ ಎಂಬುದಾಗಿ ಯಾವ ಒಂದು ಆಧಾರದ ಮೇಲೆ ಕೇಳು ತ್ತೀರಿ ? ಇವತ್ತು ಗೌರವಕ್ಕಾಗಿ ಜೀವನ ಮಾಡುವ ರೈತರ ಮೇಲೆ ನಿಮ್ಮ ಪೋಲೀಸಿನವರನ್ನು ವಿನಾ ಕಾರಣ ನುಗ್ಗಿಸುವುದು, ಅವರನ್ನು ಲಾಠಿಯಿಂದ ಹೊಡೆಸುವುದು–ಇವು ಅರ್ಥವಿಲ್ಲದ ಮಾತು.

ಶ್ರೀ ಹೆಚ್. ಎಂ. ಚನ್ನಬಸಪ್ಪ.....ಯಾವುದೇ ವಿಷಯವಾಗಲೀ ಅದನ್ನು ಸ್ಪಷ್ಟವಾಗಿ ನಾವು ತಿಳಿದುಕೊಳ್ಳೋಣ. ರೈತರಿಗೆ ಹಿಂಸೆ ಕೊಡುವುದಕ್ಕೇ ಈ ಸರ್ಕಾರ ಇದೆಯೆಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ರೈತರು ನುಗ್ಗಿಯೊಳಗೆ ಕಾಳಸಂತೆಕೋರರಂತೆ ಅವರ ಮನೆಗಳಲ್ಲಿ ಆಹಾರಧಾನ್ಯಗಳನ್ನು ಮಡಗುವುದು ತಮಗೂ ಗೊತ್ತಿದೆ. ಇನ್ನು ಕೆಲವು ವರ್ತಕರು ಏನು ಮಾಡು ತ್ತಾರೆಂದರೆ ನಾವು ರಂಗೋಲೆ ಸಂದಿಯೊಳಗೆ ಹೋದರೆ, ಅವರು ಅದರ ಕೆಳಗೇ ಹೋಗುತ್ತಾರೆಂದು ನಾನು ಹೇಳುತ್ತೇನೆ. ಅದನ್ನು ತಪ್ಪಿಸುವುದಕ್ಕೋಸ್ಕರ ಅವರೂ ಸಹ ಈ ರೀತಿಯಾಗಿ ಉಪಾಯ ಮಾಡಿದ್ದಾರೆ. ಅದಕ್ಕಿಂತ ಉತ್ತಮ ವಾದ ಮಾರ್ಗ ಯಾವುದೆಂಬುದನ್ನು ವಿಶ್ವಾಸದಿಂದ ನಾವು ಕನ್‌ಸಿಡರ್ ಮಾಡ ಬೇಕಾಗಿದೆ. 15 ಕ್ವಿಂಟಾಲ್ ಇರುವುದನ್ನು 40 ಕ್ವಿಂಟಾಲ್ ಮಾಡಿ ಎಂಬುದಾಗಿ ಹೇಳಿದರೆ ಅದನ್ನೂ ಮಾಡೋಣ, ನೀವು ಬಂದು ಸರ್ಕಾರ ನಡೆಸಿದರೂ ಅಕ್ರಮವಾಗಿ ಹೋಗತಕ್ಕ ವಿಷಯಗಳು ಯಾವುದೇ ಇದ್ದರೂ ಅವನ್ನೂ ಸಹ ಪತ್ತೆ ಮಾಡುವುದಕ್ಕೆ ನೀವೂ ಸಹ ಪ್ರಯತ್ನ ಪಡಬೇಕು. ಅಲ್ಪಸ್ವಲ್ಪ ಬದಲಾ ವಣೆಗಳನ್ನು ನೀವೂ ಸಹ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ನೀವು ರಚನಾತ್ಮಕ ವಾದಂಥ ಸಲಹೆಗಳನ್ನು ಕೊಟ್ಟರೆ ಅವನ್ನು ನಾವು ವಿಶ್ವಾಸದಿಂದ ಕನ್‌ಸಿಡರ್ ಮಾಡೋಣ.

ಶ್ರೀ ಸಿ. ಬೈರೇಗೌಡ.....ಕಾಳಸಂತೆಕೋರರನ್ನು ಬಗ್ಗುಬಡಿಯುವುದರಲ್ಲಿ ನನ್ನ ಸಹಕಾರ ಹಾಗೂ ನನ್ನ ಪಕ್ಷದವರ ಸಹಕಾರ ಸಂಪೂರ್ಣವಾಗಿದೆಯೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ ಯಾವ ಸರ್ಕಾರ ಏನು ಮಾಡಬೇಕೆಂಬುದನ್ನು ಮಾಡಿ ತೋರಿಸುವವರಲ್ಲಿ ನಾವು ಮೊದಲನೆಯವರು. ನೀವು ರೈತರಿಗೆ ಸಾಕಷ್ಟು ಗೊಬ್ಬರವನ್ನು ಕೊಡದೆಯೇ ಲೆವಿಯನ್ನು ಕೊಡಬೇಕೆಂದು ಅವರನ್ನು ಕೇಳು ತ್ತಿದ್ದೀರಿ. ಇದು ಎಲ್ಲಿದೆ ? ಯಾವ ಧರ್ಮಶಾಸ್ತ್ರದಲ್ಲಿದೆ ? ಪ್ರಪಂಚದಲ್ಲಿ ಇಲ್ಲದೇ ಇರತಕ್ಕದ್ದನ್ನು ತಾವು ಮಾಡುವುದಕ್ಕೆ ಹೊರಟಿದ್ದೀರಿ.

ಉಪಾಧ್ಯಕ್ಷರು.—ಧರ್ಮಶಾಸ್ತ್ರಗಳು ಬಹಳ ಹಿಂದಿನವು. Fertilizers came recently, *i. e.*, two-three decades ago atleast in India. The Hon. Member may complete his speech and help the Chair to help others.

ಶ್ರೀ ಸಿ. ಬೈರೇಗೌಡ.....ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ಹಿಂದೆ ಇಲ್ಲದೇ ಇರುವುದನ್ನೆಲ್ಲಾ ಇವರು ಮಾಡಲಿಕ್ಕೆ ಹೋಗುತ್ತಿದ್ದಾರೆ. ಅದು ಸರಿಹೋಗುವುದಿಲ್ಲ.

ಇನ್ನು ಇವತ್ತು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಬೆಂಗಳೂರಿಗೆ ಈಗ ಕಾವೇರಿ ನೀರನ್ನು ತೆಗೆದುಕೊಂಡು ಬಂದಿದ್ದಾರೆ. ಬಹಳ ಸಂತೋಷ. ಇವತ್ತು ಅನೇಕ ಗ್ರಾಮಗಳಲ್ಲಿ ಬಗ್ಗಡದ ನೀರೂ ಸಹ ಸಿಗುತ್ತಾ ಇಲ್ಲ. ಸ್ವಾತಂತ್ರ್ಯ ಬಂದು ಸುಮಾರು 26-27 ವರ್ಷಗಳಾದರೂ ಅನೇಕ ಗ್ರಾಮಗಳಲ್ಲಿ ನೀರಿನ ಸೌಕರ್ಯ ಏನೇನೂ ಚೆನ್ನಾಗಿಲ್ಲ. ಇನ್ನೂ ಈಗಲೂ ಕೊಳಚೆಯ ನೀರು ಬೆಂಗಳೂರಿನ ಚರಂಡಿಗಳಲ್ಲಿ ಹರಿಯುತ್ತಿದೆ. ಆ ನೀರೂ ಕೂಡ ಇವತ್ತು ಅನೇಕ ಗ್ರಾಮಗಳಲ್ಲಿ ಸಿಗುತ್ತಾ ಇಲ್ಲ. ಅಂತಹ ಕಡೆಗಳಲ್ಲಿ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಈ ಸರ್ಕಾರ ಮಾಡಬಾರದೇ ? ಕೋಲಾರ ತಾಲ್ಲೂಕಿನಲ್ಲಿರುವ 80 ಗ್ರಾಮಗಳಿಗೆ ನೀರು ಸೌಕರ್ಯವಿಲ್ಲವೆಂದು ಸುಮಾರು ಒಂದು ವರ್ಷದಿಂದಲೂ ಪತ್ರವ್ಯವಹಾರವನ್ನು ಮಾಡುತ್ತಿದ್ದೇವೆ. ಅಲ್ಲಿಗೆ ನೀರಿನ ಸೌಕರ್ಯವನ್ನು ಕೊಡುವುದಕ್ಕೆ ಇಲ್ಲಿಯವರೆಗೂ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಯಾರೋ ಜುಯಲಾಜಿಸ್ಟ್ ಬರಬೇಕು, ಇನ್ನೊಬ್ಬರು ಬರಬೇಕು ಎಂಬುದಾಗಿ ಹೇಳುತ್ತಾರೆ. ದೊಡ್ಡ ದೊಡ್ಡ ನಗರಗಳಲ್ಲಿ ನೀರು ಒದಗಿಸುವುದಕ್ಕಾಗಲೀ, ಟಾರ್ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕಾಗಲೀ ಏನೂ ಬೇಕಾಗಿಲ್ಲ. ಹಳ್ಳಿಗಳಲ್ಲಿ ಇಂತಹ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕಾದರೆ ಇವರಿಗೆ ಎಲ್ಲವೂ ಬೇಕಾಗಿದೆ. ನಗರಗಳಲ್ಲಿ ಎಲ್ಲಿ ಜನತೆ ತಲೆ ಹೊಡೆಯುತ್ತಾರೋ ಎಂಬ ಭಯವಿದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಈ ಸರ್ಕಾರಕ್ಕೆ ಶಕ್ತಿ ಇಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನಾದರೂ ಕಾಣಿಸಿದ್ದಾರೆಯೋ ಎಂದರೆ ಅದೇನೂ ಇಲ್ಲ. ಎಲ್ಲೋ ಬಾವಿಗಳನ್ನು ನಿರ್ಮಾಣ ಮಾಡುವುದಕ್ಕೆ 5 ರಿಗ್‌ಗಳನ್ನು ತರಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಈಗಿರತಕ್ಕ ಕಾನೂನುಗಳನ್ನು ಸಡಿಲುಮಾಡಿ ಹೆಚ್ಚು ಹೆಚ್ಚಾಗಿ ಕುಡಿಯುವ ನೀರಿನ ಬಾವಿಗಳನ್ನು ಎಲ್ಲಾ ಗ್ರಾಮಗಳಲ್ಲಿಯೂ ತೆಗೆಯುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಸ್ವಾಮಿ : ಇವರಿನ್ನು ರಾಜ್ಯದಲ್ಲಿ ಜನತಾ ಹೌಸಿಂಗ್ ಸ್ಕೀಂ ಎಂದು ಮಾಡಿದ್ದಾರೆ. ಹಿಂದೆ ಇದೇ ದಿನಗಳಲ್ಲಿ ಇವರು ನಮ್ಮ ಜಿಲ್ಲೆಯಲ್ಲಿ 280 ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದರು. ನನ್ನ ತಾಲ್ಲೂಕಿನಲ್ಲಿ ಇಲ್ಲಿಯುವರೆಗೂ ಒಂದು ಮನೆಯೂ ಇಲ್ಲ.

ಉಪಾಧ್ಯಕ್ಷರು :—ನನ್ನ ಕ್ಷೇತ್ರದಲ್ಲಿ ಅಂದರೆ ತಾಲ್ಲೂಕಿನಲ್ಲಿ 180 ಮನೆಗಳಾಗಿವೆ. ಹಾಗಿರುವಾಗ ನಿಮ್ಮ ತಾಲ್ಲೂಕಿನಲ್ಲಿ ಏಕೆ ಆಗಲಿಲ್ಲ ?

ಶ್ರೀ ಸಿ. ಬೈರೇಗೌಡ :—ಸರ್ಕಾರದವರು ಅಲ್ಲಿ ಮನೆಗಳನ್ನು ಕಟ್ಟಿಸುತ್ತೇವೆಂದು ಬಂದರೆ ಜನರು ಅದಕ್ಕೆ ಬೇಕಾದ ಸಹಾಯಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಸರ್ಕಾರದಲ್ಲಿ ಮೊದಲು ದುಡ್ಡಿರಬೇಕಲ್ಲವೇ ? ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷ. ನಾನು ಯಾವ ಸಹಕಾರ ಕೊಡುವುದಕ್ಕೂ ಸಿದ್ಧವಾಗಿದ್ದೆ. ಆದರೆ ಸರ್ಕಾರದವರು ಹಣವಿಲ್ಲವೆಂದು ಹೇಳುತ್ತಿದ್ದಾರೆ.

5-00 P. M.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಾರ್ಮಿಕರ ಬಗ್ಗೆ ಹೇಳಿದ್ದಾರೆ, ಸಂತೋಷ. ಆದರೆ ಸಂಘಶಕ್ತಿಗಳನ್ನು ಬಲಪಡಿಸಿಕೊಂಡಿರತಕ್ಕ ಜನರಿಗೆ ದೊರೆಯತಕ್ಕ ಸೌಲಭ್ಯಗಳು ಆ ಜನರಿಗೆ ಇಲ್ಲ. ಆ ಮಿನಿಮಂ ವೇಜಸ್ ಆಕ್ಟ್—ಒಬೀರಾಯನ ಕಾಲದ್ದು. ಅದನ್ನು ಬದಲಾಯಿಸುವುದಕ್ಕೆ ಇಲ್ಲಿಯತನಕ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇನ್ನು ನಾನು ಈ ಸರ್ಕಾರಕ್ಕೆ ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವರು ದೇಶದಲ್ಲಿ ಗರಿಬೀ ಹಟಾವೋ ಮಾಡುವುದಾಗಿ ಪ್ರಚಾರಮಾಡಿಕೊಂಡು ಇಲ್ಲಿ ಬಂದು ಕುಳಿತರು. ಈ ದಿವಸ ಇವರು ಹಿಂದೆ ಹೇಳಿದ್ದೆಲ್ಲಾ ಮಾಯವಾಗಿ ಹೋಯಿತು. ಆದ್ದರಿಂದ ತವರು ಸದ್ಯ ಹಿಂದೆ ಇಲ್ಲಿ ಜನರಿಗೇನು ಒಂದು ಗರೀಬೀ ಇತ್ತೋ ಅಷ್ಟನ್ನಾದರೂ ವಾಪಸ್ ಅವರಿಗೆ ಕೊಡಿ ಎಂದು ಕೇಳಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್) :—ಮಾನ್ಯ ಸಭಾಪತಿಗಳೇ : ದಿನಾಂಕ ಫೆಬ್ರವರಿ 25ನೇ ತಾರೀಖು ನಮ್ಮ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದಬಗ್ಗೆ ಒಂದು ವಂದನಾರ್ಪಣೆಯ ನಿರ್ಣಯವನ್ನು ನನ್ನ ಸ್ನೇಹಿತರೂ ಮತ್ತು ಶಾಸಕರೂ ಆದ ಶ್ರೀಮಾನ್ ಕೆ. ಆರ್. ಎಸ್. ನಾಯ್ಡುರವರು ತಂದಿದ್ದಾರೆ. ಆ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ನಾನು ಕೆಲವು ಮಾತುಗಳನ್ನಾಡುವುದಕ್ಕೆ ಇಚ್ಛಿಸುತ್ತೇನೆ:

(ಶ್ರೀ ಎಂ. ಬಿ. ರಾಮಸ್ವಾಮಿ)

ಈಗಾಗಲೇ ವಿರೋಧಪಕ್ಷದ ಕೆಲವು ನನ್ನ ಸನ್ಮಿತ್ರರು ಅನೇಕ ಟೀಕೆಗಳನ್ನು ಮಾಡಿದ್ದಾರೆ. ಅವರ ಟೀಕೆಟಿಪ್ಪಣಿಗಳ ಚಿತ್ರಗಳೀಗ ನಮ್ಮ ಮುಂದಿವೆ. ನಾನಾದರೋ ಪ್ರಜಾಪ್ರಭುತ್ವದಲ್ಲಿ ಮತ್ತು ಸಮಾಜವಾದದಲ್ಲಿ ನಂಬಿಕೆ ಇರತಕ್ಕವನು. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಮಾತನಾಡುತ್ತ ಪ್ರಧಾನಿ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳೂ ಆಗಲಿಲ್ಲ—ಏನೇನೂ ಆಗಲಿಲ್ಲ ಎಂದು ಹೇಳಿದರು. ಅವರೇನು ಅಷ್ಟು ಕಠೋರವಾಗಿ ಆ ಮಾತುಗಳನ್ನು ಹೇಳಿದರು ಅದಕ್ಕೆ ಕಾರಣರು ನಾವಲ್ಲ. ಅದಕ್ಕೆ ಕಾರಣ ಅವರ ಪಕ್ಷವೇ. ಅವರ ಪಕ್ಷದವರು ಮಾಡಿದ ಪಾಪದ ಹೊರೆಯನ್ನು ನಾವು ಹೊರಬೇಕಾಗಿಬಂತು. ಅವರು ಆಡಳಿತವನ್ನು ಬಿಟ್ಟುಕೊಡುವ ಕಾಲಕ್ಕೆ ಇಲ್ಲಿ ಅವರು ಮಾಡಿಟ್ಟುಹೋಗಿದ್ದ ಓವರ್ ಡ್ರಾಫ್ಟನ್ನು ತೀರಿಸುವುದರೊಳಗಾಗಿ ದೇಶದಲ್ಲಿ ಎಂದೂ ಕಾಣದಿದ್ದಂಥ ಬರಗಾಲ ಬಂದಿತು. ಮಳೆ ಹೋಯಿತು. ಬೆಳೆಗಳೆಲ್ಲಾ ಒಣಗಿದವು....

ಶ್ರೀ ಕಾಗೋಡು ತಿಮ್ಮಪ್ಪ :—ಅವರ ಪಾಪದ ಹೊರೆ 2 ವರ್ಷಕ್ಕೆ ಮುಗಿದರೆ, ನಿಮ್ಮ ಪಾಪದಹೊರೆ ಇನ್ನೂ 25 ವರ್ಷವಾದರೂ ಮುಗಿಯುವುದಿಲ್ಲವಲ್ಲ ಅದಕ್ಕೇನು ಹೇಳುತ್ತೀರಿ?

ಶ್ರೀ ಎಂ. ಬಿ. ರಾಮಸ್ವಾಮಿ :—ಹಿಂದೆ ದೇಶದಲ್ಲಿ ಆಡಳಿತ ನಡೆಸುತ್ತಿದ್ದ ಸರ್ಕಾರದವರು ದೇಶದಲ್ಲಿ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಟ್ಟಿದ್ದರೆ ಈ ದಿವಸ ನಾವು ಇಷ್ಟೆಲ್ಲಾ ತೊಂದರೆ ಪಡಬೇಕಾದ ಅವಶ್ಯಕತೆಯಿಲ್ಲಿತ್ತು? ಆದರೆ ಅವರು ಅದನ್ನು ಮಾಡದೆ ಇದ್ದ ಕಾರಣ ದೇಶ ಇಂದು ಕ್ಷಾಮಡಾಮರಗಳಿಗೆ ತುತ್ತಾಗಬೇಕಾಯಿತು. ಆಗ ಅವರೆಲ್ಲರೂ ತಮ್ಮ ಒಂದು ವ್ಯಕ್ತಿತ್ವವನ್ನು ದೇಶದಲ್ಲಿ ಬೆಳೆಸಿಕೊಳ್ಳುವುದಕ್ಕೆ ಅವರವರಲ್ಲೇ ಗೊಂದಲವನ್ನೆಬ್ಬಿಸಿಕೊಂಡು ಕಾಲಹರಣ ಮಾಡಿದ್ದರಿಂದ ದೇಶದಲ್ಲಿ ಇಂಥ ಭೀಕರ ಕ್ಷಾಮಗಳೂ, ಹೆಚ್ಚಿನ ಧಾರಣೆವಾಸಿಗಳೂ ತಲೆದೋರಲು ಅವಕಾಶವಾಯಿತು. ಈ ದಿವಸ ರಾಜ್ಯದಲ್ಲಿ ಮಳೆಯಾಗಿದ್ದರೂ ಕೆಲವು ಕಡೆ ಅತಿವೃಷ್ಟಿ, ಕೆಲವು ಕಡೆ ಅನಾವೃಷ್ಟಿ, ಹೀಗಾಗಿದೆ. ಅನೇಕ ಕಡೆಗಳಲ್ಲಿ ರೈತರು ಲೆವಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ನಾನು ಸ್ವತಃ ಒಬ್ಬ ರೈತನ ಮಗನಾಗಿ ಹೇಳುವುದೇನೆಂದರೆ ಕೆಲವು ಕಡೆ ರೈತರು ಬಹಳ ಕಷ್ಟದಲ್ಲಿದ್ದಾರೆ. ಆದರೆ ಗೊಬ್ಬರ ಕೊಡಲಿಲ್ಲ ಅದಕ್ಕಾಗಿ ಲೆವಿ ಕೊಡುವುದಿಲ್ಲ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಈ ದಿವಸ ಗೊಬ್ಬರದ ಅಭಾವ ಇಡೀ ಪ್ರಪಂಚಕ್ಕೆ ಬಂದಿದೆ. ಈ ವಿಚಾರವನ್ನು ಪ್ರತಿಯೊಬ್ಬ ಸದಸ್ಯರೂ ಮನಗಾಣಬೇಕು. ಕೆಲವು ಮಾನ್ಯ ಸದಸ್ಯರು 15 ಕ್ವಿಂಟಾಲ್ ಭತ್ತವಿದ್ದರೆ ಅದನ್ನು

ಏಕೆ ಡಿಕ್ಲೆಸಿರ್ ಮಾಡಬೇಕೆಂದು ಕೇಳಿದರು. ಅದರಲ್ಲಿ ಏನು ಒಂದು ಕೊಂದರೆ ಇದೆಯೆಂಬುದನ್ನು ನಾನು ಹೇಳುತ್ತೇನೆ. ನಮ್ಮಲ್ಲಿ ಒಬ್ಬ ರೈತ 1500 ಕ್ವಿಂಟಾಲು ಭತ್ತ ಬೆಳೆಯುತ್ತಿದ್ದಾನೆ. ಅಂಥವನಿಗೆ ಈ 15 ಕ್ವಿಂಟಾಲು ಭತ್ತ ಡಿಕ್ಲೇರ್ ಮಾಡಬೇಕಾದ್ದಿಲ್ಲ ಎಂದಾದರೆ ಆತನು ತನ್ನ 1500 ಕ್ವಿಂಟಾಲು ಭತ್ತವನ್ನೂ ಅವರಿವರ ಮನೆಯಲ್ಲಿ ಅಲ್ಲಲ್ಲೇ ಕೆಲವು ಮಿಲ್ಲುಗಳಲ್ಲಿ ಇಟ್ಟು ಆತನು ಲೆವಿ ಕೊಡುವುದನ್ನೇ ತಪ್ಪಿಸಿಕೊಳ್ಳುವುದಕ್ಕೂ ಅವಕಾಶವಿದೆ. ಇಂಥ ಅಕ್ರಮಗಳನ್ನು ತಡೆಗಟ್ಟುವುದಕ್ಕಾಗಿ ಈ ನಿರ್ಬಂಧವನ್ನು ವಿಧಿಸಲಾಗಿದೆ. ಕೆಲವರು ಕೆಮಿಕಲ್ಸ್ ಫರ್ಟಿಲೈಜರ್ಸ್‌ನ್ನು ಕೊಡದ ಸರ್ಕಾರ ಲೆವಿ ಕೇಳುವುದಕ್ಕೆ ಹಕ್ಕೇನಿದೆ ಎಂದು ಹೇಳಿದರು. ಆದರೆ ಈ ಕೃತಕ ಗೊಬ್ಬರಗಳೆಲ್ಲಾ ಇತ್ತೀಚಿನವು. ಹಿಂದೆ ನಾವೆಲ್ಲರೂ ದನಗಳ ಸಗಣಿ ಗೊಬ್ಬರವನ್ನೇ ಅವಲಂಬಿಸಿದ್ದೆವು. ಈಗಲೂ ನಾವು ಅತ್ತ ಕಡೆಗೆ ಗಮನ ಕೊಡುವುದು ಒಳ್ಳೆಯದು. ಈ ಕೃತಕ ಗೊಬ್ಬರವನ್ನು ಹಾಕುವುದರಿಂದ ಮುಂದೆ ಅನೇಕ ಅನಾನುಕೂಲಕ್ಕೆ ದಾರಿಯಾಗಬಹುದೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಇನ್ನು ಕೆಲವು ಕೇಸುಗಳ ವಿಚಾರ ಹೇಳಿದರು. ಅವರು ಯಾರೇ ಆಗಲಿ ಇಲ್ಲಿಯವರೆಗೆ ಸರ್ಕಾರದವರ ಗಮನಕ್ಕೆ ಅಂಥ ಎಷ್ಟು ಕೇಸುಗಳನ್ನು ತಂದಿದ್ದಾರೆ?

ಹಿಂದಿನಿಂದಲೂ ಇದ್ದ ಅಧಿಕಾರಿಗಳು ಮತ್ತು ಪೋಲೀಸಿನವರು ಇಂದೂ ಅಧಿಕಾರದಲ್ಲಿದ್ದಾರೆ. ಆ ಅಧಿಕಾರಿಗಳಿಂದ ಏನಾದರೂ ಲೋಪದೋಷಗಳಿದ್ದರೆ ಅವರಿಗೆ ಶಾಸಕರು ಬೆಂಬಲ ಕೊಟ್ಟಿದ್ದಾರೆಯೇ, ಸಾರ್ವಜನಿಕರು ಬೆಂಬಲ ಕೊಟ್ಟಿದ್ದಾರೆಯೇ ಎನ್ನುವುದನ್ನು ತಿಳಿಸಬೇಕು. ಆದರೆ ಮಾನ್ಯ ಸದಸ್ಯರು ಮಾತನಾಡುವಾಗ ಬರೀ ಟೀಕೆಗಳನ್ನು ಮಾಡದೆ ಉಪಯುಕ್ತವಾದ ಸಲಹೆಗಳನ್ನು ಸರ್ಕಾರದ ಮುಂದೆ ಇಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ನಮ್ಮ ಸರ್ಕಾರದಿಂದ ಭಾರೀ ಅನ್ಯಾಯವಾಗಿದೆ, ಅನಾಹುತವಾಗಿದೆ ಎಂದು ಮಾನ್ಯ ದೇವೇಗೌಡರು ಅವರ ಧಾಟಿಯಲ್ಲಿ ಹೇಳಿದ್ದಾರೆ. ನಮ್ಮ ಸರ್ಕಾರದವರು ಕಳೆದ 20—25 ವರ್ಷಗಳಿಂದ ಆಗದೆ ಇರತಕ್ಕ ಕೆಲಸಗಳನ್ನು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಸರ್ಕಾರದ ನೀತಿಗನುಗುಣವಾಗಿ 50 ಕಿಲೋ ಮೀಟರ್ ರಸ್ತೆಯನ್ನು ತೆಗೆದುಕೊಂಡು ಅದನ್ನು ಅಭಿವೃದ್ಧಿ ಪಡಿಸಿದ್ದಾರೆ. ಇಂಥ ಕೆಲಸವನ್ನು ಈ ಸರ್ಕಾರ ಬಂದ ಮೇಲೆ ಮಾಡಿದೆ. ಅದಕ್ಕಾಗಿ ನಾನು ಸಂತೋಷಪಡುತ್ತಿದ್ದೇನೆ. ಸೇತುವೆಗಳು ಲಿಫ್ಟ್ ಇರಿಗೇಷನ್ ಮುಂತಾದ ಕೆಲಸಗಳ ಕಡೆಗೆ ನಮ್ಮ ಸರ್ಕಾರ ಬಂದ ಮೇಲೆ ಹೆಚ್ಚು ನಿಗಾ ಕೊಟ್ಟಿದೆ.

(ಶ್ರೀ ಎಂ. ಬಿ. ರಾಮಸ್ವಾಮಿ)

ಇದನ್ನೆಲ್ಲ ಜನತೆ ಮನಗಂಡಿದೆ. ಕೇವಲ ರಾಜಕೀಯ ದೃಷ್ಟಿಯಿಂದ ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುವುದು ಸಾಧುವಲ್ಲದವೆಂದು ಹೇಳಬೇಕಾಗಿದೆ.

ಆರೋಗ್ಯ ಇಲಾಖೆಯ ಬಗ್ಗೆ ಹೇಳಬೇಕೆಂದರೆ ಆರೋಗ್ಯ ಮಂತ್ರಿಗಳು ಬಹಳ ಅನುಭವಿಗಳು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ 10—12 ಆರೋಗ್ಯ ಕೇಂದ್ರ ಗಳನ್ನು ಮಾಡಿದ್ದಾರೆ. ಪ್ರತಿಯೊಂದಕ್ಕೂ 22—23 ಸಾವಿರ ರೂಪಾಯಿ ವೆಚ್ಚ ಮಾಡಿದ್ದಾರೆ. ಕೆಲವು ಕಡೆ ಆರೋಗ್ಯ ಇಲಾಖೆಗೆ ಸೇರಿದ ಆಸ್ಪತ್ರೆಗಳಲ್ಲಿ ಹಿಂದಿ ನಿಂದ ಏನೇನು ತೊಂದರೆಗಳು ನಡೆದುಕೊಂಡು ಬಂದುವೋ ಅವುಗಳನ್ನು ನಿವಾರಣೆ ಮಾಡಿ ಒಳ್ಳೆಯ ರೀತಿಯಲ್ಲಿ ಶಿಸ್ತಿನ ಸಿಪಾಯಿನಂತೆ ಭೇಟಿ ಕೊಟ್ಟು ವಿಕ್ಟೋರಿಯಾ ಆಸ್ಪತ್ರೆಯಾಗಲಿ, ಬೌರಿಂಗ್ ಆಸ್ಪತ್ರೆಯಾಗಲೀ ಯಾವುದೇ ಆಸ್ಪತ್ರೆಯಾಗಲೀ ಅಲ್ಲೆಲ್ಲ ಒಬ್ಬ ಸಾಮಾನ್ಯ ಕಾರ್ಯಕರ್ತನಂತೆ ಹೋಗಿ ಆಗುತ್ತಿರುವ ಅನ್ಯಾಯ ಗಳನ್ನು ಸರಿಪಡಿಸುತ್ತಿದ್ದಾರೆ. ಹಿಂದಿನ ಸರ್ಕಾರಗಳೂ ಇದೇ ರೀತಿಯಲ್ಲಿ ಮಾಡಿಕೊಂಡು ಬಂದಿದ್ದರೆ ನಮಗೆ ಕಷ್ಟವಿರುತ್ತಿರಲಿಲ್ಲವೆಂದು ಹೇಳಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪನವರು ಸಮಾಜವಾದಿಗಳು. ಕಣದಿಂದ ಧಾನ್ಯವನ್ನು ಸಾಗಿಸಿಕೊಂಡು ಹೋಗಬೇಕಾದರೆ ಪೋಲೀಸರು ಅದನ್ನು ಹಿಡಿಯು ತ್ತಾರೆಂದು ಹೇಳಿದರು. ಯಾರು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಾರೆ, ಯಾರು ಅನ್ಯಾಯ ಮಾಡುತ್ತಾರೆ ಅವರು ಯಾವ ಪಕ್ಷಕ್ಕೆ ಸೇರಿದವರಾಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ಹಿಂಜರಿಯುವುದಿಲ್ಲ. ಅಂತರಜಿಲ್ಲಾ ಸಾಗಾಣಿಕೆಯ ಮೇಲೆ ಇರುವ ನಿರ್ಬಂಧವನ್ನು ರದ್ದು ಮಾಡಬೇಕು ಅದರಿಂದ ತೊಂದರೆಯಾಗಿದೆ ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಸಾಕಾದಷ್ಟು ಬತ್ತ ಮತ್ತು ಆಹಾರ ಧಾನ್ಯಗಳು ಒದಗದೆ ಇರುವ ಸಂದರ್ಭದಲ್ಲಿ ಬೇರೆ ಜಿಲ್ಲೆಗೆ ಆಹಾರ ಧಾನ್ಯಗಳು ಹೋದರೆ ಅದರಿಂದ ಏನು ಲಾಭ ಎಂದು ಕೇಳುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಕೆಲವು ಧಾನ್ಯಗಳು ಹೆಚ್ಚಾಗಿ ಬೆಳೆಯಬಹುದು. ಅದರೆ ಆ ಜಿಲ್ಲೆಗೆ ಎಷ್ಟು ಧಾನ್ಯ ಬೇಕೋ ಅಷ್ಟು ಸರಿಯಾಗಿ ದೊರೆಯುತ್ತಿಲ್ಲ. ಅಂತರ ಜಿಲ್ಲಾ ಸಾಗಾಣಿಕೆಯ ಮೇಲಿನ ನಿರ್ಬಂಧವನ್ನು ಕಿತ್ತು ಹಾಕಿದರೆ ಎಲ್ಲ ಸರಿಹೋಗುತ್ತದೆ ಎನ್ನುವುದು ಸಾಧುವಲ್ಲ. ಆದರಿಂದ ನಮಗೆ ಇನ್ನೂ ಅನಾಹುತವಾಗುತ್ತದೆ, ಮತ್ತಷ್ಟು ಬಂದೋಬಸ್ತನ್ನು ಜಾಸ್ತಿ ಹಾಕಿದರೂ ಕಷ್ಟವಾಗುತ್ತದೆಯಾದ್ದರಿಂದ ಈ ನಿರ್ಬಂಧವನ್ನು ರದ್ದು ಮಾಡುವುದು ಒಳ್ಳೆಯದಲ್ಲ ಎಂದು ನಾನು ಹೇಳುತ್ತೇನೆ.

ಬೆಂಗಳೂರು ನಗರ ಇದುವರೆಗೂ ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ಬೆಳೆಯುತ್ತ ಬಂದಿದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಅನೆಕಲ್ ತಾಲ್ಲೂಕಿನಲ್ಲಿ

ಚಂದಾಪುರ ಎಂಬ ಒಂದು ಉಪನಗರವಿದೆ. ಯಾವುದೇ ಕಾರ್ಖಾನೆಗಳನ್ನಾಗಲೀ ಸಂಸ್ಥೆಗಳನ್ನಾಗಲೀ ಹೊಸದಾಗಿ ಹಾಕುವಾಗ ಬೆಂಗಳೂರಿನ ಎಲ್ಲ ಕಡೆಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಕೆಂಗೇರಿಗೆ ಸಮೀಪವಾಗಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಹಾಕಿದ್ದಾರೆ ಸಂತೋಷ ಅದೇ ರೀತಿ ಸಾರ್ವತ್ರಿಕವಾಗಿ ಅನುಕೂಲವಾಗತಕ್ಕ ಕಾರ್ಖಾನೆಗಳನ್ನು ಬೆಂಗಳೂರಿಗೆ 10—15 ಮೈಲಿ ದೂರದಲ್ಲಿ ಹಾಕುವುದಲ್ಲದೆ ನನ್ನ ಕ್ಷೇತ್ರದಲ್ಲಿರುವ ಚಂದಾಪುರ ಗ್ರಾಮಕ್ಕೆ ಸಮೀಪವಾಗಿರುವಂತೆಯೂ ಹಾಕಬೇಕಾಗಿ ಕೋರುತ್ತೇನೆ. ಈ ಪ್ರದೇಶದಿಂದ ತಮಿಳುನಾಡಿಗೆ ಕೇವಲ 10—15 ಮೈಲಿ ಫಾಸಲೆ ಇರುತ್ತದೆ. ಆನೇಕಲ್ ತಾಲ್ಲೂಕಿನ ಅನೇಕ ಕಾರ್ಮಿಕರಿಗೆ ಹಾಗೂ ನಿರ್ಗತಿಕರಿಗೆ ಒಂದು ಉದ್ಯೋಗ ಸಿಕ್ಕುತ್ತದೆ. ಈಗಲಾದರೂ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಕಾರ್ಖಾನೆಗಳನ್ನು ಚಂದಾಪುರದ ವರೆಗೂ ವಿಸ್ತರಿಸಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿ ಬಡವರಿಗೆ ಮತ್ತು ಅನ್ನವಿಲ್ಲದೆ ಇರುವವರಿಗೆ ಕೆಲಸ ಸಿಕ್ಕುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಬರಗಾಲ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸುಮಾರು 87—88 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಏಕಸದಸ್ಯ ಅಯೋಗದ ಶ್ರೀ ಅರ್ಮುಗಂ ಅವರು ಸಭೆಗೆ ಸಂಪೂರ್ಣವಾದ ಚಿತ್ರವನ್ನು ಕೊಟ್ಟಿದ್ದಾರೆ. ಹಿಂದೆಂದೂ ನಡೆಯದೆ ಇರತಕ್ಕ ಕೆಲಸ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರ ಮಾಡಿದೆ. ಅಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿಲ್ಲದ ಭೂಮಿಯನ್ನು ಯೋಗ್ಯ ರೀತಿಯಲ್ಲಿ ಉತ್ತಮಪಡಿಸಿದ್ದಾರೆ, ಬಾವಿಗಳನ್ನು ತೋಡಿಸಿದ್ದಾರೆ ಮತ್ತು ಅನೇಕ ಸೌಲಭ್ಯಗಳನ್ನು ಜನಗಳಿಗೆ ಒದಗಿಸಿದ್ದಾರೆಂದು ಹೇಳಿದ್ದಾರೆ. ಅವರ ವರದಿಯಲ್ಲಿರುವ ಅಂಶಗಳನ್ನು ನಾನು ಜವಾಬ್ದಾರಿ ಶಾಸಕನಾಗಿ ಹೇಳುತ್ತಿದ್ದೇನೆ.

ನಮ್ಮ ಮಾನ್ಯ ಸದಸ್ಯರಾದ ಶ್ರೀ ಬಾಪೂಗೌಡರು ಆ ಭಾಗದಿಂದ ಬಂದಿರತಕ್ಕ ಸದಸ್ಯರು ಎಂದು ಇಲ್ಲಿ ನಮಗೆ ಬಂದಿರುವ ವರದಿಯಿಂದ ಸಂಕ್ಷೇಪವಾದ ವಿವರಣೆಯನ್ನು ಅವರಿಗೆ ಇಲ್ಲಿ ಕೊಡುತ್ತಿದ್ದೇನೆ. ಆದರೆ ಅವರೇ ಇಲ್ಲಿ ಬಂದು ಈ ರೀತಿ ಹೇಳುವುದರಲ್ಲಿ ಅರ್ಥವಿಲ್ಲ. ಇದರ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದ ಬಗ್ಗೇನೇ ಹೇಳುತ್ತೇನೆ. ಸುಮಾರು 25-30 ವರ್ಷಗಳಿಂದಲೂ 55 ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡಲಾಗಲಿಲ್ಲ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಸುಮಾರು 35 ಹಳ್ಳಿಗಳಿಗೆ ನಮ್ಮ ಭಾಗದಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗಿದೆ. ಪ್ರತಿಯೊಂದು ಹಳ್ಳಿಗೂ ದೀಪದ ಸೌಕರ್ಯ ಮಾಡಿಕೊಡಬೇಕೆಂದು ಇದ್ದಾರೆ. ಆದರೆ ಇದರಲ್ಲಿ ಅಲ್ಲಲ್ಲಿ ಲೋಪದೋಷಗಳು ಇರಬಹುದು. ಇದನ್ನು ಮಾಡಬೇಕಾದರೆ ಸಾರ್ವಜನಿಕರ ಸಹಕಾರ ಪಡೆದುಕೊಂಡು ಕೆಲಸ ಮಾಡುವುದರ ಮೇಲೆ ಇವು

(ಶ್ರೀ. ಎಂ. ಬಿ. ರಾಮಸ್ವಾಮಿ)

ಅವಲಂಬಿಸಿದೆ. ಶ್ರೀ. ಬಾಪೂಗೌಡರು ಈ ರೀತಿ ಹೇಳುವುದು ಸರಿಯಲ್ಲ.

ಇನ್ನು ನಮ್ಮ ಸರಕಾರ ಜನತಾ ಯೋಜನೆ ಎಂದು ಮಾಡಿ ಬಡ ಜನರಿಗೆ ಸೈಟುಗಳನ್ನು ಹಂಚುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಈಗಾಗಲೇ ಸುಮಾರು ಮೂರು ನಾಲ್ಕು ಸಾವಿರದಷ್ಟು ಸೈಟುಗಳನ್ನು ಬಡಜನರಿಗೆ ಹಾಗೂ ದುರ್ಬಲ ವರ್ಗದವರಿಗೆ ಹಂಚಿಕೆ ಮಾಡಿದ್ದಾರೆ. ಪ್ರತಿಯೊಂದು ಹಳ್ಳಿಯಲ್ಲಿ ಸೈಟುಗಳು ವಿತರಣೆಯಾಗಿರುವುದನ್ನು ನಾವು ಸ್ವತಃ ನೋಡಿಕೊಂಡು ಬಂದಿದ್ದೇವೆ. ಇದರಿಂದ ಜನತೆಯು ಕಷ್ಟಗಳು ಸುಧಾರಿಸುತ್ತವೆ ಎಂದು ತಿಳಿದಿದ್ದೇವೆ. ನಿಜ ವಾಗಿಯೂ ಇಂದು ಜನರಲ್ಲಿ ಹಿಂದೆಂದೂ ಆಗದಂತಹ ಸಾಧನೆಗಳು ನಮ್ಮ ಸರ ಕಾರದಿಂದ ಆಗುತ್ತಿದೆ ಎನ್ನುವುದನ್ನು ಅವರು ಅರಿಯುತ್ತಿದ್ದಾರೆ. ಆದರೆ ನಮ್ಮ ಸದಸ್ಯರಾದ ಶ್ರೀ ಪುಟ್ಟಸ್ವಾಮಯ್ಯನವರು ರೈತರ ಸ್ಥಿತಿ ಬಹಳ ಚಿಂತಾಜನಕ ವಾಗಿಬಿಟ್ಟಿದೆ ಎಂದು ಹೇಳಿದರು. ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ರೈತರಿಗೆ ಅನ್ಯಾಯ ಮಾಡಿರುವುದಾದರೂ ಏನು? ಅವರಿಗಾಗಿರುವ ತೊಂದರೆ ಗಳಾದರೂ ಏನು? ರೈತರಿಗೆ ಅನುಕೂಲವಾಗುವಂತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹಿಂದೆ ಇದ್ದ ಸರಕಾರದಲ್ಲಿ 25 ವರ್ಷಗಳಿಂದಲೂ ಮಾಡದೇ ಇದ್ದಂತಹ ಕೆಲಸಗಳನ್ನು ಕೇವಲ ಎರಡು ವರ್ಷಗಳಲ್ಲಿ ನಮ್ಮ ಸರಕಾರ ಬಂದು ಮಾಡಿರುವುದನ್ನು ನೋಡಿ ಜನತೆ ಸಂತೋಷ ಪಟ್ಟಿದ್ದಾರೆ. ಬೆಲೆ ಏರಿಕೆ ಬಗ್ಗೆ ತಿಳಿಸಿದರು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದರೆ ಇಷ್ಟು ಬೆಲೆಗಳು ಏರುತ್ತಿರಲಿಲ್ಲ. ಇದರ ಬಗ್ಗೆ ಕೂಡ ಸರ್ಕಾರ ಗಮನ ಕೊಟ್ಟು ಸರಿಪಡಿಸುತ್ತಿದೆ. ಸರಕಾರದಲ್ಲಿ ಇಂತಹ ಕೆಲಸ ಮಾಡುವಾಗ ಅಲ್ಲಲ್ಲಿ ದೋಷಗಳು ಬರಬಹುದು. ಅವನ್ನು ತಪ್ಪಿಸಲು ನಾವು ಹಾಗೂ ನೀವು ಎಲ್ಲರೂ ಕೂಡಿ ಮಾಡುವುದು ನಮ್ಮ ಕರ್ತವ್ಯ. ಮಾನ್ಯ ಶ್ರೀ ಪುಟ್ಟಸ್ವಾಮಯ್ಯ ನವರು ಅಲ್ಲಿ ಅವರ ಕಾರು ಬಗ್ಗೆ ಹೇಳಿ ಸರಕಾರ ಸರಿಯಾದ ರಕ್ಷಣೆ ಕೊಡಲಿಲ್ಲ ಎಂದರು. ಪ್ರತಿಯೊಂದಕ್ಕೂ ಸರಕಾರದ ಮೇಲೆ ನಾವು ನಿರತರಾಗಿರಬೇಕೇನು? ನಮ್ಮ ಕರ್ತವ್ಯ ಶಾಸಕರಾಗಿ ಇದರಲ್ಲೇನೂ ಇಲ್ಲವೇ? ಪ್ರತಿಯೊಂದಕ್ಕೂ ಸರ ಕಾರದ ಮೇಲೆ ಆರೋಪ ಮಾಡುವುದು ಸರಿಯಲ್ಲ. ಇದರ ಎಲ್ಲ ಸಾಧಕ ಬಾಧಕ ಗಳೇನು ಎನ್ನುವುದನ್ನು ನಾವು ತೀವ್ರವಾಗಿ ಯೋಚನೆ ಮಾಡಿ ಮಾಡಬೇಕಾಗಿದೆ. ಇವರ ಬಗ್ಗೆ ಸರಕಾರ ಕೂಡ ಸಾಕಷ್ಟು ನಿಗಾವಹಿಸಬೇಕು.

ಕೊನೆಯದಾಗಿ ಅರಣ್ಯದ ಬಗ್ಗೆ ಹೇಳಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಅರಣ್ಯಕ್ಕೆ ಸೇರಿದ ಸುಮಾರು 900 ಎಕರೆ ಭೂಮಿಯನ್ನು ಇಲ್ಲಿರುವ ಹರಿಜನರು ಹಾಗೂ ದುರ್ಬಲ ವರ್ಗದವರು ಇದನ್ನು ಉತ್ತು ವ್ಯವಸಾಯ ಮಾಡುತ್ತಿದ್ದಾರೆ.

ಈಗ ಇದನ್ನು ತಪ್ಪಿಸಿ ಅರಣ್ಯಕ್ಕೆ ಸೇರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಇಲ್ಲಿನ ಹರಿಜನ ವರ್ಗದವರಿಗೆ ತೊಂದರೆಯಾಗುತ್ತದೆ. ಇದನ್ನು ಅಲ್ಲಿರುವ ಬಡಜನರೇ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಅವರ ಹೆಸರಿಗೇ ಪಟ್ಟೆ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಆಡಳಿತದ ಕನ್ನಡ ಭಾಷೆ ಬಗ್ಗೆ ಏನೂ ಮಾಡಿಲ್ಲ ಎಂದರು. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರಿಗೂ ಸಂತೋಷವಾಗಿರಬಹುದು. ಈಚೆಗೆ ಕನ್ನಡವನ್ನು ಆಡಳಿತ ಭಾಷೆ, ಮಾಡಲು ಒಂದು ಉನ್ನತ ಮಟ್ಟದ ಕಮಿಟಿ ಮಾಡಿ ಇದರಲ್ಲಿ ಭಾಷಾ ಪರಿಣಿತರು ಹಾಗೂ ತಜ್ಞರನ್ನು ನೇಮಿಸಿದ್ದಾರೆ. ಇವರು ಸರಿಯಾಗಿ ವಿಚಾರ ಮಾಡಿ ರಾಜ್ಯದಲ್ಲಿ ಹಂತ ಹಂತವಾಗಿ ಕನ್ನಡವನ್ನು ಆಡಳಿತ ಭಾಷೆ, ಮಾಡಲು ಪ್ರಯತ್ನ ಮಾಡುತ್ತಾರೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI B. B. SAYANAK:—Madam Speaker, I rise to oppose the motion tabled by my hon. friend Mr. K. R. S. Naidu on the Governor's Address. In the year 1970 there was a war and then after two years there was drought situation. This year the seasonal conditions are good; there is plenty of rain and there is bumper crop. But the prices of essential commodities are double than last year. What is the reason for this? The Government should think why the prices are soaring like anything and their slogan is 'Garibi Hatao' whether they are eradicating poverty in the country.

Then the Government is recovering the levy from the agriculturists. I am of the opinion that it is the duty of the Government when the country is passing in a critical situation to collect the levy. But when the agriculturists have paid the levy and have not declared the stocks the Government is ceasing their paddy. They are also not keeping the paddy for their livelihood Is this justice? Whether these agriculturists are thieves or blackmarketers? They have purchased the fertilisers in the black market. Government have not supplied them the

(Sri B. B. Sayanak)

required fertilisers last year. The Government have not taken into consideration that the merchants are the black marketers; they have not arrested any of the merchants who are selling fertilisers in blackmarket. Some of the merchants are congressmen. They are adulterating fertilisers. The Deputy Commissioner, Belgaum had filed a case against one merchant. But that person happened to be a congressman and he approached the Government and hence no case has been filed against him. Agriculturists are the back bone of our country. The merchants are harassing the agriculturists by setting the fertilser in the black market. The Government also should not harass the agriculturists on minor technical grounds.

About the Krishna Water dispute, the Central Government had given some specific terms of reference and the three concerned parties Maharashtra, Karnataka and Andhra had submitted their objections, and ultimately the Tribunal has given the award. The Karnataka Government is not accepting the award on the ground that it has done some injustice to Karnataka Such being the case, why the Karnataka Government is insisting that the Marati people must accept the Mahajan Commission report in toto when there were no clear terms to the Commission and when the report is pervease and one-sided and unprincipled. I would like to ask this Government whether the State Reorganisation Commission's report or the shah Commission's report has been accepted in toto by the Central Government Shah Commission was appointed in respect of Punjab and it gave a verdict that Chandigarh should go to Haryana. But the Centre did not accept it. When any report of any Commission is not acceptable to the Central Government, why are you insisting that Mahajan Commission's report has to be accepted in toto. Is this justice? The Prime Minister and the Parliament is supreme. If the Parliament is going to take a decision

in this regard we the Maharastrian or Kannadigas must accept it.

Coming to the law and order situation, lot of atrocities have been committed in Karnataka and in border area. I saw the Governor so many times in Bangalore and in Belgaum and explained to him about the atrocities committed in Belgaum and in the border areas. But there is no reference in the Governor's Address regarding the atrocities committed in Belgaum or in the border areas. I would like to give one instance. There is one lady by name Gourabai Dharmabai, Jare who has nothing to do with politics or border dispute. She was arrested by the Police and was beaten with a stick during day time at 12.00 Noon, in the preserce of the big gathering and Police and she has given a complaint to the Divisional Commissioner, Belgaum. But no action has been taken so far. If such is the attitude of the Police in Belgaum, how could people live there. I can quote many such instances, but I do not want to take much time of the House There is a Police Raj in Belgaum at present.

In respect of Civil Hospital, Belgaum, there are already three buildings, and the Government is now constructing another building at an estimated cost of Rs. 15 lakhs. But, what is the condition of the hospital? There is no medicine, there is no exvgen cylinder, there are no calguts required in this hospital. When such is the condition of the Civil hospital what is the use of constructing another building by spending Rs. 15 lakhs? There are some doctors appointed as local - candidates. But they have not received their salary for more than 6 months. The doctors working as local candidates for more than 3 to 4 years have not been called for interview by the Public Service Commission, whereas those who have been working for one year have been called for an interview. Why this injustice on some local doctors, I request the Government to arrange to

(SRI B. B. SAYANAK)

pay the salaries of doctors, working as local candiates, for their survival immediately.

There is one lady Superintendent in the Civil Hospital by name Padaki. She is harassing the nurses. She had administered poison to one lady nurse, by name Mumataj who had to undergo treatment for 5 days, when she was unconcious for five days in Civil Hospital and she had filed a complaint to the Police officers, the Chief Minister of Karnataka, the Deputy Commissioner and the Superintendent of Police, Belgaum But no action has been taken so far. She has filed a private case in the Judicial Magistrate's Court. I request the Government to take serious action against this lady Superintendent.

Regarding the three language boards in the State Transport buses, there was an agitation on 23rd July 1973 and the Government ordered that three-lanugage boards must be put up in the State Transport buses. But during the time of agitation on border dispute, there were only two language boards, Kannada and English. I would like to ask the Government as to why three-language boards are not there when the Government had specifically ordered? May I know whether Marati people are not living in border areas?

The Karnataka State Transport buses ply from Belgaum to Bangalore on National Highway No 4 which is a nationalised one. But these buses are running empty whereas the private Tourist buses are always running with full capacity. I request the Government to stop the issue of permits to these private buses so that the State Transport buses could make profit. Further, I request the Government to make provision for accidental compensation in buses when there is an accident to air the family of the decaseal will get s. 1 lack. The Central Government has made an Act for this Accident,

In trains when there is an accident and a person dies his family will get a compensation of Rs. 50,000. I suggest that if a person dies in an accident in a bus, his family should be given Rs. 25,000 as compensation, and to that effect a provision be made.

Previously, in Belgaum Municipality there was a School-Board. After the abolition of the School Board the Marati, Urdu and Kannada schools have been taken over by the Government. There are no municipal buildings for Marathi schools, and the Government also is not constructing buildings for these schools.

There are no buildings for the Marathi boys with the result the classes are held under shift system. I want that such shift system to be stopped. I request the Government to construct school buildings for the Marathi boys.

Regarding the Belgaum Municipality. The extension given to the Belgaum Municipality is for one year. Though the maximum period allowed is one year but extension has been granted twice. One of the Municipal Councillors has gone to the High Court with a write petition. The High court of Karnataka has given a direction to the Government to hold elections within six months. But the Government has not declared whether they are going to hold elections within that period or not. Yesterday was the last date. According to my information, it appears the Government has appointed an Administrator. It is not known whether the Government is going to hold election or not. The maximum period of one year is over. I request the Government to hold election as per the directions of the High Court.

The Government has not taken up any developmental works in the borders areas for the last 17 years.

(SRI B. B. SAYANAK)

The Chief Minister, yesterday has stated that they are going to under take developmental works. I do not want to tire the House by giving instances where the Government has failed. There is one Mandoli village which is about 4 miles away from Belgaum. There was one bridge constructed by the erstwhile Kurundwad Senior State. That bridge has fallen down last year. The people of Mandoli which has a population of more than 5 000 have no road. We had met the Executive Engineer, the Divisional Commissioner, and the Deputy Commissioner for the construction of the bridge but so far they have not constructed the bridge for formed the road. This is the plight of the people of border areas.

There are some Cinema theatres run by the Marathi people in Belgaum. As long as Sriyuts Karthyken and Ramalingam were there as S. Ps. the position was allright as they were above-board. But after the arrival of Sri Bhat S. P., the Cinema owners are put to a lot of inconvenience as he is insisting upon them only to screen Kannada pictures and to stop Marathi Picture. This is a very sad state of affair. The Superintendent of Police must be informed not to harass the Marathi Cinema owners to screen only the Kannada pictures.

The Government has recently issued an Ordinance insisting upon the officials to learn Kannada language compulsorily. But unless and until this border issue is solves, I request the Government not to impose Kannada language on the Marathi people. It is said that unless a person learns Kannada, he is not eligible for promation Besides, no age-limit has been prescribed for the learning of Kannada. A person who is above 45 years, how can you expect him to learn Kannada? I request the Government to take a lenient view of Kannada language,

With these few words, I thank the Chair and conclude my speech.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಸಭಾಧ್ಯಕ್ಷರೇ ರಾಜ್ಯಪಾಲರು ನಮ್ಮ ಮುಂದೆ ಮಂಡಿಸಿರುವ ಅವರ ಭಾಷಣವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಅಪೇಕ್ಷೆ ಪಡುತ್ತೇನೆ. 1972—73—74ನೇ ಇಸವಿಗಳ ಎಂದರೆ 3 ವರ್ಷಗಳು ರಾಜ್ಯಪಾಲರ ಭಾಷಣದಲ್ಲಿರತಕ್ಕ ವಿಷಯಗಳನ್ನು ನಾನು ನೋಡಿದ್ದೇನೆ. ಮತ್ತು ಓದಿದ್ದೇನೆ. ಅದರಲ್ಲಿ ಅನೇಕ ಒಳ್ಳೆಯ ವಿಷಯಗಳು ಇವೆ. ಆದರೆ ಅದರಲ್ಲಿ ಅಡಕವಾಗಿರತಕ್ಕದ್ದು ಜನತೆಗೆ ಏನು ಮಾಡಬೇಕು ಎಂದು ಇಚ್ಛೆಪಡತಕ್ಕ ವಿಷಯಗಳನ್ನು ಇದರಲ್ಲಿ ಅಳವಡಿಸಿ ಅವುಗಳನ್ನು ಎಷ್ಟರಮಟ್ಟಿಗೆ ನಮ್ಮ ಯೋಜನೆಗಳಲ್ಲಿ ಅಳವಡಿಸಿ ಜಾರಿಯಲ್ಲಿ ತರುತ್ತಾರೆ ಎನ್ನುವ ಪ್ರಶ್ನೆಯನ್ನು ನಾವು ಸ್ವಲ್ಪ ಪರಿಶೀಲನೆ ಮಾಡಬೇಕಾಗಿದೆ. ಅದು ಪಕ್ಷ, ಕೇವಲ ಮಂತ್ರಿಗಳಿಂದ ಅಥವಾ ಶಾಸಕರಿಂದ ಈ ಕೆಲಸಗಳು ಆಗಬೇಕೇ ಅಥವಾ ಬೇರೆ ಜನಾಂಗ ಇದೆಯೇ ಎನ್ನುವ ವಿಷಯಗಳನ್ನು ಯೋಚನೆ ಮಾಡಬೇಕಾಗಿದೆ. ಕೆಲವು ಮಂತ್ರಿಗಳು ಶಾಸಕರು ಒಬ್ಬೊಬ್ಬರು ಈ ಮನೆಯಲ್ಲಿ ಮಾತನಾಡಿಕೊಳ್ಳತಕ್ಕ ಅನೇಕ ವಿಷಯಗಳು ನಮ್ಮ ಮುಂದೆ ಅನೇಕ ಸಂದರ್ಭದಲ್ಲಿ ಬರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ 1972ನೇ ಇಸವಿ ರಾಜ್ಯಪಾಲರ ಭಾಷಣದಲ್ಲಿ ಪ್ರತಿ ಜಿಲ್ಲೆಗೂ ಕೂಡ ಒಂದು ಸಾವಿರ ಜನ ಕಾರ್ಮಿಕರಿಗೆ 10 ತಿಂಗಳ ಕಾಲ ಕೆಲಸವನ್ನು ಒದಗಿಸತಕ್ಕ ಅಂಶ ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿದೆ. 19 ಜಿಲ್ಲೆಗಳಲ್ಲಿಯೂ ಈ ಕೆಲಸಗಳು ನಡೆದಿವೆಯೇ ? ಈ ಕೆಲಸಗಳನ್ನು ನಡೆಸತಕ್ಕ ಜವಾಬ್ದಾರಿ ಯಾರದು ? ಮಂತ್ರಿಗಳಿಂದ ಅಪ್ಪಣೆ ಹೋದ ಮೇಲೆ ಕೆಲಸ ನಡೆಸತಕ್ಕ ಜವಾಬ್ದಾರಿ ಅಧಿಕಾರಿಗಳಿಗೆ ಸಂಬಂಧ ಇಲ್ಲವೇ ? ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಒಬ್ಬರು ಕೂಡ ಚರ್ಚೆಯಲ್ಲಿ ಪ್ರಸ್ತಾಪ ಮಾಡಲಿಲ್ಲ. ಯಾವುದೇ ಒಂದು ರಾಜಕೀಯ ದೃಷ್ಟಿಯಿಂದ ಯಾರ ಮನಸ್ಸನ್ನೂ ನೋಯಿಸಬೇಕು ಎಂದು ನಾನು ಇದನ್ನು ಹೇಳುತ್ತಿಲ್ಲ. ಈ ಸಭೆಯಲ್ಲಿ ಆಗತಕ್ಕಂಥ ತೀರ್ಮಾನಗಳನ್ನು ಸಾಧಾರಣವಾಗಿ ಜನಗಳಿಗೆ ಮುಟ್ಟಿಸಿ ಅದರಿಂದ ಅವರು ಅನುಕೂಲಗಳನ್ನು ಪಡೆಯಬೇಕು ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅನೇಕ ವರ್ಷಗಳಿಂದ ಡೋಲಾಯಮಾನವಾಗಿದ್ದ ವಿಷಯಗಳು 3 ತಿಂಗಳ ಕಾಲದಲ್ಲಿ ನಡೆದಿವೆ. 15 ವರ್ಷಗಳಿಂದ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಡಬೇಕೇ ಬೇಡವೇ ಎಂದು ಚರ್ಚೆಯಾಗಿ ಕರ್ನಾಟಕ ಎಂದು ಹೆಸರು ಇಟ್ಟರೆ ತನ್ನ ಅಧಿಕಾರ ಉಳಿಯುತ್ತದೋ ಹೋಗುತ್ತದೋ ಎಂದು ಹಿಂದಿನ ಮುಖ್ಯಮಂತ್ರಿಗಳು ಹೆದರಿಕೊಂಡು ಕರ್ನಾಟಕ ಎಂದು ಹೆಸರಿಡುವುದಕ್ಕೆ ಹಿಂದೆ ಉಳಿದಿದ್ದರು. ಭೂಸುಧಾರಣಾ ಕಾನೂನನ್ನು ಕೂಡ ಜಾರಿಗೆ ತರದೆ ಹಾಗೆಯೇ ಇಟ್ಟಿದ್ದರು. ಎಲ್ಲವೂ ಕೂಡ ಈಗ ಬಂದಿವೆ. ಇವು

(ಶ್ರೀ ಕೆ ಶ್ರೀರಾಮುಲು)

ಗಳ ಫಲ ಬೇಗನೆ ಆಗಿದೆ. ಮಂತ್ರಿ ಮಂಡಲ ಮತ್ತು ನಾವು ಸೇರಿ ತೀರ್ಮಾನ ಮಾಡಿದಂತಹ ವಿಷಯಗಳು ಜನತೆಗೆ ಪ್ರಯೋಜನ ಮುಟ್ಟಿ ಅವುಗಳಿಂದ ಜನತೆಗೆ ದೊರೆಯಬೇಕು. ಈ ಕೆಲಸವನ್ನು ಮಾಡುವುದಕ್ಕೆ ಯಾರು ಹೊಣೆ ಎಂಬುದನ್ನು ಪರಿಶೀಲನೆ ಮಾಡಬೇಕಾದದ್ದು ನಮ್ಮ ಶಾಸಕರ ಕರ್ತವ್ಯ ಅಲ್ಲವೇ ಎಂಬುದನ್ನು ನೋಡಬೇಕಾಗಿದೆ. ಈ ದೃಷ್ಟಿಯಿಂದ ಈ ದೇಶದಲ್ಲಿ ಅನೇಕ ಪ್ರಶ್ನೆಗಳು ಉದ್ಭವ ವಾಗಿವೆ. ಅವುಗಳನ್ನು ಅನೇಕ ಸದಸ್ಯರು ಎತ್ತಿ ಹೇಳಿದ್ದಾರೆ. ಅವುಗಳೆಲ್ಲಕ್ಕೂ ಕೂಡ ಕೇವಲ ಮಂತ್ರಿಗಳು ಮತ್ತು ಶಾಸಕರು ಜವಾಬ್ದಾರರಾಗುವುದಾದರೆ ಸರ್ಕಾರಿ ರಂಗದಲ್ಲಿರತಕ್ಕ ಅಧಿಕಾರಿಗಳು ಹಾಗೂ ಇತರರು ಏತಕ್ಕೆ ಇರಬೇಕು ಎನ್ನುವ ಪ್ರಶ್ನೆ ಇದರಲ್ಲಿ ಅಡಕವಾಗಿದೆ ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯಾಂಗದ ಘಟನಾವಳಿಯ ಪ್ರಕಾರ ಯಾರಾದರೂ ಕೆಲಸ ಕಾರ್ಯಗಳನ್ನು ನಿಧಾನವಾಗಿ ಮಾಡಿದರೆ ಅವರಿಗೆ ಶಿಕ್ಷೆ ಕೊಡಬೇಕೆಂದು ಇದೆ. ಅಂಥ ಯಾವ ಒಂದು ಸಲಹೆ ಸಹ ವಿರೋಧ ಪಕ್ಷದ ಸದಸ್ಯರ ಪತಿಯಿಂದ ಬರಲಿಲ್ಲ. ಅದಕ್ಕೆ ಬದಲು ನೀವು ತಿರುಪತಿಗೆ ಬಂದು ಲಂಚ ತೆಗೆದುಕೊಂಡಿಲ್ಲ ವೆಂದು ಪ್ರಮಾಣ ಮಾಡಲು ಹೇಳುತ್ತಿದ್ದಾರೆ ಒಂದು ಪಕ್ಷ ಲಂಚ ತೆಗೆದು ಕೊಂಡವರು ತಿರುಪತಿಗೆ ಬಂದು ಪ್ರಮಾಣ ಮಾಡಿದರೆ, ಲಂಚ ತೆಗೆದುಕೊಳ್ಳು ವುದನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಿದೆಯೇ? 10 ವರ್ಷಗಳಿಂದ ಹಾಯಾಗಿ ಇದ್ದು ಕೊಂಡು ಅನೇಕ ಚಿತ್ರಮಂದಿರಗಳನ್ನು ಮತ್ತು ಇತರ ಆಸ್ತಿ ಗಳನ್ನು ಇಟ್ಟುಕೊಂಡಿರತಕ್ಕವರು ತಮ್ಮ ಮನಸ್ಸು ಮುಟ್ಟಿಕೊಂಡು ಹೇಳು ತ್ತಾರೆಯೇ ? ಅವರ ಪಕ್ಷದ ಅಧ್ಯಕ್ಷರಾಗಿರತಕ್ಕವರು ನಮಗೂ ಹಿರಿಯರು ನಿಮಗೂ ಹಿರಿಯರು. ಅವರು 6 ವರ್ಷಗಳ ಕಾಲ ನನಗೆ ಅಧಿಕಾರ ಕೊಟ್ಟರೆ ದೇಶವನ್ನೇ ಮುಂದೆ ತರುತ್ತೇನೆ ಎಂದು ಭಾಷಣ ಮಾಡಿದ್ದಾರೆ. ಅಷ್ಟು ವರ್ಷಗಳಕಾಲ ಆಡಳಿತದಲ್ಲಿದ್ದು ಏನೂ ಮಾಡದೆ ನಾವು 23 ತಿಂಗಳಲ್ಲಿ ಏನೂ ಸಾಧಿಸಿಲ್ಲವೆಂದು ಹೇಳುತ್ತಿದ್ದಾರೆ. ನಿಮ್ಮ ಪಕ್ಷದವರಿಗೆ ಯಾರಿಗಾದರೂ ಧೈರ್ಯ ಇದ್ದರೆ ನಾನು ಶಾಸಕನಾಗಿ ಏನಾದರೂ ಲಂಚ ತೆಗೆದು ಕೊಂಡಿದ್ದೇನೆ ಎಂದು ಹೇಳಲಿನೋಡೋಣ. ಹೇಳಲು ಧೈರ್ಯ ಇದ್ದವರು ಮುಂದೆ ಬನ್ನಿ ಮಾನ್ಯ ಪುಟ್ಟಸ್ವಾಮಿಯವರು ತಮ್ಮ ಭಾಷಣದಲ್ಲಿ ಮುಖ್ಯಮಂತ್ರಿಯವರು ಸಂಡೂರಿನಲ್ಲಿ ಏನು ಹೇಳಲಿಲ್ಲವೋ ಆ ಪದ ವನ್ನು ಉಪಯೋಗಿಸಿ ಇಲ್ಲಿ ನಮ್ಮ ಮನಸ್ಸಿಗೆ ನೋವು ಉಂಟು ಮಾಡಿದ್ದಾರೆ. ಮುಖ್ಯ ಮಂತ್ರಿಯವರು ಅಲ್ಲಿ ಏನಾದರೂ ಹೇಳಿದ್ದರೆ ಅದನ್ನು ಕೇಳುವ ಸ್ಥಳ ಬೇರೆಯೇ ಇದೆ. ಇಂದಿರಾಗಾಂಧಿಯಿಂದ ನಾಲಾಯಾಕ್ ಜನ ಆರಿಸಿ ಬಂದಿದ್ದಾರೆ ಎಂದು ಹೇಳುವ ಪದವನ್ನು ಏಕೆ ಹೇಳಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಮತ್ತು ನಮ್ಮ ಮಿತ್ರರು ಪತ್ರಿಕೆಗಳಲ್ಲಿ ಬಂದ ವಿಚಾರವನ್ನು ಓದಿ ಅದರ ಮೇಲೆ ಏನು ಆರ್ಗ್ಯುಮೆಂಟ್ಸ್ ಮಾಡುತ್ತಿದ್ದಾರೆ, I am sorry for that. ನಾಲಾಯಕ್ ಎಂಬುದು ಯಾವ ಪತ್ರಿಕೆಗಳಲ್ಲಿಯೂ ಬಂದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಹಾಗಿದ್ದರೆ ಇನ್ನು ನಾವು ಒಂದು ಟೇಪ್ ರೀಕಾರ್ಡರ್ ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಟೇಪ್ ರೀಕಾರ್ಡರ್ ನನ್ನ ಹತ್ತಿ ಇದೆ, ಬೇಕಾದರೆ ಬನ್ನಿ ತೋರಿಸುತ್ತೇನೆ

ಶ್ರೀ ಕೆ. ಶ್ರೀರಾಮುಲು :—ಮಾನ್ಯ ಪುಟ್ಟಸ್ವಾಮಿಯವರು ಈ ರೀತಿ ಮಾತನಾಡಬಾರದಾಗಿತ್ತು. ನಿಮ್ಮ ಅಧ್ಯಕ್ಷರಾದ ಅಶೋಕ ಮೆಹ್ತಾರವರೇ ಬುದ್ಧಿವಾದವನ್ನು ಹೇಳಿದ್ದಾರೆ ಇಂದಿನ ಪರಿಸ್ಥಿತಿಯಲ್ಲಿ ನಾವು ಅಧಿಕಾರದಲ್ಲಿದ್ದರೆ ಏನು ಮಾಡುತ್ತಿದ್ದೆವು ಎನ್ನುವ ಪ್ರಶ್ನೆ ಹಾಕಿದ್ದಾರೆ. ಈ ಸಮಯವನ್ನು ಉಪಯೋಗಿಸಿಕೊಂಡು ನೀವೂ ನಾವೂ ಮಾಡಬೇಕಾದ ಕರ್ತವ್ಯವನ್ನು ಮರೆಯಬಾರದು. ನಾವು ಏನಾದರೂ ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೆ ಹೊರಟಾಗ ನೀವು ಅದಕ್ಕೆ ಅಡಚಣೆ ಮಾಡುವುದಾದರೆ ಅದರಿಂದ ದೇಶಕ್ಕೆ ಏನು ಪ್ರಯೋಜನವಾಗುತ್ತದೆ ಯಾರಾದರೂ ಸದಸ್ಯರು ನೀವು ಇಂಥದ್ದು ಮಾಡಬಹುದಾಗಿತ್ತು ಅದನ್ನು ಮಾಡಿಲ್ಲ ಎನ್ನುವ ಸಲಹೆಯನ್ನು ಮಾಡಿಲ್ಲ ಅದು ಬರಬೇಕಾಗಿತ್ತು. ನೀವು ಮಾಡಿದ ಭೂಸುಧಾರಣೆ ಸರಿಯಿಲ್ಲ; ಅದನ್ನು ಈ ರೀತಿ ಮಾಡಬಹುದಾಗಿತ್ತು ಎಂದು ಯಾರೂ ಹೇಳಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಏನಿವೆ, ಅವನ್ನು ನೀವು ಮಾಡಿದ್ದೀರಾ ?

ಶ್ರೀ ಕೆ. ಶ್ರೀರಾಮುಲು :—ನಾನು ನಮ್ಮ ದೇಶದಲ್ಲಿ ಎಲ್ಲವೂ ತೃಪ್ತಿಕರವಾಗಿದೆ ಎಂದು ಮಾತನಾಡುತ್ತಾ ಇಲ್ಲ. ನೀವು ಹೇಳತಕ್ಕ ಎಲ್ಲಾ ವಾದವನ್ನು ನಾವು ಒಪ್ಪುವುದಕ್ಕೆ ತಯಾರಾಗಿಲ್ಲ. ನಾವು ದೇಶದಲ್ಲಿರತಕ್ಕಂತಹ ಎಲ್ಲಾ ಸಮಸ್ಯೆಯೂ ಪರಿಹಾರವಾಗುತ್ತದೆ ಅದು ಸಹ ನಮ್ಮಿಂದಲೇ ಎಂದು ತಿಳಿದುಕೊಂಡಿಲ್ಲ. ಅದಕ್ಕೆ ನಿಮ್ಮ ಸಹಕಾರವೂ ಬೇಕಾಗುತ್ತದೆ. ಆದರೆ ಈ ಸದನದಲ್ಲಿ ಆಡತಕ್ಕ ಮಾತುಗಳು ಗಂಭೀರವಾಗಿರಬೇಕು. ನಾವು ಈ ರೀತಿ

(ಶ್ರೀ ಕೆ. ಶ್ರೀರಾಮುಲು)

ಮಾತನಾಡಿದರೆ ಯಾರಿಗೆ ಇದರಿಂದ ಏಳಿಗೆಯಾಗುತ್ತದೆ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. 1971ರಲ್ಲಿ ರಾಜ್ಯಪಾಲರು ಏನು ಭಾಷಣದಲ್ಲಿ ಪ್ರಸ್ತಾಪ ಮಾಡಿದರು ಅದು 1973ರಲ್ಲಿ ಇಲ್ಲ. ಅವುಗಳು ಜಾರಿಗೆ ಬಂದಿವೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಅವಕಾಶ ನಮಗೆ ಇದೆ. ಆದರೆ ನಾವು ಸರ್ಕಾರದ ಮೇಲೆ ಯಾವುದೇ ತರದ ಒಂದು ಕೆಟ್ಟ ಅಭಿಪ್ರಾಯವನ್ನು ಬೆಳೆಯುವುದಕ್ಕೆ ಅವಕಾಶ ಕೊಡಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಮಿತ್ರರು ಇಲ್ಲಿ ನಮ್ಮನ್ನು ಟೀಕೆ ಮಾಡುವುದಕ್ಕೋಸ್ಕರ ಇಲ್ಲದ ಸಲ್ಲದ ವಿಷಯಗಳನ್ನು ಹೇಳುವುದಕ್ಕೆ ಹೊರಟರೆ ಹೇಗೆ? ಮಾನ್ಯ ದೇವೇಗೌಡರು ಹಳೆಯ ತೂತು ಆದ ಟೈಯರಿಗೆ ಗಾಳಿ ಹೊಡೆದು ಆಡಳಿತ ನಡೆಸುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ದೇಶದ ಜನತೆ ನಮ್ಮ ಕೈಯಲ್ಲಿ ಕೊಟ್ಟದ್ದು ಹಳೆಯ ಟಯರ್ ಅಲ್ಲ; ಅದು ಹೊಸ ಟಯರ್. 25 ವರ್ಷಗಳ ಕಾಲ ಆ ಟಯರನ್ನು ಪೂರ್ತಿಯಾಗಿ ಉಪಯೋಗಿಸಿದವರು ನೀವು.

MADAM SPEAKER :— Before the House adjourns I have to intimate the decision of the Business Advisory Committee to the House according to the decision of the committee the discussion on the Motion of Thanks will continue tomorrow instead of taking up the non-official business. Now the House stands adjourned to meet tomorrow at 9 A. M.

The House adjourned at Six of the Clock to meet again at Nine of the Clock on Saturday the 2nd March 1974.

ANNEXURE I

THE KARNATAK AND MYSORE UNIVERSITIES (AMENDMENT) BILL, 1974

(L. A. BILL No. 3 OF 1974)

A Bill further to amend the Karnatak University Act, 1949 and the Mysore University Act, 1956.